
ಕಲ್ಯಾಣ ಕಿರಣ

ಜುಲೈ - 2001 ಶ್ರೀ ಬೆಲೆ : ರೂ. 5-00





ಹುಬ್ಬಳ್ಳಿ ನವನಗರದಲ್ಲಿ ನಡೆದ ಪ್ರವಚನ ಮುಕ್ತಾಯ ಸಮಾರಂಭದ ಉದ್ಘಾಟನೆ



ಕರ್ನಾಟಕ ರಾಜ್ಯ ರಾಷ್ಟ್ರೀಯ ಬಸವದಳದ ಅಧ್ಯಕ್ಷರಾದ
ಶರಣ. ವೀರಣ್ಣ ಕೊರ್ಲಹಳ್ಳಿ ಪ್ರಾಸ್ತಾವಿಕವಾಗಿ ಮಾತನಾಡುತ್ತಿರುವುದು

ಓಂ ಶ್ರೀ ಗುರು ಬಸವಲಿಂಗಾಯ ನಮಃ
86666

ಸಂಪುಟ 31	ಬಸವ ಶಕೆ 868	ಆಜೀವ ಸದಸ್ಯತ್ವ 500 ರೂ
ಸಂಚಿಕೆ 7	ಜುಲೈ-೨೦೦೧	ವಾರ್ಷಿಕ ಚಂದಾ 50/- ರೂ

ಬಸವಣ್ಣನ ನೆನೆಯೋಣ

ಶ್ರೀಕಾರ ರೂಪಾಗಿ ಓಂಕಾರ ಉಸಿರಾಗಿ
ಲೋಕಕೆ ಗುರುವಾಗಿ ಬೆಳಕನು ತೋರುವ,
ಬಸವಣ್ಣನ ನೆನೆಯೋಣ ಶ್ರೀ ಗುರು ಬಸವಣ್ಣನ ನೆನೆಯೋಣ ॥
ಸೃಷ್ಟಿಕರ್ತನು ತಾನು ಪರಮ ಕರುಣೆಯ ತೋರಿ
ಜಗದ ಉದ್ಧಾರಕ್ಕೆ ಕಳುಹಿದ ಶ್ರೀಗುರು ॥ ಬಸವಣ್ಣನ ನೆನೆಯೋಣ ....॥ ೧॥
ಬಾಗೇವಾಡಿಯೊಳುದಿಸಿ ಕಲ್ಯಾಣದೊಳು ನೆಲೆಸಿ
ಕೂಡಲ ಸಂಗಮದೊಳು ಬಯಲಾದ ಶ್ರೀಗುರು ಬ. ನೆ.॥ ೨॥
ಅಜ್ಞಾನ ಸಾಗರದಿ ತೆರೆ ಕೊಬ್ಬಿ ಮೊರೆವಾಗ
ಸುಜ್ಞಾನ ನಾವೆಯನು ತಂದೆಮ್ಮ ದಾಟಿಸುವ ಬ. ನೆ.॥ ೩॥
ಮರ್ತ್ಯವೇ ಶಿವಲೋಕ ಕಾಯಕವೇ ಕೈಲಾಸ
ಎಂದು ಸಾರಿ ಇಳೆಯ ಬಾಳಹಿರಿಮೆಯ ತೋರ್ದ ಬ. ನೆ.॥ ೪॥
ಅರಿದೊಡೆ ಶರಣನು ಮರೆದೊಡೆ ಮಾನವ
ಮರೆಯದೆ ಪೂಜಿಸು ಸೃಷ್ಟಿಕರ್ತನ ಎಂದ ಬ. ನೆ.॥ ೫॥
ಕಾಯ ವೀಣೆಯ ಮಾಡಿ ನರವ ತಂತಿಯ ಮಾಡಿ
ಉರದಿಂದ ಹಾಡುತ ದೇವನನು ಒಲಿಸಿದ ಬ. ನೆ.॥ ೬॥
ನರವಿಂಧ್ಯದೊಳಗೆ ಹುಲುಗಿಳಿಯು ನೀನಾಗು
ಭಕುತಿಯ ಪಂಜರದಿ ಅಭಯವ ಪಡೆಯೆಂದ ಬ. ನೆ.॥ ೭॥
ಮರ್ತ್ಯಲೋಕವಿದುವು ಕರ್ತನ ಕಮ್ಮಟವು
ಇಲ್ಲಿ ಸಲ್ಲುವವರು ಅವನಲ್ಲೂ ಸಲುವರೆಂದ ಬ. ನೆ.॥ ೮॥
ಇವನಾರು ಇವನಾರು ಭೇದವನೆಣಿಸದೆ
ಎಲ್ಲರು ನನ್ನವರು ಎನ್ನಲು ಕಲಿಸಿರುವ ಬ. ನೆ.॥ ೯॥
ಭಕ್ತಿಯ ಭೂಮಿಯೊಳು ಅರಿವಿನ ಮಾಮರದಿ
ನಿಷ್ಪತ್ತಿ ಹಣ್ಣಾಗಿ ದೇವನಿಗೆ ಎಡೆಯಾದ ಬ. ನೆ.॥ ೧೦॥
ಆನಂದ ವರ್ಷದಿ ಧರೆಗಿಳಿದು ತಾ ಬಂದು
ನಳನಾಮ ವರ್ಷದಿ ದೇವನೊಳು ಬೆರೆದಂಥ ಬ. ನೆ.॥ ೧೧॥
ಶರಣ ಗಣ ಮಣಿಯಾಗಿ ಶರಣ ಗುಣ ನಿಧಿಯಾಗಿ
ಶರಣಾಗತ ರಕ್ಷಕ ಕಾರಣಿಕ ಗುರುವಾದ ಬ. ನೆ.॥ ೧೨॥
ಮುಕ್ತಿದಾತನ ತೋರಿ ಮುಕ್ತಿದಾಯಕನಾದ
ಸಚ್ಚಿದಾನಂದನ ಮುದ್ದುಕಂದನಾದ ಬ. ನೆ.॥ ೧೩॥

-ಬಸವಾತ್ಮಜೆ

Web site : www.Lingayathism.com

★ ಕಲ್ಯಾಣ ಕಿರಣ ★

ಸಂಪುಟ 31 | ಬಸವ ಶಕೆ 868 | ಆಜೀವ ಸದಸ್ಯತ್ವ 500 ರೂ

ಸಂಚಿಕೆ 7 | ಜುಲೈ-2001 | ವಾರ್ಷಿಕ ಚಂದಾ 50 ರೂ

ಮುಖ ಪುಟ : ಸುಪ್ರಸಿದ್ಧ 'ಸುಧಾ' ವಾರಪತ್ರಿಕೆಯ
ಬಸವ ಜಯಂತಿ ಸಂಚಿಕೆ(ಏಪ್ರಿಲ್ 20, 1969)ಯ ಮುಖಪುಟದಲ್ಲಿ ಮುದ್ರಣಗೊಂಡ ಚಿತ್ರ

E-mail : vishwakalyana@lingayathism.com

KALYANA KIRANA- Reg. No. 19988/70. Monthly Magazine printed and published by B.Shambulingaiah, at Prabhudeva Printing Press, Basava Gangotri, Kumbalgodu, Bangalore-560074. Phone : 8437234

ತ್ವರಿತ ವ್ಯವಹಾರಕ್ಕೆ ಬಸವ ಮಂಟಪದ ವಿಳಾಸಕ್ಕೆ ಬರೆಯಿರಿ :
ದೂರವಾಣಿ : 3325335 / 3322790

ಬಸವ ಮಂಟಪ, 2035
20ನೆಯ ಮುಖ್ಯರಸ್ತೆ, ಎರಡನೆಯ ಬ್ಲಾಕ್
ರಾಜಾಜಿನಗರ, ಬೆಂಗಳೂರು-560010

ಅಕ್ಷರ ಜೋಡಣೆ ಬಸವಶ್ರೀ

ಪುಟ ವಿನ್ಯಾಸ : ರಮೇಶ್ ಲಿಂಗಾಯತ

|| ಓಂ ಶ್ರೀ ಗುರು ಬಸವಲಿಂಗಾಯ ನಮಃ ||

86666



ಬೆಂಗಳೂರು ನಗರದ ಸರ್ ಪುಟ್ಟಣ್ಣಚೆಟ್ಟಿ ಪುರಭವನದಲ್ಲಿ ವಿಶ್ವಗುರು ಬಸವಣ್ಣನವರ 806ನೆಯ ಲಿಂಗೈಕ್ಯ ದಿನಾಚರಣೆ

ಬುಧವಾರ (ಚನ್ನವಾರ) ದಿ. 25-7-2001ರಂದು

ಶರಣ ಬಂಧುಗಳಲ್ಲಿ ಹೃತ್ಪೂರ್ವಕ ಬಿನ್ನಹ,

ವಿಶ್ವಗುರು ಬಸವಣ್ಣನವರು ಆನಂದನಾಮ ಸಂವತ್ಸರದ ವೈಶಾಖ ಮಾಸದ ಅಕ್ಷಯ ತೃತೀಯಾದಂದು ರೋಹಿಣಿ ನಕ್ಷತ್ರದಲ್ಲಿ ಜನಿಸಿ (ಕ್ರಿ.ಶ. 1134) 62 ವರ್ಷ 3 ತಿಂಗಳು 2 ದಿವಸಗಳ ಕಾಲ ಇಳೆಯ ಮೇಲಿದ್ದು ನಳನಾಮ ಸಂವತ್ಸರದ ಶ್ರಾವಣ ಶುದ್ಧ ಪಂಚಮಿ ಮಂಗಳವಾರದಂದು ದಿ. 30-7-1196ರಂದು ಉರಿಯುಂಡ ಕರ್ಪುರದಂತೆ, ಸಮುದ್ರವನ್ನು ಬೆರೆತ ನದಿಯಂತೆ ಲಿಂಗೈಕ್ಯರಾಗಿ ದೇವನಲ್ಲಿ ಒಂದಾದರು. ಅವರು ಬಯಲಾದಂದಿನಿಂದಲೂ ಆ ದಿನವು "**ಬಸವ ಪಂಚಮಿ**" ಎಂದು ಖ್ಯಾತಿವೆತ್ತಿದೆ. ಈ ವರ್ಷ 806ನೆಯ ಲಿಂಗೈಕ್ಯ ದಿನವು ಬುಧವಾರ (ಚನ್ನವಾರ) ದಿ. 25-7-2001ದಂದು ಒದಗಿ ಬಂದಿದೆ.

ಸಾಮೂಹಿಕ ಇಷ್ಟಲಿಂಗಾರ್ಚನೆ

ಧರ್ಮಪಿತ ಬಸವಣ್ಣನವರು ಕೊಟ್ಟ ಅಮೂಲ್ಯವಾದ ಒಂದು ಧಾರ್ಮಿಕ ಲಾಂಛನ ಇಷ್ಟಲಿಂಗ. ಏಕೇಶ್ವರವಾದವನ್ನು ಪ್ರತಿಪಾದಿಸಿದ ಮಹಾಪುರುಷ ಬಸವಣ್ಣನವರು ಇಷ್ಟಲಿಂಗದ ಮೂಲಕ ಏಕದೇವೋಪಾಸನೆಗೆ ಅನುವು ಮಾಡಿಕೊಟ್ಟರು. ನಿರಾಕಾರನಾದ ದೇವನಿಗೆ ಮನುಷ್ಯರ, ಪಶುಪಕ್ಷಿಗಳ, ಕ್ರಿಮಿ ಕೀಟಗಳ ಆಕಾರ ಕೊಡುವುದು ಸೃಷ್ಟಿಕರ್ತ ಲಿಂಗದೇವನಿಗೆ ಮಾಡುವ ಅಪಚಾರವಾಗುವುದೆಂದು ಸಾರಿ, ವಿಶ್ವದಾಕಾರದಲ್ಲಿ ದೇವನನ್ನು ಪೂಜಿಸಲು ಕಲಿಸಿದರು. ಇಷ್ಟಲಿಂಗವನ್ನು ಗಣಲಾಂಛನವಾಗಿ ಮಾಡಿ, ಜಾತಿ-ವರ್ಣ-ವರ್ಗರಹಿತ ಧರ್ಮ ಸಹಿತ ಸಮಾಜ ರಚನೆಗೆ ಅನುಕೂಲವಾಗುವ ಲಿಂಗಾಯತ ಧರ್ಮವನ್ನು ಕೊಟ್ಟರು.

ಪವಿತ್ರ ಹಬ್ಬ ಬಸವ ಪಂಚಮಿಯಂದು ಸಾಮೂಹಿಕ ಇಷ್ಟಲಿಂಗಾರ್ಚನೆಯನ್ನು ಶರಣ ಬಂಧುಗಳು ಮಾಡುವುದು ಕಡ್ಡಾಯವಾದ ಕರ್ತವ್ಯವಾಗಿರುವುದು.

ಆದ್ದರಿಂದ ವಿಶ್ವಕಲ್ಯಾಣ ಮಿಷನ್ ಸಂಸ್ಥೆಯು ಬುಧವಾರ (ಚನ್ನವಾರ) ದಿ. 25-7-2001 ಬೆಳಿಗ್ಗೆ 10 ಗಂಟೆಗೆ ಬಸವ ಧರ್ಮ ಪೀಠಾಧ್ಯಕ್ಷೆ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿಯಲ್ಲಿ ಸಾಮೂಹಿಕ ಇಷ್ಟಲಿಂಗಾರ್ಚನೆ, ಉಪನ್ಯಾಸ ಮತ್ತು ನಂತರ ಗಣಪ್ರಸಾದ(ಭೋಜನ)ವನ್ನು ಏರ್ಪಡಿಸಲಾಗಿದೆ. ಆದ್ದರಿಂದ ಎಲ್ಲಾ ಶರಣ ಬಂಧುಗಳು ಕುಟುಂಬ ಪರಿವಾರ ಸಹಿತವಾಗಿ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವುದೇ ಅಲ್ಲದೆ ತನು-ಮನ-ಧನಗಳಿಂದ ಸಹಕರಿಸಬೇಕು ಮತ್ತು ಸಾಮೂಹಿಕ ಗಣ ಪ್ರಸಾದಕ್ಕಾಗಿ ಉದಾರವಾದ ದೇಣಿಗೆಯನ್ನು ಕೊಡಬೇಕೆಂದು ಸೂಚಿಸುತ್ತೇವೆ.

ಶರಣರ ಬರವೆಮಗೆ ಪ್ರಾಣ ಜೀವಾಳ

ಶರಣ ಎನ್. ಪುಟ್ಟರುದ್ರ
ಅಧ್ಯಕ್ಷರು, ಲಿಂಗಾಯತ ಧರ್ಮ ಮಹಾಸಭಾ

ಪೂಜ್ಯ ಶ್ರೀ ಸದ್ಗುರು
ಅಲ್ಲಮಪ್ರಭು ಸ್ವಾಮಿಗಳು

806ನೆಯ ಬಸವ ಪಂಚಮಿ ಕಾರ್ಯಕ್ರಮ

ಸ್ಥಳ : ಪುಟ್ಟಣ್ಣ ಚೆಟ್ಟಿ ಟೌನ್‌ಹಾಲ್, ಬುಧವಾರ(ಚನ್ನವಾರ) ದಿ.25-7-2001

ಸನ್ನಿಧಿ ಮತ್ತು ಪೂಜಾ ನಿರ್ವಹಣೆ : ಪೂಜ್ಯ ಶ್ರೀಮನ್ ನಿರಂಜನ
ಮಹಾಜಗದ್ಗುರು ಮಾತೆ ಮಹಾದೇವಿ
ಪೀಠಾಧ್ಯಕ್ಷೆ, ಬಸವ ಧರ್ಮ ಪೀಠ, ಕೂಡಲಸಂಗಮ

★ ಸಾಮೂಹಿಕ ಇಷ್ಟಲಿಂಗಾರ್ಚನೆ - ಬೆಳಿಗ್ಗೆ 10 ರಿಂದ

★ ಚಿಂತನಗೋಷ್ಠಿ - ಚಿಂತನಗೋಷ್ಠಿಯಲ್ಲಿ ಚರ್ಚಿಸಲಾಗುವ ವಿಷಯಗಳು

1. ಲಿಂಗೈಕ್ಯ ಎಂದರೇನು ? 2. ಬಸವಣ್ಣನವರ ಸಾವು ಹೇಗಾಯಿತು ? 3. ಧರ್ಮಗುರು ಬಸವಣ್ಣನವರಿಗೆ ಇಬ್ಬರು ಪತ್ನಿಯರೆ ? 4. ಧರ್ಮಗುರು ಬಸವಣ್ಣನವರು ಹುಟ್ಟು ಬ್ರಾಹ್ಮಣರೇ ಅಥವಾ ವೀರಶೈವರೆ?

★ ಉಪನ್ಯಾಸ ಕಾರ್ಯಕ್ರಮ ಮತ್ತು ಪುಸ್ತಕ ಬಿಡುಗಡೆ- ಬೆಳಿಗ್ಗೆ 11-30

<u>ಬಿಡುಗಡೆಯಾಗಲಿರುವ ಪುಸ್ತಕಗಳು</u>

1. ಗಣಗೀತೆಗಳು (ಸಮೂಹ ಗೀತೆಗಳು)
2. ದೃಷ್ಟಾಂತ ಸರಸಿ (ಹಿಂದಿ)
3. ಶರಣಾಲಯ (ಗದ್ದುಗೆ)ಗಳಲ್ಲಿ ಪೂಜೆಯ ವಿಧಿವಿಧಾನ
4. ಶರಣ ದರ್ಶನ
5. ಅಲ್ಲಮ ಪ್ರಭುದೇವರ ನೂರೆಂಟು ವಚನಗಳು
6. ಇಷ್ಟಲಿಂಗ ನಿಷ್ಠೆಯ ವಚನಗಳು

★ ಗಣ ಪ್ರಸಾದ 2 ರಿಂದ 3 ಗಂಟೆ

★ ಚಿಂತನಗೋಷ್ಠಿ - ಮಧ್ಯಾಹ್ನ 3-30ರಿಂದ 5-00ಗಂಟೆ

★ ಸಾಂಸ್ಕೃತಿಕ ಕಾರ್ಯಕ್ರಮ ಸಂಜೆ 5 ರಿಂದ 6

- ಬಸವ ಸ್ತುತಿ ಗೀತೆ ಮತ್ತು ವಚನಗಳ ನೃತ್ಯಾಭಿನಯ

ಬಸವ ಪಂಚಮಿಯ ವಿಶೇಷ ದಾಸೋಹಿಗಳು

ಶರಣ. ಜಿ.ಎನ್.ಮುನಿಯಪ್ಪ ಮತ್ತು ಸಹೋದರರು, ಬೆಂಗಳೂರು
ಶರಣ. ಎಸ್.ಸಿ. ಪುಟ್ಟಪ್ಪ, ನಗರ್ತರ ಪೇಟೆ, ಬೆಂಗಳೂರು
ಶರಣೆ. ಶಕುಂತಲಾ ಮತ್ತು ಶರಣ. ಎಸ್.ಪುಟ್ಟಸಿದ್ದಪ್ಪ, ಬೆಂಗಳೂರು
ಶರಣ. ಪುಷ್ಪಾ ಮತ್ತು ಶರಣ. ಸಿದ್ದರಾಮಪ್ಪ —ಪಾಟೀಲ್, ಬೆಂಗಳೂರು
ಶರಣ. ಬಿ.ಎಸ್. ಗೌಡ, ಬೆಂಗಳೂರು
ಮತ್ತು ಇತರರು

ವಿ.ಸೂ :- ಆಹ್ವಾನಿತ ಅತಿಥಿಗಳ ಹೆಸರುಗಳನ್ನೊಳಗೊಂಡ ವಿಶೇಷ ಕಾರ್ಯಕ್ರಮ ಕರಪತ್ರವನ್ನು ನಂತರ ಮುದ್ರಿಸಲಾಗುವುದು.

ಬಸವ ಪಂಚಮಿಯ ಪವಿತ್ರ ದಿನದಂದು ಸಾರ್ವತ್ರಿಕ ರಜೆ ಇಲ್ಲದಿದ್ದರೂ ಪವಿತ್ರ ಕರ್ತವ್ಯವೆಂದು ಶರಣ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು, ಕಾರ್ಯಕ್ರಮ ನಿರ್ವಹಣೆಗಾಗಿ ಉದಾರವಾದ ದೇಣಿಗೆ ನೀಡಬೇಕೆಂದು ಕೋರುತ್ತೇವೆ.

ವ್ಯವಸ್ಥಾಪಕರು : ವಿಶ್ವಕಲ್ಯಾಣ ಮಿಷನ್(ರಿ.), ಬಸವ ಮಂಟಪ, 2035, 20ನೇ ಮುಖ್ಯರಸ್ತೆ ರಾಜಾಜಿನಗರ 2ನೇ ಬ್ಲಾಕ್, ಬೆಂಗಳೂರು-560010. ದೂರವಾಣಿ : 3325335/3322790

ಪವಿತ್ರ ಮಾಸ ಆಚರಣೆ ಮತ್ತು ಬಸವ ಪಂಚಮಿ ವ್ರತ

ಬಸವ ಗುರು ಸಂಸ್ಥಾಪಿತ ಲಿಂಗಾಯತ ಧರ್ಮದಲ್ಲಿ ಯಾವ ದಿನವೂ ಶುಭವಲ್ಲ ಅಶುಭವಲ್ಲ; ಪವಿತ್ರವಲ್ಲ ಅಪವಿತ್ರವೂ ಅಲ್ಲ. ವ್ಯಕ್ತಿಯು ಮಾಡುವ ಕ್ರಿಯೆಗಳಿಂದ ಸಮಯವು ಶುಭ-ಅಶುಭ ಎನ್ನಿಸಿಕೊಳ್ಳುವದು. ಒಂದು ನಿಯಮಕ್ಕೆ, ಶಿಸ್ತಿಗೆ ಬದ್ಧರಾಗಲು ಧಾರ್ಮಿಕರಿಗೆ ಕೆಲವೊಂದು ಆಚರಣೆಗಳು ಅಗತ್ಯ. ಆ ದೃಷ್ಟಿಯಿಂದ ಶ್ರಾವಣ ಮಾಸವು ಧಾರ್ಮಿಕವಾಗಿ ಪವಿತ್ರ ಮಾಸ (ಮುಸ್ಲೀಮರಿಗೆ ರಂಜಾನ್ ಇದ್ದಂತೆ) ಎಂಬ ನಂಬಿಕೆ ಲಿಂಗಾಯತ ಸಮಾಜದಲ್ಲಿ ರೂಢಿಗೊಂಡಿದೆ. ಇದಕ್ಕೆ ಇನ್ನೊಂದು ಕಾರಣವೂ-ಗುರು ಬಸವಣ್ಣನವರು ಲಿಂಗೈಕ್ಯರಾದುದು ಶ್ರಾವಣ ಮಾಸದಲ್ಲಿ ಶುದ್ಧ ಪಂಚಮಿಯಂದು - ಎಂಬುದು ಇರಬಹುದು. ಆದ್ದರಿಂದ ಬಸವ ಪಥಿಕರು ಶ್ರಾವಣ ಶುದ್ಧ ಪ್ರತಿಪದೆಯಿಂದ ಭಾದ್ರಪದ ಚೌತಿಯವರೆಗೆ 33 ದಿವಸಗಳ ಕಾಲ ನಿತ್ಯವೂ ಬೆಳಿಗ್ಗೆ ಸಂಜೆ ೨ ಸಲ ಇಷ್ಟಲಿಂಗಾರ್ಚನೆ, ಬಸವ ಗುರು ಪೂಜೆ, ವಚನ ಸಾಹಿತ್ಯ ಪಾರಾಯಣ-ಪಠಣ (ಸೂಕ್ತ ಜ್ಞಾನವು ಲಭ್ಯವಾಗುತ್ತಿದ್ದರೆ ಪ್ರವಚನ ಶ್ರವಣ) ಮಾಡಬೇಕು. ಈ ಅವಧಿಯಲ್ಲಿ ಅಧ್ಯಾತ್ಮಿಕ ಸಾಧನೆಗೆ ಹೆಚ್ಚು ಸಮಯ ಕೊಡುವ ಪರಿಪಾಠ ಬೆಳೆಸಿಕೊಳ್ಳಬೇಕು.

ವಚನ ಸಾಹಿತ್ಯದ ಜ್ಞಾನವಿಲ್ಲದೆ ಅಜ್ಞಾನಿಗಳಾಗಿ ವರ್ತಿಸಿ ಹಲವಾರು ದೇವತೆಗಳ ಪೂಜೆ ಮಾಡುವುದನ್ನು ತೊರೆದು ಏಕದೇವೋಪಾಸನೆ, ಏಕಗುರೂಪಾಸನೆ ಅಳವಡಿಸಿಕೊಳ್ಳುವುದು ಅಗತ್ಯವಿದೆ. ಶ್ರಾವಣದಲ್ಲಿ ಮಂಗಳಗೌರಿ ಹಬ್ಬ, ನಾಗಪಂಚಮಿ ಆಚರಿಸಬಾರದು. ನಾಗರ ಕಲ್ಲಿಗಾಗಲೀ, ಹುತ್ತಕ್ಕಾಗಲೀ ಹಾಲೆರೆಯುವ ಮೂಢತನ ಬಿಡಬೇಕು. ಹೊಸದಾಗಿ ವಿವಾಹವಾದವರು ಶುಭಾಕಾಂಕ್ಷಿಗಳಾಗಿ ಮಂಗಳಗೌರಿ ಪೂಜೆಯ ಬದಲು ಸತ್ ಸಂಕಲ್ಪದೊಡನೆ ಧರ್ಮಪಿತ ಬಸವಣ್ಣನವರ ಪೂಜಾವ್ರತವನ್ನೇ ಮಾಡಬೇಕು.

ಬಸವ ಪಂಚಮಿ ವ್ರತ

ಶ್ರೀ ಗುರು ಬಸವಣ್ಣನವರು ಲಿಂಗೈಕ್ಯರಾದುದು ನಳನಾಮ ಸಂವತ್ಸರದ ಶ್ರಾವಣ ಶುದ್ಧ ಪಂಚಮಿಯಂದು. (30-7-1196) ಆದ್ದರಿಂದ ಬಸವ ಪಂಚಮಿ ವ್ರತವನ್ನು ಸದ್ಭಕ್ತರು ಕೈಗೊಳ್ಳುವುದು ಒಳ್ಳೆಯದು. ಶ್ರಾವಣ ಅಮವಾಸ್ಯೆಯ ಮರುದಿವಸ, ನಡುಮನೆಯಲ್ಲಿ ಒಂದು ಮಂಟಪ ಕಟ್ಟಿ, ಅದರಲ್ಲಿ ಧರ್ಮಪಿತ ಬಸವಣ್ಣನವರ ಭಾವಚಿತ್ರ ಇಟ್ಟು ಅದನ್ನು ಮತ್ತು ಮಂಟಪವನ್ನು ಸುಂದರವಾಗಿ ಅಲಂಕರಿಸಬೇಕು. ಬೆಳಿಗ್ಗೆ ಮತ್ತು ಸಂಜೆ ಸ್ನಾನ ಮತ್ತು ಇಷ್ಟಲಿಂಗಾರ್ಚನೆ ಮಾಡಿ, ಬಸವ ಗುರುಪೂಜೆಯನ್ನು ಮಾಡಬೇಕು. ಪ್ರತಿಪದೆಯ ದಿನ ಬೆಳಿಗ್ಗೆ ಪೂರ್ತಿ ಪೂಜಾವ್ರತವನ್ನು ಮಾಡಬೇಕು. ಉಳಿದ ದಿನ ಬೆಳಿಗ್ಗೆ-ಸಂಜೆ 108 ಬಸವಲಿಂಗ ಮಂತ್ರ ಪಠಣ ಮಾಡಿ, ಆರು ದಿವಸಗಳ ಅವಧಿಯಲ್ಲಿ ಪ್ರತಿನಿತ್ಯ ಬಸವಣ್ಣನವರ 108 ವಚನಗಳನ್ನು ಪಾರಾಯಣ-ಪಠಣ ಮಾಡಬೇಕು. ಬಸವ ಪಂಚಮಿ ದಿನ ತಮ್ಮ ಮನೆಯಲ್ಲಿ ಮಾತ್ರವಲ್ಲ ಸಾಮೂಹಿಕವಾಗಿ ನಡೆಯುವ ಶರಣ-ಸಮಾಗಮದಲ್ಲಿ ಪಾಲ್ಗೊಂಡು ಸಾಮೂಹಿಕ ಇಷ್ಟಲಿಂಗಾರ್ಚನೆಯಲ್ಲಿ ಭಾಗಿಗಳಾಗಬೇಕು.

ಬಸವ ಪಂಚಮಿ ಮರುದಿನ ತಾಯಿ ನೀಲಾಂಬಿಕೆ ಲಿಂಗೈಕ್ಯಳಾದ ನೀಲಮ್ಮ ಷಷ್ಠಿಯ ದಿನ. ಅಂದು ಸಂಜೆಗೆ ೧೨ ಪೂಜೆ-ಪಾರಾಯಣ ಪೂರ್ತಿಯಾಗುತ್ತದೆ. ಶ್ರಾವಣ ಶುದ್ಧ ಷಷ್ಠಿಯಂದು ಸಂಜೆ ತಮ್ಮ ಬಂಧು-ಮಿತ್ರರು, ಓಣಿಯ ಜನರನ್ನು ಆಹ್ವಾನಿಸಿ ಮಹಾಮಂಗಲ ಮಾಡಿ ಎಲ್ಲರಿಗೂ ಪ್ರಸಾದ ವಿತರಣೆ ಮಾಡಬೇಕು. ದೊಡ್ಡ ಪ್ರಮಾಣದಲ್ಲೇ ಪ್ರಸಾದ ವಿತರಣೆ ಮಾಡಬೇಕೆಂದೇನೂ ಇಲ್ಲ. ಅವರವರ ಶಕ್ತ್ಯಾನುಸಾರ ಪ್ರಸಾದ ವಿತರಣೆ, ವಚನ ಸಾಹಿತ್ಯ ವಿತರಣೆ ಮುಂತಾದ್ದನ್ನು ಮಾಡಬೇಕು.

ಶ್ರಾವಣ ಮಾಸ ಪೂರ್ತಿ ವಚನ ಸಾಹಿತ್ಯ ಪಾರಾಯಣ ಇಟ್ಟುಕೊಂಡು ಭಾದ್ರಪದ ಚೌತಿಯ ದಿವಸ ಶ್ರಾವಣ ಮಾಸದ ವ್ರತಾಚರಣೆಯನ್ನು ಮುಕ್ತಾಯ ಮಾಡಬೇಕು.

ಬಸವ ಧರ್ಮ ಪೀಠ ಪೂಜ್ಯ ಶ್ರೀಮನ್ ನಿರಂಜನ
ಕೂಡಲಸಂಗಮ ಮಹಾಜಗದ್ಗುರು ಮಾತೆ ಮಹಾದೇವಿ

ಶ್ರೀ ಬಸವೇಶ್ವರ ಪೂಜಾವ್ರತ ಬೀರಿದ ಪ್ರಭಾವ, ತಂದ ಬದಲಾವಣೆ

''ಮೂರ್ತಿ ಪೂಜೆಯನ್ನು ವಿರೋಧಿಸಿದ ವಿಶ್ವಗುರು ಬಸವಣ್ಣನವರ ಮೂರ್ತಿಯನ್ನು ಮಾಡಿ ಪೂಜಿಸುವುದು ಅವರ ತತ್ತ್ವಕ್ಕೆ ಅಪಚಾರ ಮಾಡಿದಂತಲ್ಲವೆ ?'' ಎಂದು ಕೇಳಿದರು ಶರಣ ಎಸ್.ಪಿ. ಹಿರೇಮಠರು. ಅವರು 12ನೆಯ ವಯಸ್ಸಿನ ಬಾಲಕರಾಗಿದ್ದಾಗಿನಿಂದಲೂ ಬಸವ ಪಥದಲ್ಲಿ ನಡೆಯುತ್ತಿರುವವರು.

ಈ ಪ್ರಶ್ನೆಗೆ ಸಾಕಷ್ಟು ಸಲ ಕಲ್ಯಾಣ ಕಿರಣದಲ್ಲಿ ಸಮಸ್ಯೆ-ಸಮಾಧಾನ ವಿಭಾಗದಲ್ಲಿ ಉತ್ತರಿಸಿದ್ದಾಗಿದೆ. ಆದರೂ ಇನ್ನೊಮ್ಮೆ ಪುನರ್ ನೆನಪು ಮಾಡುವ ಇಚ್ಛೆಯುಂಟಾಯಿತು.

1977ರ ವರೆಗೆ ಶ್ರೀಗುರು ಬಸವಣ್ಣನವರ ಮೂರ್ತಿಯನ್ನು ಪ್ರತಿಷ್ಠಾಪಿಸುವುದಿರಲಿ ಭಾವಚಿತ್ರವನ್ನು ಸಹ ಪೂಜಿಸಬಾರದೆಂಬ ಅಭಿಪ್ರಾಯವನ್ನು ನಾವು ತಳೆದಿದ್ದೆವು. ನಾವು ಎಂದಾಗಲೆಲ್ಲ ಪೂಜ್ಯ ಗುರೂಜಿಯವರು ಮತ್ತು ನಾವು ಎಂದರ್ಥ. ಏಕೆಂದರೆ ಪ್ರತಿಯೊಂದು ಧಾರ್ಮಿಕ, ತಾತ್ತ್ವಿಕ ವಿಷಯ ಕುರಿತು ಸಹ ಚಿಂತನೆ ಮಾಡುತ್ತಿದ್ದೆವು. ಏಕದೇವೋಪಾಸನೆ-ಇಷ್ಟಲಿಂಗದ ಮೂಲಕ ಮಾತ್ರ ಇರಬೇಕು ಎಂಬ ಕಟ್ಟಾವಾದ, ಶ್ರೀಗುರು ಬಸವಣ್ಣನವರ ತಾತ್ತ್ವಿಕ ಆದೇಶದಂತೆ, ನಮ್ಮದಾಗಿತ್ತು. ಅದರಂತೆ ಆಚರಿಸುತ್ತಿದ್ದೆವು

ಮಾನವನ ಮನಸ್ಸಿಗೆ ಕೆಲವೊಂದು ಸೀಮಿತತೆ(limitations)ಗಳಿರುತ್ತವೆ. ಅದರಲ್ಲಿಯೂ ಭಾರತ ದೇಶದ ಹಿಂದೂ ಪರಿಸರದಲ್ಲಿ ಬೆಳೆದ ಮನಸ್ಸುಗಳಿಗಂತೂ ಸಾಕಾರ ಉಪಾಸನೆ ಬಿಟ್ಟು ಬೇರೊಂದು ಬಗೆಯಲ್ಲಿ ಚಿಂತಿಸಲಾರದ ಮಾನಸಿಕ, ಬೌದ್ಧಿಕ ಮನೋಗತಿ ಅಳವಟ್ಟಿರುತ್ತದೆ. ನಿರಾಕಾರ ದೇವರ ಕಲ್ಪನೆಯನ್ನೇ ಜಗತ್ತಿನ ದೊಡ್ಡ ಧರ್ಮಗಳು ಎತ್ತಿ ಹಿಡಿದರೂ ಅವು ಜೀವಂತಿಕೆ ಹೊಂದಿರುವುದು ಧರ್ಮಸ್ಥಾಪಕರ ವ್ಯಕ್ತಿತ್ವದ ಮೇಲೆ. ಮಾತೃ ಹೃದಯದ ವ್ಯಕ್ತಿತ್ವವನ್ನು ಹೊಂದಿದ ಬುದ್ಧ, ಏಸು, ಬಸವಣ್ಣನವರಂತಹ ಪ್ರವಾದಿಗಳನ್ನು ಹೊಂದಿದ ಧರ್ಮಗಳು ಮಾನವೀಯತೆಯಿಂದ ಮಿಡಿಯುತ್ತವೆ. ಹಿಂದು ಪರಂಪರೆಯಲ್ಲಿ ಬರುವ ವೈದಿಕ-ಶೈವಗಳ ನಡುವಿನ ವ್ಯತ್ಯಾಸವನ್ನೇ ಗಮನಿಸಿದರೆ ಭಕ್ತಿರಾಹಿತ್ಯ ಕರ್ಮಕಾಂಡ, ಯಜ್ಞ-ಯಾಗಾದಿಗಳಿಂದ ಕೂಡಿದ ವೈದಿಕ ಧರ್ಮಕ್ಕಿಂತಲೂ ಭಕ್ತಿ ಪ್ರೇರಿತ ಶಿವ ಆಧಾರಿತ ಮಾರ್ಗ ಹೆಚ್ಚು ಮಾನವೀಯತೆ ಉಳ್ಳದ್ದಾಗಿದೆ.

ಬುದ್ಧನು ಶೂನ್ಯವಾದಿ; ಅರಿವೇ ಗುರು ಎಂದವನು, ವ್ಯಕ್ತಿ ಪೂಜೆಯನ್ನು ಪ್ರೋತ್ಸಾಹಿಸದವನು. ಆದರೆ ಬೌದ್ಧ ಧರ್ಮ ಉಳಿಯಬೇಕಾದರೆ ಬುದ್ಧ ಗುರು ಪೂಜೆ ಅತ್ಯವಶ್ಯಕವೆಂದು ಮನಗಂಡು ಅನುಯಾಯಿಗಳು ಬುದ್ಧಾರಾಧನೆಯನ್ನು ಅಳವಡಿಸಿದರು. ತೀರ್ಥಂಕರರ ಪೂಜೆಯೂ ಅದೇ ರೀತಿ ಅಳವಡಿಸಲ್ಪಟ್ಟಿತು. ಕ್ರೈಸ್ತ ಧರ್ಮ ನಿರಾಕಾರ ದೇವರನ್ನು ಹಾಡಿ, ಕೊಂಡಾಡಿದರೂ ಅನುಯಾಯಿಗಳ ಭಾವನಾತ್ಮಕ ಸಂಬಂಧ ಇರುವುದು ಏಸುವಿನೊಡನೆ. ನಾವು ಹಾಗೆಯೇ ಆಲೋಚಿಸುತ್ತಾ ಕುಳಿತಾಗ ಅಪ್ಪ ಬಸವಣ್ಣನವರ ಹೃದಯ ನಮ್ಮನ್ನು ಸೂಜಿಗಲ್ಲಿನಂತೆ ಸೆಳೆಯುತ್ತದೆ. ಲೌಕಿಕವಾದ ಎಲ್ಲಾ ಸಂಬಂಧಗಳನ್ನೂ ಮೀರಿದ ಅತುಳ ಪ್ರೇಮ ಭಕ್ತಿಯಾಗಿ, ಶರಣಾಗತಿಯಾಗಿ ಹರಿಯುತ್ತದೆ. ಈ ಗುರುವಿಗಾಗಿ ನಾವು ಏನನ್ನು ಕೊಡೋಣ ? ತನು ಮನ ಧನ ಸಮಯ ಅಭಿಮಾನ ಪ್ರಾಣ, ಇನ್ನು ಏನೇ ಸಂಪತ್ತು ಸಾಧನ ಇದ್ದರೂ ಅದನ್ನೂ ಸಮರ್ಪಿಸಬೇಕು ಎಂಬ ಉತ್ಕಟತೆ ತುಡಿಯುತ್ತದೆ.

ಜಾಗತಿಕ ಧರ್ಮಗಳ ಅಧ್ಯಯನ ಮಾಡಿದಾಗ ಧರ್ಮಗುರುವಿನ ಆರಾಧನೆ ಎಷ್ಟು ಮಹತ್ವಪೂರ್ಣ ಎಂಬುದು ನನಗೆ ಮನದಟ್ಟಾಯಿತು. ಇಂಗ್ಲೆಂಡನ್ನು 1976ರಲ್ಲಿ ಸಂದರ್ಶಿಸಿದ ಮೇಲೆ

ಮರಳಿ ಬಂದಾಗ ಬಸವ ಗುರುಪೂಜೆ ಅತ್ಯಂತ ಅಗತ್ಯ ಎಂದು ಪೂಜ್ಯ ಲಿಂಗೈಕ್ಯ ಗುರುಗಳಿಗೆ ಮನವರಿಕೆ ಮಾಡಿಕೊಟ್ಟೆ. ಭಾವಚಿತ್ರವನ್ನಿಟ್ಟು ಪೂಜೆಯನ್ನು ಆರಂಭಿಸಿದೆವು. ನಿರಾಕಾರದ ಮೇಲೆ ಮನಸ್ಸನ್ನು ನಿಲ್ಲಿಸಲು ಅಸಮರ್ಥರಾದ ಅನೇಕರು ವಿವಿಧ ರೀತಿಯ, ತಾತ್ತ್ವಿಕವಲ್ಲದ, ಭಯದ ತಳಹದಿಯ ಮೇಲೆ ನಡೆಯುವ ಹಲವಾರು ವ್ರತಗಳನ್ನು ಮಾಡುವುದನ್ನು ಕಂಡು ಈ ರೀತಿಯ ಒಂದು ಪೂಜೆಯು ಅತ್ಯಗತ್ಯ ಎಂಬುದು ಮನವರಿಕೆಯಾಯಿತು. ಸತ್ಯನಾರಾಯಣ ವ್ರತ, ವರದಾ ಶಂಕರ, ಮಂಗಳಗೌರಿ, ನವಗ್ರಹಾರಾಧನೆ, ಸಂಕಷ್ಟಿ ಇಂಥ ಪೌರಾಣಿಕ ವ್ರತಗಳಿಂದ ಮನುಷ್ಯ ಒಂದು ಬಗೆಯ ಮಾನಸಿಕ ಸಮಾಧಾನ ಹೊಂದುವನೇ ವಿನಾ ಅನುಗ್ರಹವನ್ನಲ್ಲ; ಜ್ಞಾನವನ್ನಂತೂ ಮೊದಲೇ ಪಡೆಯುವುದಿಲ್ಲ. ಕೆಲವೊಂದು ಕಾರ್ಯಕ್ರಮಗಳಲ್ಲಿ, ಅಂಗಡಿ ಪ್ರಾರಂಭೋತ್ಸವ, ಫ್ಯಾಕ್ಟರಿ ಉದ್ಘಾಟನೆ ಮುಂತಾದ ಸನ್ನಿವೇಶಗಳಲ್ಲಿ ಗುರುಗಳನ್ನು ಕರೆಸಿದರೂ ಅವರು ಅಲ್ಲಿ ಕುಳಿತು ಇಷ್ಟಲಿಂಗಾರ್ಚನೆ ಮಾಡಲಾರರು. ಕೇವಲ ಅವರ ಪಾದಪೂಜೆ ಮಾತ್ರ ಮಾಡಬೇಕಾಗುತ್ತದೆ. ಇದರ ಜೊತೆಗೆ ಬಸವೇಶ್ವರ ಪೂಜಾವ್ರತ ಮಾಡಿದರೆ ಬಹಳ ಅರ್ಥಗರ್ಭಿತವಾಗುವುದು ಮಾತ್ರವಲ್ಲ ಅಲ್ಲಿ ಸಾಮೂಹಿಕ ಮಂತ್ರ ಪಠಣವೂ ಇರುವುದರಿಂದ ವಾತಾವರಣ ಭಕ್ತಿಪೂರಿತವಾಗುವುದು. ಪೌರಾಣಿಕ ದೇವತೆಗಳಾದ ಲಕ್ಷ್ಮಿ, ಸರಸ್ವತಿ, ಗಣಪತಿ ಮುಂತಾದವುಗಳ ಪೂಜೆಯಿಂದ ಏಕದೇವೋಪಾಸನೆಗೆ ಚ್ಯುತಿ ಬರುವುದು. ಬಸವೇಶ್ವರ ಪೂಜಾವ್ರತದಿಂದ ತಾತ್ತ್ವಿಕ ದೋಷ ಬರದು ಮತ್ತು ಏಕಗುರೂಪಾಸನೆಯು ಗಟ್ಟಿಗೊಳ್ಳುವುದು. ಇದನ್ನರಿತು, 1985ರ ಜುಲೈ ತಿಂಗಳ ಕಲ್ಯಾಣ ಕಿರಣದಲ್ಲಿ ಪೂಜಾವ್ರತದ ವಿವರಣೆ ನೀಡಿ ಆ ವರ್ಷದ ಬಸವ ಪಂಚಮಿಯಂದು ಮೊಟ್ಟ ಮೊದಲಿಗೆ ಆಚರಣೆಗೆ ತಂದೆವು. ಅಂದಿನಿಂದ ಇಂದಿನವರೆಗೆ ಬಸವೇಶ್ವರ ಪೂಜಾವ್ರತ ಬೀರಿರುವ ಪ್ರಭಾವ ಅಪಾರ. ಅನೇಕರ ಇಷ್ಟಾರ್ಥ ಸಿದ್ಧಿಯಾಗಿರುವುವು. ವಿವಾಹ, ಸಂತಾನ, ನೌಕರಿ, ಸೀಟು ಪ್ರಾಪ್ತಿ ಮುಂತಾದ ಐಹಿಕ ಇಷ್ಟಾರ್ಥಗಳು ಅನೇಕರಲ್ಲಿ ಪೂರ್ತಿಗೊಂಡುದು ಅವರ ದೃಷ್ಟಿಯಲ್ಲಿ ಮಹತ್ವಪೂರ್ಣವಾಗಿದ್ದರೆ ಒಂದು ತಾತ್ತ್ವಿಕ ಚೌಕಟ್ಟಿಗೆ ಸಮಾಜವು ಒಳಗಾದುದು ನಮಗೆ ಅತೀವ ಸಂತೋಷ ತಂದಿದೆ. ಸಂತೋಷದ ಸನ್ನಿವೇಶಗಳೇ ಬರಲಿ, ಸಾವು ಮುಂತಾದ ದುಃಖದ ಸನ್ನಿವೇಶವೇ ಬರಲಿ ಬಸವ ಗುರು ಪೂಜೆ ಮಾಡಿ ಜನರು ಕರ್ತವ್ಯ ಪೂರೈಸುವರು. ಹಳಿ ತಪ್ಪಿದ್ದ ಸಮಾಜದ ಗಾಡಿಯನ್ನು ಪೂಜಾವ್ರತದ ಮೂಲಕ ಲಿಂಗದೇವ-ಬಸವ ಗುರು ಎಂಬ ಎರಡು ಹಳಿಗಳ ಮೇಲೆ ಕೂಡ್ರಿಸಲು ಸಾಧ್ಯವಾಯಿತು.

ಇಷ್ಟು ವಿಷಯದ ಹಿನ್ನೆಲೆಯಲ್ಲಿ ಕೆಲವು ಸಂದೇಹಗಳಿಗೆ ಉತ್ತರಿಸುತ್ತೇನೆ. ಏಕೆಂದರೆ ಬಸವ ತತ್ತ್ವಾಭಿಮಾನಿಗಳಾದ ಕೆಲವು ಮಠಾಧೀಶರು ಮತ್ತು ಅವರ ಭಕ್ತರು ಜನರಲ್ಲಿ ಹಲವಾರು ಸಂದೇಹಗಳನ್ನು ಬಿತ್ತಿ ಬೆಳೆಸುತ್ತಾರೆ.

ಪ್ರಶ್ನೆ : ಬಸವೇಶ್ವರ ಪೂಜಾವ್ರತ ಅರ್ಥಾತ್ ಬಸವ ಗುರು ಪೂಜೆಯಿಂದ ಧರ್ಮಪಿತ ಬಸವಣ್ಣನವರು ಬೋಧಿಸಿದ ಏಕದೇವೋಪಾಸನೆಗೆ ಚ್ಯುತಿ ಬರುವುದೆ ?

★ ಇಲ್ಲ. ಸೃಷ್ಟಿಕರ್ತ ಲಿಂಗದೇವನು ಜಗತ್ತಿನ ಮೇಲೆ ಅಪಾರ ಕರುಣೆ ಇಟ್ಟು ಗುರು-ಲಿಂಗ-ಜಂಗಮ ರೂಪದಲ್ಲಿ ಬರುವನು.

1. ಗುರು ಬಸವಣ್ಣನವರಾಗಿ ಬಂದು ಧರ್ಮಮಾರ್ಗವನ್ನು ಹಾಕಿಕೊಟ್ಟನು.

2. ಗುರು ಬಸವಣ್ಣನವರಿಗೆ ಪ್ರೇರಣೆ ನೀಡಿ, ಇಷ್ಟಲಿಂಗವಾಗಿ ರೂಪು ತಳೆದು ಭಕ್ತರ ಅಂಗದ ಮೇಲೆ ನೆಲೆಸಿ ಪೂಜೆಗೊಳ್ಳುವನು.

3. ಭಕ್ತರನ್ನು ಮಾರ್ಗದರ್ಶನ ಮಾಡಿ ಮುನ್ನಡೆಸಲು ಜಂಗಮವಾಗಿ ಬಂದು ಬಸವ ಗುರು

ಕೊಟ್ಟ ಧರ್ಮವನ್ನು ಬೋಧಿಸುವನು.

ಹೀಗೆ ಸೃಷ್ಟಿಕರ್ತನ ಮೂರು ಮುಖಗಳು ಗುರು-ಲಿಂಗ-ಜಂಗಮ . ಈ ಮೂರನ್ನು ಆರಾಧಿಸಿಯೂ ಏಕದೇವೋಪಾಸನೆಗೆ ಚ್ಯುತಿ ಬರದಂತೆ ನಡೆಯಲು ಸಾಧ್ಯವಿದೆ. ಇದಕ್ಕೂ ಕ್ರೈಸ್ತರು ಮತ್ತು ಬೌದ್ಧರ ತ್ರಿತತ್ತ್ವಕ್ಕೂ ಹೋಲಿಕೆಯುಂಟು.

ಕ್ರೈಸ್ತ ಧರ್ಮ- 1.ದೇವರು 2.ದೇವರ ಮಗ 3.ಪವಿತ್ರಾತ್ಮ

ಬೌದ್ಧ ಧರ್ಮ- 1. ಬುದ್ಧ 2. ಧರ್ಮ 3.ಸಂಘ

ಲಿಂಗಾಯತ ಧರ್ಮ- 1. ಬಸವಣ್ಣ (ಗುರು) 2. ಲಿಂಗ (ಇಷ್ಟಲಿಂಗ) 3. ಜಂಗಮ (ಪವಿತ್ರಾತ್ಮ)

ಇಷ್ಟು ಮಾತ್ರವಲ್ಲ ಬಸವ ಗುರು ಪೂಜೆಯು ಪೌರಾಣಿಕ ಬಹುದೇವತೋಪಾಸನೆ ಮತ್ತು ಬಹುಗುರೂಪಾಸನೆ ಎಂಬ ಕಾಯಿಲೆಗಳಿಗೆ ಪರಿಣಾಮಕಾರಿಯಾದ ಔಷಧಿಯಾಗಿದೆ; ಸಮಾಜ ಸಂಘಟನೆಯ ಸೂತ್ರವಾಗಿದೆ.

ಶರಣ. ಹಿರೇಮಠರು ಕೇಳಿದ ಮತ್ತೊಂದು ಮಹತ್ವದ ಪ್ರಶ್ನೆ ಹೀಗಿದೆ.

ಪ್ರಶ್ನೆ : ಬಸವ ಗುರುಪೂಜೆಯಿಂದ ಇಷ್ಟಲಿಂಗದಲ್ಲಿ ನಿಷ್ಠೆ ಕಡಿಮೆಯಾಗುವ ಸಂಭವವಿದೆಯೆ ? ದೇವ (ಲಿಂಗ) ಪೂಜೆ ಬಿಟ್ಟು ಗುರು (ಬಸವ) ಪೂಜೆಗೇ ಜನರು ಒಲವು ತೋರಬಹುದೆ ?

★ ಸರ್ವಥಾ ಇಲ್ಲ. ನೀವು ನಮ್ಮ ಅಭಿಮಾನಿಗಳಾಗಿದ್ದೀರಿ. ನಮ್ಮ ಬಗ್ಗೆ ಭಕ್ತಿ ಇಟ್ಟಿದ್ದೀರಿ. ಆದರೆ ನೀವು ನಮ್ಮ ಬಗ್ಗ ಭಕ್ತಿ ತಾಳಿ ಬಸವಣ್ಣನವರನ್ನು ಮರೆಯುವ ಸಾಧ್ಯತೆ ಇದೆಯೆ ? ನಾನು ಕೇಳಿದೆ

ಹಿರೇಮಠ್ ಹೇಳಿದರು : ಖಂಡಿತಾ ಇಲ್ಲ ; ಪ್ರತಿ ಹೆಜ್ಜೆಗೂ ನೀವು ಬಸವ ಭಕ್ತಿಯನ್ನು ಬೆಳೆಸುವುದರಿಂದ ನಿಮ್ಮ ಅಭಿಮಾನಿಗಳು ಅಪ್ಪಟ ಬಸವ ಭಕ್ತರು, ಲಿಂಗ ನಿಷ್ಠರೂ ಆಗುತ್ತಾರೆ.

ನಾನು: ಹಾಗೆಯೇ ಬಸವ ಗುರುವಿನ ಭಕ್ತಿ ಗಟ್ಟಿಗೊಂಡು ನೀವು ಅವರ ವಚನಾದೇಶಗಳನ್ನು ಓದುತ್ತಾ ಹೋದಂತೆ ಲಿಂಗನಿಷ್ಠೆ ಭದ್ರವಾಗುತ್ತ ಹೋಗುತ್ತದೆ, ಅದಕ್ಕೇ ಮಡಿವಾಳ ಮಾಚಯ್ಯನವರು ಹೇಳಿರುವುದು,

"ಎತ್ತೆತ್ತ ನೋಡಿದಡತ್ತತ್ತ ಬಸವನೆಂಬ ಬಳ್ಳಿ
ಎತ್ತಿ ನೋಡಿದರೆ ಲಿಂಗವೆಂಬ ಗೊಂಚಲು"

ವಚನ ಸಾಹಿತ್ಯ ಓದುವ ಬಸವ ಭಕ್ತರಲ್ಲಿ ಇರುವ ಇಷ್ಟಲಿಂಗ ಪ್ರೇಮ, ನಿಷ್ಠೆ ಇತರರಲ್ಲಿ ನೀವು ಕಾಣುವುದಿಲ್ಲ. ಅಯಸ್ಕಾಂತೀಯ (magnetic) ವ್ಯಕ್ತಿತ್ವ ಹೊಂದಿದ ಬಸವಣ್ಣನವರು ಜನರನ್ನು ಆಕರ್ಷಿಸಿದರು. ಆಕರ್ಷಿತರಾಗಿ ಬಂದವರನ್ನು ತಮ್ಮ ಸುತ್ತಲೂ ಗೂಡು ಕಟ್ಟಿಸಿಕೊಳ್ಳದೆ, ದೇವನನ್ನು ಪ್ರೀತಿಸುವಂತೆ, ಆರಾಧಿಸುವಂತೆ ಮಾಡಿದರು. "ಎಲ್ಲರೂ ತಮ್ಮ ತಮ್ಮನೇ ಮೆರೆಸಿಕೊಂಡರಲ್ಲದೆ ನಿಮ್ಮ ಮೆರೆಸಿದುದಿಲ್ಲ ಲಿಂಗದೇವ" ಎಂದು ಹೇಳಿ, ಲಿಂಗದೇವನನ್ನೇ ಮೆರೆಸಿದರು, ಹೀಗಾಗಿಯೇ ಬಸವ ಭಕ್ತಿಯ ಬಳ್ಳಿ ಹಬ್ಬಿದಲ್ಲೆಲ್ಲ ಲಿಂಗನಿಷ್ಠೆಯ ದ್ರಾಕ್ಷಿ ಗೊಂಚಲು ಮೈದಳೆಯುತ್ತದೆ.

ಪ್ರಶ್ನೆ: ಹಿರೇಮಠ್: ಬಸವೇಶ್ವರ ಪೂಜಾವ್ರತದಿಂದ, ಮೂರ್ತೀಕರಣದಿಂದ ಪುರೋಹಿತ ಶಾಹಿ ಪುನಃ ಬೆಳೆಯಲು ಅವಕಾಶವಾಗುತ್ತದೆಯೆ ?

★ ಇಲ್ಲ, ಪೂಜೆಯ ಹಕ್ಕುಗಳು ವಿಕೇಂದ್ರೀಕರಣಗೊಳ್ಳುತ್ತವೆ. ಪೂಜಾರಿಶಾಹಿಯ ವ್ಯಾಪಾರಿಕ ಹಿಡಿತ ತಪ್ಪಿಸಲು ಧರ್ಮಗುರು ಬಸವಣ್ಣನವರು ಇಷ್ಟಲಿಂಗವನ್ನು ಕೊಟ್ಟಂತೆ, ನಾವು ಬಸವ ಗುರು ಪೂಜೆಯನ್ನು ಶುರು ಮಾಡಿದ್ದು. ದೊಡ್ಡ ದೊಡ್ಡ ನಗರಗಳಲ್ಲಿ ಧಾರ್ಮಿಕ ವಿಧಿ ವಿಧಾನ ಪೂರೈಸಲು

ಅಯ್ಯನವರನ್ನು ಹುಡುಕಿಕೊಂಡು ಜನರು ಅಲೆಯಬೇಕಾಗುತ್ತದೆ. ಮಹಾ ಜಂಗಮ ಬಸವ ಗುರುಪೂಜೆ ಮಾಡಿ ಎಲ್ಲ ಧಾರ್ಮಿಕ ವಿಧಿ-ವಿಧಾನಗಳನ್ನು ಜನರು ಪೂರೈಸಲು ಈಗ ಸಾಧ್ಯವಾಗುತ್ತಿದೆ.

ಇತರ ಗುಡಿಗಳಲ್ಲಿ ಪೂಜಾರಿ ಮಾತ್ರ ಪೂಜಿಸಿ ಉಳಿದವರಿಗೆ ಗರ್ಭಗುಡಿಯ ಪ್ರವೇಶ ಲಭ್ಯವಿರುವುದಿಲ್ಲ. ಇಲ್ಲಿ ಹಾಗಲ್ಲ, ಯಾರು ಬೇಕಾದರೂ ಪೂಜಿಸಬಹುದು ಎಂದು ಅವಕಾಶ ಕೊಟ್ಟಿದ್ದೇವೆ.

ಪ್ರಶ್ನೆ : ಕೆಲವು ಜನ ಸ್ವಾಮಿಗಳು ಮತ್ತು ಅಯ್ಯನವರು ಜಂಗಮರಲ್ಲಿ ಏನು ಬೆಳೆಸುತ್ತಿದ್ದಾರೆಂದರೆ ಬಸವ ಗುರು ಪೂಜೆ, ಪೂಜಾವ್ರತದಿಂದ ಜಂಗಮರ ಹೊಟ್ಟೆಪಾಡಿಗೆ (ಉದ್ಯೋಗಕ್ಕೆ) ತೊಂದರೆಯಾಗುತ್ತದೆ ಎಂದು. ಇದು ನಿಜವೆ ?

★ ಖಂಡಿತಾ ಇಲ್ಲ. ಪೂಜೆ, ವಿವಾಹ ಮುಂತಾದ ವಿಧಿ ವಿಧಾನ ನೆರವೇರಿಸುವ ಜಂಗಮರು ಧರ್ಮಗುರು ಬಸವಣ್ಣನವರನ್ನು ದ್ವೇಷಿಸುವುದಕ್ಕಿಂತ, ಅಗೌರವದಿಂದ ಕಾಣುವುದಕ್ಕಿಂತ ತಾವೂ ಬಸವ ಗುರು ಪೂಜೆ ಅಳವಡಿಸಿ ಕ್ರಿಯೆಗಳನ್ನು ಮಾಡಲಿ, ಮಾಡಿಸಲಿ. ಇನ್ನೂ ಹೆಚ್ಚು ಸಂಪಾದನೆಯಾಗುತ್ತದೆ. ಅವರು ಹೆಚ್ಚು ಸಂಪಾದಿಸಿದರೆ ನಮಗೆ ಮತ್ಸರವಾಗಲೀ, ಖೇದವಾಗಲಿ ಇಲ್ಲ; ನಮ್ಮ ಧರ್ಮಕ್ಕೆ ಸಲ್ಲದ ಪೂಜೆಗಳನ್ನು ಅವರು ಮಾಡಿಸುತ್ತಿದ್ದರೆ ನಿಷ್ಠಾವಂತ ಬಸವ ಭಕ್ತರು ಅವರನ್ನು ಕೈಬಿಡುವರು. ಅವರೂ ಸಹ ಬಸವ ಮಾರ್ಗಿಗಳೇ ಆದರೆ ಅವರನ್ನೇ ಇವರು ಆಹ್ವಾನಿಸುವರು.


''ಜಂಗಮ''ರ ಉದ್ಧಾರವನ್ನು ಮಾಡಬೇಕೆಂಬುದೇ ಮಠಾಧೀಶರ ಅಪೇಕ್ಷೆಯಾಗಿದ್ದರೆ :.

1. ಜಂಗಮರನ್ನು ಪ್ರತ್ಯೇಕ ಜಾತಿ ಎಂದು ಗುಂಪು ಕಟ್ಟಿಸಬಾರದು.
2. ಹಿಂದೂದೊಳಗಣ ಪರಿಶಿಷ್ಟ ಜಾತಿ ಎಂದು ಸುಳ್ಳು ಹೇಳಿ, ಪರಿಶಿಷ್ಟ ಜಾತಿಗಳ ದೀನರಿಗೆ ದಲಿತರಿಗೆ ಅನ್ಯಾಯ ಮಾಡಬಾರದು
3. ಮಾಲ ಜಂಗಮ, ಬೇಡ ಜಂಗಮ, ಬುಡ್ಗ ಜಂಗಮ ಎಂದು ದಲಿತರಲ್ಲಿ ದಲಿತರಾದವರ ಜೊತೆಗೆ ಸಮೀಕರಿಸಿಕೊಳ್ಳಬಾರದು.
4. ಪೂಜೆಯ ವಿಧಿ ವಿಧಾನಗಳ ಸರಿಯಾದ ತರಬೇತಿ ಕೊಡಲಿ. ವೇದಾಗಮಗಳ, ಸಂಸ್ಕೃತದ ಮೋಹ ಬಿಟ್ಟು ವಚನ ವಾಙ್ಮಯ ಓದಿ ಅದರ ಪ್ರಕಾರ ವಿಧಿ-ವಿಧಾನಗಳನ್ನು ಅವರವರ ಮಾತೃ ಭಾಷೆಗಳಲ್ಲಿ ಮಾಡಿಸಲಿ.

ಪೂಜಾರಿಕೆಗಾಗಿ, ಪೌರೋಹಿತ್ಯಕ್ಕಾಗಿ ಬೇರೆ ಜನರು ಆಸೆ ಪಡುವುದಿಲ್ಲ ಸರಿಯಾದ ರೀತಿ ತರಬೇತಿ ಹೊಂದಿದರೆ ಇವರಿಗೆ ಹಿಂದಿನಂತೆ ಸರಿಯಾದ ಅವಕಾಶ ದೊರೆಯುತ್ತದೆ, ಸಮಾಜದಲ್ಲಿ ಗೌರವಪೂರ್ಣ ಸ್ಥಾನವಿರುತ್ತದೆ. ಹೀಗೆ, ಬಸವ ಗುರುಪೂಜೆ ಲಿಂಗಾಯತ ಧರ್ಮದ ಆಧಾರ ಸ್ತಂಭವಾಗಿ ಜೀವಂತ ಸಮಾಜವನ್ನು ಕಟ್ಟಬಲ್ಲುದಾಗಿರುತ್ತದೆ. ★

ಗಣಲಾಂಛನ ಬಳಕೆಗೆ ತರಲು ಕರೆ

ಗಣಲಾಂಛನ



ಶರಣ ಬಂಧುಗಳೇ, ಪ್ರತಿಯೊಂದು ಧರ್ಮದವರು ತಮ್ಮದೇ ಆದ ಗಣಲಾಂಛನ ಹೊಂದಿದ್ದಾರೆ. ಅದನ್ನು ತಮ್ಮ ಧರ್ಮಮಂದಿರಗಳ ಮೇಲೆ, ಧ್ವಜಗಳಲ್ಲಿ ಚಿತ್ರಿಸುವರು. ತಮ್ಮ ಮನೆಗಳ ಮೇಲೂ ಹಾಕಿಕೊಳ್ಳುವರು. ವಾಹನಗಳ ಮೇಲೆ ಚಿತ್ರಿಸುವರು. ಸಿಖ್ಖರಿಗೆ ಕತ್ತಿ-ಢಾಲು, ಹಿಂದೂಗಳು ಓಂ, ಕ್ರೈಸ್ತರಿಗೆ ಕ್ರಾಸ್, ಮುಸ್ಲೀಮರಿಗೆ ಅರ್ಧಚಂದ್ರ ನಕ್ಷತ್ರ, ಬೌದ್ಧರಿಗೆ ಧರ್ಮಚಕ್ರ ಮುಂತಾದವು ಅವರ ಗಣಲಾಂಛನಗಳು (Community symbol).

ಲಿಂಗಾಯತ ಧರ್ಮದ ಗಣಲಾಂಛನ ಎಂದರೆ ಒಂದು ವೃತ್ತ. ಒಳಗೆ ಷಟ್ಕೋನ. ಆರು ಕೋನಗಳಲ್ಲಿ ಶ್ರೀ ಗುರು ಬಸವ ಎಂಬ ಷಡಕ್ಷರ ಮಂತ್ರ ; ಮಧ್ಯೆ ಇಷ್ಟಲಿಂಗ ಅದರ ಮಧ್ಯೆ ಒಂದು ಚುಕ್ಕೆ. ಲಿಂಗಾಯತ ಧರ್ಮದ ಸಿದ್ಧಾಂತವನ್ನಾಧರಿಸಿ ಈ ಚಿತ್ರವನ್ನು ರಚಿಸಲಾಗಿದೆ.

1. ಜಗತ್ತು ಕರ್ತಾರನ ಕಮ್ಮಟ. ಇದು ಗೋಲಾಕಾರವಾಗಿದೆ.

2. ಷಟ್ ತತ್ವಗಳಿಂದ ಕೂಡಿದ ಸಿದ್ಧಾಂತದ ಸಂಕೇತ ಷಟ್‌ಕೋನ

3. ಈ ಧರ್ಮದ ಸ್ಥಾಪಕರು ಶ್ರೀ ಗುರು ಬಸವಣ್ಣನವರು

4. ಈ ಧರ್ಮದ ಮುಖ್ಯ ಧಾರ್ಮಿಕ ಲಾಂಛನ ಇಷ್ಟಲಿಂಗ

5 ಇಷ್ಟಲಿಂಗವು ನಿರಾಕಾರ ಲಿಂಗದೇವನ ಕುರುಹು. ಆ ದೇವನು ಪ್ರಕಾಶ ಸ್ವರೂಪನು. ಅವನೇ ಜಗತ್ತಿನ ಕೇಂದ್ರ ಶಕ್ತಿ. ಅದಕ್ಕೇ ಮಧ್ಯದಲ್ಲಿ ಚುಕ್ಕೆ. ಆದ್ದರಿಂದ ಈ ಗಣಲಾಂಛನದ ಮಹತ್ವವನ್ನರಿತು, ಮತ್ತು ಇದರ ಅಗತ್ಯವನ್ನು ಅರಿತು ಶರಣ ಬಂಧುಗಳು ಎಲ್ಲಾ ರಂಗಗಳಲ್ಲೂ ಬಳಕೆಗೆ ತರಬೇಕು.

1. ಧ್ವಜದಲ್ಲಿ ಈ ಚಿತ್ರ ಬರಬೇಕು.

2. ಧರ್ಮಮಂದಿರಗಳ ಮೇಲೆ ಕಬ್ಬಿಣದ ಗ್ರಿಲ್‌ದಲ್ಲಿ ಅಥವಾ ಸಿಮೆಂಟಿನಲ್ಲಿ ಮಾಡಿಸಬೇಕು. ಇಲ್ಲವೇ ಪೇಯಿಂಟಿನಲ್ಲಾದರೂ ಬರೆಸಬೇಕು.

3. ಮನೆಯ ಮೇಲೆ, ಮುಂಭಾಗಗಳಲ್ಲಿ ಬರೆಸಬೇಕು.

4. ವಾಹನಗಳ ಮೇಲೆ ಬರೆಸಬೇಕು. ತಮ್ಮ ವೈಯಕ್ತಿಕ ವಾಹನಗಳ ಮೇಲೆ ಚಿತ್ರಿಸುವುದಲ್ಲದೆ, ಟ್ರಾನ್ಸ್‌ಪೋರ್ಟ್ ಕಂಪೆನಿ ನಡೆಸುವವರು ತಮ್ಮ ಸಂಸ್ಥೆಯ ವಾಹನಗಳ ಮೇಲೆ ಚಿತ್ರಿಸಬೇಕು.

5. ವಿವಿಧ ಉದ್ಯಮ, ವ್ಯಾಪಾರ ಮಳಿಗೆ ನಡೆಸುವವರು ತಮ್ಮ ಅಂಗಡಿ ಮಳಿಗೆಗಳ ಬೋರ್ಡಿನಲ್ಲಿ ಚಿತ್ರವನ್ನು ಬರೆಸಬೇಕು.

6. ಗೃಹಿಣಿಯರು ಧರಿಸುವ ಮಂಗಲ ಸೂತ್ರದಲ್ಲಿ ಕೆತ್ತಿಸಬೇಕು. (ಪುಟ 16 ನೋಡಿ.)

ಈ ಬಗ್ಗೆ ಎಲ್ಲ ಶರಣ ಬಂಧುಗಳೂ ಪ್ರಚಾರವನ್ನು ಕೈಗೊಳ್ಳಬೇಕೆಂದು, ಆಚರಣೆಗೆ ತರಬೇಕೆಂದು ಸೂಚಿಸುವೆವು.

806ನೆಯ ಬಸವ ಪಂಚಮಿಯು ದಿ.25-7-2001 ಚನ್ನವಾರ (ಬುಧವಾರ) ದಂದು ಬಂದಿದ್ದು ಸಮಯದ ಗಡುವು ಹಾಕಿಕೊಂಡು ಅಷ್ಟರೊಳಗೆ ಬಳಕೆಗೆ ತರುವ ಸಂಕಲ್ಪ ಹೊಂದಬೇಕೆಂದು ಸೂಚಿಸುತ್ತೇವೆ.

ಅದೇ ರೀತಿ ಆಹ್ವಾನಪತ್ರ ಇತ್ಯಾದಿ ಮುದ್ರಿಸುವಾಗ ಶರಣ ಬಂಧುಗಳು ರೂಢಿಯಲ್ಲಿರುವ ವಾರಗಳ ಹೆಸರಿನ ಜೊತೆಗೆ ಶರಣ ಸಂಸ್ಕೃತಿಯ ವಾರಗಳ ಹೆಸರನ್ನೂ ದೇವ(ಭಾನು)ವಾರ, ಶಿವ (ಸೋಮ)ವಾರ, ಬಸವ(ಮಂಗಳ)ವಾರ, ಚನ್ನ(ಬುಧ) ವಾರ, ಪ್ರಭು (ಗುರು)ವಾರ, ಮಾತೃ(ಶುಕ್ರ)ವಾರ, ಶರಣ(ಶನಿ)ವಾರ ಎಂದು ಬರೆಯುವುದನ್ನು ಬಳಕೆಗೆ ತರುವ ಸಂಕಲ್ಪ ಕೈಗೊಳ್ಳುವಿರಾಗಿ ಆಶಿಸುತ್ತೇವೆ.

-ಮಾತಾಜಿ.

ಬಸವ ವಚನಾಮೃತ

-ಮಾತಾಜಿ

1. ವಿನಯ

ಜಂಗಮದ ಸನ್ನಿಧಿಯಲ್ಲಿ
ವಾಹನವನೇರಲಮ್ಮೆ : ಏರಿದಡೆ ಭವಹಿಂಗದು
ಏನು ಕಾರಣ:
ಮುಂದೆ ಶೂಲವನೇರುವ ಪ್ರಾಪ್ತಿಯುಂಟಾದ ಕಾರಣ !
ಜಂಗಮ ಬರಲಾಸನದಲ್ಲಿರಲಮ್ಮೆ:
ಇದ್ದಡೆ ಭವ ಹಿಂಗದು ! ಏನು ಕಾರಣ:
ಮುಂದೆ ಕಾಯ್ದಿಟ್ಟಿಗೆಯ ಮೇಲೆ
ಕುಳ್ಳಿರಿಸುವ ಪ್ರಾಪ್ತಿಯುಂಟಾದ ಕಾರಣ !
ಜಂಗಮದ ಮುಂದೆ ದಿಟ್ಟತನದಲ್ಲಿ ಚೆರೆತು
ನಿಂದಿರಲಮ್ಮೆನು : ನಿಂದಡೆ ಭವ ಹಿಂಗದಾಗಿ
ಏನು ಕಾರಣ : ಮುಂದೆ ಹೆಡಗುಡಿಯಕಟ್ಟಿ
ಕುಳ್ಳಿರಿಸುವ ಪ್ರಾಪ್ತಿಯುಂಟಾದ ಕಾರಣ !
ಇಂತೀ ಬಾಧೆ ಭವಂಗಳಿಗಂಜುವೆನಯ್ಯಾ
ನಿಮ್ಮವರ ಸುಳುಹು ನೀವೆಂದೆ ಭಾವಿಸಿ,
ತೊತ್ತು ಭೃತ್ಯನಾಗಿಪ್ಪೆನಯ್ಯಾ, ಲಿಂಗದೇವ.

-ಬ.ವ.ದೀ -397

ಭಾವಾರ್ಥ :

ವಯೋವೃದ್ಧರು, ಜ್ಞಾನದಲ್ಲಿ ಹಿರಿಯರು, ಮಹಾತ್ಮರೂ ಆದ ಜಂಗಮರು ಇರುವಾಗ, ಅವರ ಎದುರಿನಲ್ಲಿ ಎತ್ತರವಾದ ವಾಹನವನ್ನು ಏರಬಾರದು. ಅಂತಹ ಉದ್ಧಟತನದ ವರ್ತನೆಯಿಂದ ಮುಂದೆ ಶೂಲವನ್ನೇರಿ ಬಾಧೆ ಪಡುವ ಪ್ರಸಂಗ ಒದಗಬಹುದು. ಜ್ಞಾನಿಗಳಾದ ಜಂಗಮರು ಬಂದಾಗ ಆಸನದಲ್ಲಿ, ಮೇಲೆದ್ದು ವಂದಿಸದೆ, ಕುಳಿತಿರಬಾರದು. ಈ ಉದ್ಧಟತನಕ್ಕೆ ಮುಂದೆ ಕಾಯ್ದ ಇಟ್ಟಿಗೆಯ ಮೇಲೆ ಕುಳಿತುಕೊಳ್ಳುವ ಶಿಕ್ಷೆಯನ್ನೆದುರಿಸುವ ಪ್ರಸಂಗ ಬರಬಹುದು. ಜ್ಞಾನಿಗಳ ಮುಂದೆ ಸೆಟೆದು ನಿಂತು ಮಾತನಾಡುವ ಅಹಂಕಾರ ತೋರಬಾರದು. ಏಕೆಂದರೆ ಮುಂದೆ ಕೈಕಾಲು ಬಿಗಿದು ಹೆಡಗುಡಿಯ ಕಟ್ಟಿಸಿಕೊಳ್ಳುವಂತಹ ಪ್ರಸಂಗ ಬರಬಹುದು. ದೇವನಿಗೊಲಿದ, ದೇವನೊಲಿಮೆ ಪಡೆದ ಮಹಾತ್ಮರನ್ನು ದೇವರ ಸಮಾನ (ಪ್ರತಿನಿಧಿಗಳೆಂದು)ವೆಂದು ತಿಳಿದು ಸೇವಾಭಾವದಿಂದ ವರ್ತಿಸಬೇಕು.

2. ಅವಧಾನ ಭಕ್ತಿ

ಭಕ್ತ ದೇಹಿಕ ದೇವನಪ್ಪ, ದೇವನು
ಸದ್ಭಕ್ತರ ಬಳಿಯಲ್ಲಿ ಬಪ್ಪನಾಗಿ,
ಆಳ್ದನು ಬರಲು ಆಳು ಮಂಚದ ಮೇಲೆ ಇಪ್ಪುದು
ಗುಣವೆ ? ಹೇಳಾ
ಲಿಂಗದೇವಾ, ಜಂಗಮ ರೂಪಾಗಿ
ಲಿಂಗಯ್ಯ ಬಂದಾನೆಂದು
ಎಂದೆಂದೂ ನಾನು ಮಂಚವನೇರದ ಭಾಷೆ !

-ಬ.ವ.ದೀ -396

ಭಾವಾರ್ಥ

ಪರಮಾತ್ಮನು ನಿರವಯವ, ನಿರಾಕಾರ. ಅವನು ಭಕ್ತ ದೇಹಿಕ ದೇವ. ಜ್ಞಾನಿಗಳಾದ ಮಹಾತ್ಮರ ಮೂಲಕ ಸದ್ಭಕ್ತರ ಬಳಿಗೆ ಒಲಿದು ಬರುವನು. ನಿರಾಕಾರ ದೇವನ ಪ್ರತಿನಿಧಿಗಳಾದ ಮಹಾಂತರು ಬಂದಾಗ, ಸದ್ಭಕ್ತನು ಮಂಚದ ಮೇಲೆ ಕುಳಿತುಕೊಂಡೇ ಇರಬಾರದು. ಆಳುವವನು ಬಂದಾಗ ಆಳಿಸಿಕೊಳ್ಳುವವನು ಎದ್ದು ನಿಂತು ಗೌರವಿಸದೆ, ಸ್ವಾಗತಿಸದೇ ಇರುವುದು ಶಿಷ್ಟಾಚಾರವೆ ? ಉಚಿತವೆ ?

ಆದ್ದರಿಂದ ಜಂಗಮರೂಪಾಗಿ ದೇವನು ಯಾವಾಗ ಬೇಕಾದರೂ ಬರುವನೆಂದು, ಅವಧಾನ ಭಕ್ತಿಯನ್ನು ತಾಳಿ ತುಂಬಾ ಎಚ್ಚರಿಕೆಯಿಂದ ಭಕ್ತನು ವರ್ತಿಸಬೇಕು.

3. ಶಿಷ್ಟಾಚಾರ

ಇತ್ತ ಬಾರಯ್ಯಾ ಇತ್ತ ಬಾರಯ್ಯಾ ಎಂದು
ಭಕ್ತರೆಲ್ಲರೂ ಕೂರ್ತು ಹತ್ತೆ ಕರೆವುತ್ತಿರಲು
ಮತ್ತೆ ಕೆಲಕ್ಕೆ ಹೋಗಿ ಶರಣೆಂದು ಹಸ್ತ ಬಾಯನೆ ಮುಚ್ಚಿ
ಕಿರಿದಾಗಿ ಭೃತ್ಯಾಚಾರವ ನುಡಿದು
ವಿನಯ ತದ್ಧ್ಯಾನವುಳ್ಳಡೆ, ಎತ್ತಿಕೊಂಬನಯ್ಯಾ

ಲಿಂಗದೇವ ಪ್ರಮಥರ ಮುಂದೆ. -ಬ.ವ.ದೀ -247

ಭಾವಾರ್ಥ

ಮನುಷ್ಯನ ಸಜ್ಜನಿಕೆ ಅವನ ವರ್ತನೆಗಳಲ್ಲಿ ವ್ಯಕ್ತವಾಗಬೇಕು. ವ್ಯಕ್ತಿಯನ್ನು ಎಲ್ಲರೂ ಪ್ರೀತಿಸುವಂತೆ ಮಾಡುವುವು ಅವನ ವರ್ತನೆ ಮತ್ತು ಮಾತುಗಳು. ಹಲವಾರು ಜನ ಸಜ್ಜನರು, ಸದ್ಭಕ್ತರು ಒಂದು ಜಾಗದಲ್ಲಿ ಕುಳಿತು ಅನುಭವ ಗೋಷ್ಠಿ ಅಥವಾ ಮಾತುಕತೆಗಳಲ್ಲಿ ತೊಡಗಿದಾಗ, ಇನ್ನೊಬ್ಬ ವ್ಯಕ್ತಿ ಬರುವನು ಎಂದಿಟ್ಟುಕೊಳ್ಳೋಣ. ಅವನನ್ನು "ಇತ್ತ ಬಾರಯ್ಯ, ಇತ್ತ ಬಾರಯ್ಯ" ಎಂದು ಹತ್ತಿರಕ್ಕೆ ಕರೆಯುತ್ತಿರುವಾಗ ಅವನು ಅವರ ಪಕ್ಕಕ್ಕೆ ಹೋಗಿ "ಶರಣು" ಎಂದು ಬಾಗಿ ವಂದಿಸಿ, ಸಮೀಪವಿದ್ದವರಿಗೆ ಉಗುಳು ಸಿಡಿಯ-ಬಾರದೆಂದು ತನ್ನ ಕೈಯನ್ನು ಬಾಯಿಗೆ ಅಡ್ಡವಾಗಿ ಹಿಡಿದುಕೊಂಡು ಮೃದು ವರ್ತನೆಯಿಂದ ಮೆಲ್ಲನೆ ಮಾತುಗಳನ್ನಾಡಬೇಕು. ಇಂತಹ ವಿನಯ-ಪೂರ್ಣ ವರ್ತನೆಯು ಪ್ರಮಥರಿಗೆ ಮೆಚ್ಚುಗೆಯಾಗುವುದು. ತನ್ಮೂಲಕ ದೇವನಿಗೂ ಮೆಚ್ಚುಗೆಯಾಗುವುದು.

---

4. ಮೃದು ವಚನ

ಕಂಡ ಭಕ್ತರಿಗೆ ಕೈ ಮುಗಿವಾತನೆ ಭಕ್ತ
ಮೃದು ವಚನವೆ ಸಕಲ ಜಪಂಗಳಯ್ಯಾ
ಮೃದು ವಚನವೆ ಸಕಲ ತಪಂಗಳಯ್ಯಾ
ಸದುವಿನಯವೆ ಸದಾಶಿವನ ಒಲುಮೆಯಯ್ಯಾ,
ಲಿಂಗದೇವಯ್ಯನಂತಲ್ಲದೊಲ್ಲನಯ್ಯಾ.

- ಬ.ವ.ದೀ -246

ಭಾವಾರ್ಥ

ಸಮಾಜ ಜೀವಿಯಾದವನು ಕೆಲವು ಶಿಷ್ಟಾಚಾರಗಳನ್ನು ರೂಢಿಸಿಕೊಳ್ಳಬೇಕು. ಅದು ಅವನ ಸಂಸ್ಕಾರದ ಪ್ರತಿಫಲ, ಸಂಸ್ಕೃತಿಯ ಮಾನದಂಡ.

ತನ್ನ ಸಮಾಜದ ಜನರನ್ನು, ಮಿತ್ರರನ್ನು, ಪರಿಚಿತರನ್ನು ಕಂಡಾಗ ತಕ್ಷಣವೇ ಕೈಮುಗಿಯಬೇಕು. ಮುಗುಳ್ನಕ್ಕು ಮೃದುವಾದ ಮಾತುಗಳಿಂದ ಯೋಗಕ್ಷೇಮ ವಿಚಾರಿಸಿಕೊಳ್ಳಬೇಕು. ಕಂಡರೂ ಕಾಣದಂತೆ ಹೊರಟು ಹೋಗುವುದಾಗಲೀ, ವ್ಯಂಗ್ಯವಾದ ಕೊಂಕು ಮಾತುಗಳನ್ನಾಡು-ವುದಾಗಲೀ, ದ್ವೇಷ-ಮತ್ಸರಗಳನ್ನು ತೋರಿಸು-ವಂತೆ ಸಿಡಿಗುಟ್ಟುವುದಾಗಲೀ ಸಲ್ಲದು. ಇವು ಭಕ್ತನ ಲಕ್ಷಣಗಳಲ್ಲ.

ಮೃದುವಾದ ಎಲ್ಲರನ್ನು ಒಲಿಸುವ, ನಲಿಸುವ, ಸಾಂತ್ವನಿಸುವ ನಲ್ಮಾತುಗಳು ಜಪಕ್ಕೆ ಸಮಾನ; ತಪಸ್ಸನ್ನೇ ಮಾಡಿದಂತೆ ! ಹದನಾದ, ಮೃದುವಾದ ಭೂಮಿಯಲ್ಲಿ ಬೆಳೆಯು ಚೆನ್ನಾಗಿ ಬರುವಂತೆ, ಸದ್ವಿನಯದ ಭೂಮಿಯಲ್ಲಿ ಸದುಗುಣಗಳ ಬೆಳೆ ಚೆನ್ನಾಗಿ ಬೆಳೆದು, ಸದಾಶಿವನೊಲಿಮೆಯೆಂಬ ಫಲವು ಹುಲುಸಾಗಿ ಬರುವುದು. ಹಾಗಲ್ಲದೆ ಗಡಸು ಭೂಮಿಯಂತಹ ಹೃದಯ, ಒರಟುತನದ ಕಲ್ಲಿನ ದುಂಡಿಗಳು, ದ್ವೇಷ-ಮಾತ್ಸರ್ಯ, ಕುಹಕ-ಕೊಂಕುಗಳ ಕಳೆಯಿದ್ದರಲ್ಲಿ ಲಿಂಗದೇವನೊಲಿಮೆ ಎಂಬ ಬೆಳೆ ಹೇಗೆ ಬರಲು ಸಾಧ್ಯ ? ಹೀಗಾಗಿ ಅಂತಹವರಿಗೆ ಲಿಂಗದೇವನು ಒಲಿಯನು.

ಭಕ್ತಿ ನಮನ

ಮಾರ್ದನಿಯಿಂ ಧರ್ಮದ ನಿಜ ಮರ್ಮವನ್ನರುಹಿ
ಅಜ್ಞಾನದ ಕಳೆಯ
ತೆಗೆದು ಸುಜ್ಞಾನದ ಬೀಜವಂ ಬಿತ್ತಿ ವಿಚಾರವಂತಿಕೆಯ
ಉದಕವನೆರೆದು
ಮಹಿಯೊಳ್ ಮಹತ್ಕ್ರಾಂತಿಯಂಗೈದು, ಬಸವಾದಿ
ಶರಣರ ಶುಭ
ಹಾರೈಕೆಯಿಂದ ಬಸವ ಧರ್ಮ ಪೀಠದ ಧೀಮಂತ
ಮಹಾಜಗದ್ಗುರುವಾಗಿ ಲಿಂಗ
ದೇವನ ಲೀಲೆಯ ಸಾರಿ, ವಚನ ಸಾಹಿತ್ಯದ
ಮಹಿಮೆಯ ತೋರಿ ಅ
ವಿಶ್ರಾಂತವಾಗಿ, ಅಹರ್ನಿಶಿ ಧರ್ಮಬೋಧನೆಯಲ್ಲಿ
ತೊಡಗಿದ ಪೂಜ್ಯ ಮಾತಾಜಿಗಿದೋ ಭಕ್ತಿನಮನ.

- ಸುಜ್ಞಾನಪ್ರಭು, ತುಮಕೂರು

ಅಪ್ಪಾಜಿ, ಓ ಅಪ್ಪಾಜಿ -ಕರುಳ ಕರೆ

ಸದ್ದುಗದ್ದಲವಿಲ್ಲದೆ ಎದ್ದು ಹೋದ ಅಪ್ಪಾಜಿ
ಅಲ್ಲಿಂದೆದ್ದು ಬಂದೊಮ್ಮೆ ಎಮ್ಮಗಳ ಸಲಹಲಾರಿರಾ ?
ಹೋಗಿ ಬರುವೆ ನಾನು ಎಂದೊಮ್ಮೆ ಹೇಳಲಿಲ್ಲ
ಎಲ್ಲಿಗೆ ಹೋದಿರಿ ಅವಸರವಾಗಿ ಎಂದೂ ತಿಳಿಸಲಿಲ್ಲ
ಯಾವಾಗ ಮತ್ತೆ ಬರುವಿರೆನ್ನುವ ಸುದ್ದಿ ಯಾರಿಗೂ ಕೊಡಲಿಲ್ಲ
ಎಂತು ಬರುವಿರೆಂದಾದರೂ ಎಮಗೆ ನೋಡುವ ದೃಷ್ಟಿ ಇಡಲಿಲ್ಲ
ಕಾಯುತಿಹೆವು ನಾವು ಬಿಟ್ಟ ಕಣ್ಣಿನಿಂದ ಮೌನದಲಿ
ಕರುಣೆಸಿರಿ ಅಪ್ಪಾಜಿ ಬಂದೊಮ್ಮೆ ; ಎಮ್ಮಗಳ ನೋಡಿ ಸಲಹಲಾರಿರಾ ?
ಬಸವ ಧರ್ಮಕೆ ಮರುಪಟ್ಟವ ಕಟ್ಟುವಾ ಕಾಲ
ಪ್ರಭುವಿನಾ ಆಣತಿಯನು ಬೇಗದಿಂ ಪೂರೈಸುವಾ ಕಾಲ
ಚೆನ್ನಬಸವಣ್ಣನಾ ಧರ್ಮಕಟ್ಟಳೆಯ ನೇಮದಾ ಕಾಲ
ಮಡಿವಾಳ ಮಾಚಿತಂದೆಗಳ ಪೂರ್ಣ ಪ್ರಜ್ಞೆಯ ಕಾಲ
ಬಂದಿಹುದು ಹತ್ತಿರಕೆ ತಂದವರು ನೀವೆಲ್ಲಿ
ಈ ದಿನಗಳಲ್ಲಿ ? ಬಂದೊಮ್ಮೆ ಎಮ್ಮಗಳ ಸಲಹಲಾರಿರಾ ?
ಅಪ್ಪಾಜಿ ನಿಮಗೆ ಗೊತ್ತೆ ? ದೆಹಲಿಯವರೆಗೂ
ಬಸವ ಧ್ವಜವ ಹಿಡಿದು ಹೋಗಿ ಬಂದೆವು ನಾವು
ಕೆಂಪುಕೋಟೆಯ ಪ್ರಾಂಗಣದಲಿ ಧರ್ಮ ಧ್ವಜವ
ಹಾರಿಸಿ, ಮೆರೆಸಿ ನಿಮ್ಮ ಸಂಕಲ್ಪವ ಸ್ಮರಿಸಿದೆವು ನಾವು
ಮತ್ತೆ ಮುಂಬಯಿಯ ಮಹಾನಗರದ ಆಜಾದ
ಮೈದಾನದಲ್ಲಿ ನಿಂತು ನಿಮ್ಮ ಕೂಗಿದೆವು ನಾವು
ಬರಲಿಲ್ಲವೇಕೆ ? ಬಂದೊಮ್ಮೆ ಎಮ್ಮಗಳ ನೋಡಿ ಸಲಹಲಾರಿರಾ ?
ಕಟ್ಟುತಿಹೆವು ಎಲ್ಲೆಲ್ಲೂ ಬಸವ ಮಂಟಪಗಳ ನಾಡಿನಲ್ಲಿ
ಬೆಳೆಸುತಿಹೆವು ರಾಷ್ಟ್ರೀಯ ಬಸವ ದಳಗಳ ತಿಮ್ಮ ನೆನಪಲಿ
ನಿಂತಿಹವು ಗಣಾಚಾರಿ ದಳಗಳು ತಮ್ಮ ಆಜ್ಞೆಯನುರಸಿ ಕಾವಲಿನಲಿ
ಕಾದಿಹರು ಸಾಧಕ ವೃಂದವೆಲ್ಲ ತಮ್ಮ ಸೇವೆಯ ನೆನಪಲಿ
ಬರುವಿರಿ; ಬಂದೇ ಬರುವಿರೆಂದು ಕಾತರಿಸಿ ನಿಂತಿಹರು ಕಣ್ಣಲಿ
ನೀರು ತುಂಬಿಕೊಂಡು, ಬರಲಾರಿರಾ, ಬಂದೊಮ್ಮೆ ಎಮ್ಮಗಳ ನೋಡಿ ಸಲಹಲಾರಿರಾ ?
ಅಂದು ಇಂದೆನ್ನದೆ ನೀವು ಬಂದೆ ಬರಬೇಕು
ಬಸವ ಕಂದಗಳೆ ನೀವೆಲ್ಲಿ ಎಂದೆಮ್ಮ ಕೇಳಬೇಕು
ನಿಮ್ಮಿರುವ ಎಮ್ಮಲ್ಲಿ ದೃಢಪಡಿಸಿ ತೋರಬೇಕು
ಚೆಂದದಿಂ ಬಸವ ಪ್ರಜ್ಞೆಯನು ಮತ್ತೆ ಸಾರಬೇಕು
ಜೋ ಕುಛ್ ಹುವಾ ಅಚ್ಛಾ ಹುವಾ ಎಂದು ಸದಾ
ನಿಮ್ಮ ವಾಣಿ ನಮ್ಮ ಕಿವಿಯಲ್ಲಿ ಮೊಳಗುತ್ತಿರಬೇಕು
ಚಿ.ಮೂರ ಗೊಣಗಾಟ. ಬೃಹನ್ಮಠದವರ ತಿಣುಕ್ಯಾಟ ಕಂಡು
ಚಟಾಕಿ ಹಾರಿಸಿ ನೀವು ಸವಾಲೆಸುವುದಕೆ ಬರಬೇಕು !
ಯಾವುದಕೂ ಜಗ್ಗದೆ ಬಗ್ಗದೆ ಮೇರು ಪರ್ವತವಾಗಿ
ನೆಲೆನಿಂತು ಬಸವ ಧರ್ಮ ಪತಾಕೆಯ ಬಾನೆತ್ತರಕೆ ಹಿಡಿದೆತ್ತಿದ
ನಿಮ್ಮ ಕುಡಿ ಮಾತಾಜಿಯ ಕಂಡು, ಹರಸಿ ಹಾರೈಸುವುದಕೆ
ಒಮ್ಮೆ ಒಮ್ಮೆ ದಯವಿಟ್ಟು ಬಂದೆ ಬರಬೇಕು ಅಪ್ಪಾಜಿ
ಬಂದೊಮ್ಮೆ ಎಮ್ಮಗಳ ನೋಡಿ ಸಲಹುದಕೆ.

- ಮಾತಾತನಯ, ವೀರಣ್ಣ ಕೊಲ್ಹಾಳ್ಳಿ, ಕೊಪ್ಪಳ.

ಇಂದು ಹೊಳೆದ ಸತ್ಯ

-ಮಾತಾಜಿ

ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯ
ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರು.
ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯ, ಲಿಂಗದೇವಾ. -ಬ.ವ.ದೀ. 157

ಧರ್ಮಪಿತ ಬಸವಣ್ಣನವರ ಈ ಒಂದು ವಚನವನ್ನು ಓದಿರುವುದು, ಮನನ ಮಾಡಿರುವುದು ಸಾವಿರಾರು ಬಾರಿ. ಪುನಃ ಇಂದು (20-6-2001) ಚಿತ್ತದ ಭಿತ್ತಿಯ ಮೇಲೆ ಅದು ಮೂಡತೊಡಗಿತು.

ಮರ್ತ್ಯಲೋಕ ಎನ್ನುವುದು ನಾವಿರುವ ಈ ಸುಂದರ, ಮಾನವ ಲೋಕ. ಇದು ಕರ್ತಾರನ ಕಮ್ಮಟವಂತೆ ! ಕರ್ತಾರನ ಕಮ್ಮಟವನ್ನು ನಾಣ್ಯ ತಯಾರು ಮಾಡುವ ಟಂಕಸಾಲೆಗೆ ಬಹಳ ಜನ ಹೋಲಿಸಿದ್ದಾರೆ. ಇದನ್ನು ಅಕ್ಕಸಾಲಿಗನ ಕಾರ್ಯಾಗಾರಕ್ಕೂ ಹೋಲಿಸಬಹುದು, ಕರ್ತಾರನೇ ಅಕ್ಕಸಾಲಿಗ, ಸಾಧಕ ಜೀವಿಯೆ ಬಂಗಾರ. ಇವನು ಈ ಜಗತ್ತಿನ ಕಾರ್ಯಾಗಾರದಲ್ಲಿ ರೂಪುಗೊಂಡು ಮುಕ್ತಾತ್ಮನೆಂಬ ಆಭರಣವಾಗಿ, ದೇವನಿಗೆ ತೊಡುಗೆಯಾಗಬೇಕು. ನಾಣ್ಯ ಮತ್ತು ಬಂಗಾರದ ಆಭರಣಕ್ಕಿಂತಲೂ ಹೆಚ್ಚು ಉಪಯುಕ್ತವಾದ ಸಾಮಗ್ರಿ ತಯಾರು ಮಾಡುವ ಕಮ್ಮಾರ ಶಾಲೆಗೂ ಈ ಜಗತ್ತನ್ನು ಹೋಲಿಸಬಹುದು. ಒಟ್ಟು ಇದು ಸೃಷ್ಟಿಕರ್ತನ ಕಮ್ಮಟ-Workshop ಜೀವನದ ಪರಿಪೂರ್ಣತೆಯೇ ಇಲ್ಲಿ ತಯಾರಾಗುವ ವಸ್ತು.

"ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರು" - ಇದರ ಅರ್ಥವೇನು ?

1. ಈ ಲೋಕ ಪರಲೋಕ ಎಂದು ಕೆಲವರು ಅರ್ಥ ಮಾಡುವರು. ಧರ್ಮಗುರು ಬಸವಣ್ಣನವರು ಇಲ್ಲಿ-ಅಲ್ಲಿ ಎಂದು ಕೈಬೆರಳು ತೋರಿಸುವಂತಹ ಫೋಟೋವನ್ನು ಸಹ ಕೆಲವರು ಬರೆಸಿದ್ದಾರೆ. ಈ ಲೋಕದಲ್ಲಿ ಸಲ್ಲುವವರು ಪರಲೋಕದಲ್ಲಿಯೂ ಸಲ್ಲುವರು ಎಂದು ಅರ್ಥೈಸುತ್ತಾರೆ. ಮರ್ತ್ಯಲೋಕ ಬಿಟ್ಟು ಬೇರಾವುದೇ ಲೋಕವನ್ನು ನಂಬದೇ ಇರುವ ಧರ್ಮಪಿತರ ವಚನಕ್ಕೆ ಹೀಗೆ ಅರ್ಥಮಾಡುವುದು ಸರಿಯಾದೀತೆ ?

2. "ಈ ಜಗತ್ತಿನಲ್ಲಿ ಪ್ರೀತಿ ಪಾತ್ರರಾದವರು ದೇವನಿಗೂ ಪ್ರೀತಿ ಪಾತ್ರರು . ಇಲ್ಲಿ ಪ್ರೀತಿಸಲ್ಪಡದವರು ಅವನಿಂದಲೂ ಪ್ರೀತಿಸಲ್ಪಡರು." ಎಂದು ಅರ್ಥಮಾಡಬಹುದು. ಆದರೆ ಎಷ್ಟೋ ಸಲ ಅನ್ನಿಸುತ್ತದೆ. ಈ ಜಗತ್ತು ಮಹಾನ್ ಚಿಂತಕರನ್ನು ಅರ್ಥ ಮಾಡಿಕೊಳ್ಳುವುದೇ ಇಲ್ಲ, ಅವರೊಡನೆ ಸಹಕರಿಸುವುದೂ ಇಲ್ಲ. ಅವರು ಸತ್ತ ನಂತರ ಅವರನ್ನು ಪುರಾಣೀಕರಿಸಿ, ವೈಭವಿಸಿ, ಪೂಜಿಸುವುದರಲ್ಲಿ, ಅವರ ಹೆಸರಿನಲ್ಲಿ ಬಡಿದಾಡುವುದರಲ್ಲಿ ತೋರಿಸುವ ಆಸಕ್ತಿಯನ್ನು ಆ ಮಹಾನುಭಾವರು ಬೋಧಿಸಿದ್ದನ್ನು ಆಚರಣೆಗೆ ತರುವುದರಲ್ಲಾಗಲೀ, ಅವರು ಇದ್ದಾಗ ಸಹಕರಿಸುವುದರಲ್ಲಾಗಲೀ ತೋರುವುದಿಲ್ಲ. ಅಂದಾಗ ಜನರಿಗೆ ಅರ್ಥವಾಗದ ಮಾತ್ರಕ್ಕೆ, ಒಪ್ಪಿಗೆಯಾಗದ ಮಾತ್ರಕ್ಕೆ ಅವರು ಹೇಳುವುದು ಸುಳ್ಳೇ ?

ಆದರೆ ವಾಸ್ತವಿಕವಾಗಿ ಒಮ್ಮೊಮ್ಮೆ ಚಿಂತಿಸಿದರೆ ಕೆಲವರು ಮಹಾನ್ ಚಿಂತಕರನ್ನು ಟೀಕಿಸಿ, ವಿರೋಧಿಸಿ, ತೊಂದರೆ ಕೊಟ್ಟರೂ ಜನ ಸಮುದಾಯ ಅವರ ಬೆನ್ನು ಹತ್ತಿದ್ದನ್ನು ಗಮನಿಸಬಹುದು. ವಿರೋಧಿಸುವವರು ಸಂಪ್ರದಾಯವಾದಿಗಳು, ಮತಾಂಧರು, ಬದಲಾವಣೆ ಬಯಸದವರು, ಪಟ್ಟಭದ್ರ ಹಿತಾಸಕ್ತರು ಆಗಿರುವುದನ್ನು ಗಮನಿಸಬಹುದು. ಆದ್ದರಿಂದ ಏಸು, ಸೋಕ್ರತೀಸ್, ಗಾಂಧೀಜಿಯಂತಹ ಮಹಾನುಭಾವರು ದುರಂತ ಮರಣ ಹೊಂದಿರಬಹುದಾದರೂ ಅವರು ಅಷ್ಟೇ ಜನಪ್ರಿಯತೆಯನ್ನು, ಹಿಂಬಾಲಕರನ್ನು ಹೊಂದಿದವರು ಎಂಬುದನ್ನು ಅರಿತುಕೊಳ್ಳಬಹುದು. ಆದ್ದರಿಂದ "ಇಲ್ಲಿ ಸಲ್ಲುವವರು

ಅಲ್ಲಿಯೂ ಸಲ್ಲುವರು" ಎಂಬ ಮಹಾವಾಕ್ಯವನ್ನು ಈ ಜಗತ್ತಿನಲ್ಲಿ ಜನಸಮುದಾಯದಿಂದ ಪ್ರೀತಿಸಲ್ಪಟ್ಟವರು ದೇವರಿಂದಲೂ ಪ್ರೀತಿಸಲ್ಪಡುವರು ಎಂದು ಅರ್ಥ ಮಾಡುವುದೂ ಸಮಂಜಸವೇ ಆದೀತು.

4. ಇಂದು ನನಗೆ ಹೊಳೆದ ಅರ್ಥ ಹೆಚ್ಚು ಸೂಕ್ತ ಎನ್ನಿಸಿತು. ಅದೆಂದರೆ ಇಲ್ಲಿ ಸಲ್ಲುವವರು ಎಂದರೆ "ತನ್ನ ಅಂತರಾತ್ಮ (Conscience ವಿವೇಕ)ಕ್ಕೆ ಒಪ್ಪಿಗೆಯಾಗುವಂತೆ ನಡೆದು ಕೊಳ್ಳುವವರು ಅಲ್ಲಿಯೂ ಅಂದರೆ ದೇವನಲ್ಲೂ ಸಲ್ಲುವರು." ಎಂಬುದು. ಸತ್ಯವಾದಿಯು ಒಂದು ತತ್ತ್ವವನ್ನು ಸತ್ಯವನ್ನು ಪ್ರತಿಪಾದಿಸುವಾಗ ಅದನ್ನು ಅರಿಯದೆ ಇಡೀ ಜಗತ್ತೇ ವಿರೋಧಿಸಿದರೂ ಸತ್ಯವಾದಿಯ ಆತ್ಮಬಲ ಕುಂದಿರುವುದಿಲ್ಲ; ಏಕೆಂದರೆ ಅಂತರಾತ್ಮವು ಅನುಮೋದನೆ ನೀಡಿರುತ್ತದೆ. ಅದೇ ಸುಳ್ಳುಗಾರನನ್ನು ಇಡೀ ಜಗತ್ತೇ ಹೊಗಳಿ, ವೈಭವಿಸುತ್ತಿದ್ದರೂ ಅವನ ಅಂತರಾತ್ಮ ಪಾಪ ಪ್ರಜ್ಞೆಯಿಂದ ಬಾಧಿಸುತ್ತಿರುತ್ತದೆ.

ಅಂತರಾತ್ಮವು ಪರಮಾತ್ಮನ ಪ್ರತಿನಿಧಿ; ಅದಕ್ಕೆ ಒಪ್ಪಿತವಾದುದು ದೇವನಿಗೆ ಒಪ್ಪಿತವಾಗಿಯೇ ತೀರುತ್ತದೆ. ಆದ್ದರಿಂದ ಅಂತರಾತ್ಮಕ್ಕೆ ಸಲ್ಲುವಂತೆ ಬಾಳಿದವನು ದೇವನಿಗೆ ಸಲ್ಲುವವನಾಗುವುದರಲ್ಲಿ ಸಂದೇಹವಿಲ್ಲ.

ದೇವವಾಣಿ

ಸಾಮಾನ್ಯವಾಗಿ ಎಲ್ಲ ಧರ್ಮಗಳವರೂ ತಮ್ಮ ಧರ್ಮಶಾಸ್ತ್ರಗಳನ್ನು ದೇವವಾಣಿ ಎಂದೇ ಭಾವಿಸುತ್ತಾರೆ. ವಿಶಿಷ್ಟ ಪರಿಸರ, ಸಂಸ್ಕೃತಿ, ಜನಾಂಗ, ಭಾಷೆಯ ಹಿನ್ನೆಲೆಯಲ್ಲಿ ಪ್ರವಾದಿಗಳು, ದ್ರಷ್ಟಾರರ ಮೂಲಕ ದೈವೀ ಸಂದೇಶಗಳು ಹರಿದು ಬರುತ್ತವೆ. ಒಬ್ಬನೇ ದೇವನಿದ್ದು, ಅವನ ವಾಣಿಯೇ ಹರಿದು ಬರುವುದಾದರೆ, ಪರಸ್ಪರರ ಧರ್ಮ ಶಾಸ್ತ್ರಗಳಲ್ಲಿ ಅಗಾಧವಾದ ವ್ಯತ್ಯಾಸ ಏಕಿರುತ್ತದೆ ಎಂದು ವಿಚಾರವಾದಿಗಳು, ನಾಸ್ತಿಕರು ಕೇಳುತ್ತಾರೆ.

1. ಮೋಡದಿಂದ ಬೀಳುವ ಮಳೆಯ ನೀರು ಒಂದೇ ಇದ್ದರೂ ಭೂಮಿಯ ಗುಣಕ್ಕೆ ಅನುಗುಣವಾಗಿ ನದಿ, ಹಳ್ಳಗಳ ನೀರಿನ ರುಚಿ ಮತ್ತು ಬಣ್ಣ ಬದಲಾಗುವಂತೆ ಸಂದೇಶವಾಹಕರು ವಾಸಿಸುತ್ತಿರುವ ಪರಿಸರ, ಸಂಸ್ಕೃತಿ ಮುಂತಾದವು ದೇವರ ವಾಣಿಯ ಮೇಲೆ ಪ್ರಭಾವ ಬೀರುತ್ತವೆ. ಹೀಗಾಗಿ ಧರ್ಮಶಾಸ್ತ್ರಗಳಲ್ಲಿ ವ್ಯತ್ಯಾಸ ಕಂಡುಬರುತ್ತದೆ.

2. ಕನ್ನಡಿಯು ಶುಭ್ರವಾಗಿದ್ದಷ್ಟೂ ಪ್ರತಿಫಲನ ಸ್ಪಷ್ಟವಾಗಿ, ಪ್ರಖರವಾಗಿ ಇರುವಂತೆ ಆ ದ್ರಷ್ಟಾರರ, ದಾರ್ಶನಿಕರ ಅಂತರಂಗ ಪರಿಶುದ್ಧವಾಗಿದ್ದಷ್ಟೂ ದೈವೀ ವಾಣಿಯ ಆದೇಶ ಅಷ್ಟೇ ಸ್ಪಷ್ಟವಾಗಿರುತ್ತದೆ.

3. ಮೂಲ ಪುರುಷರು ನೀಡಿದ ಸಂದೇಶ ಪರಿಶುದ್ಧವಾಗಿ ಲೋಕ ಹಿತದ ದೃಷ್ಟಿಯಿಂದ ದಯೆ-ಮಾನವೀಯತೆಗಳಿಂದ ಕೂಡಿ ಇದ್ದರೂ ಅದರಲ್ಲಿ ನಂತರ ದೇವರು-ಧರ್ಮವನ್ನು ಹೊಟ್ಟೆಯ ಪಾಡಿನ ಸಾಧನೆ ಮಾಡಿಕೊಂಡ ಪೂಜಾರಿ-ಪುರೋಹಿತರ ಕೈವಾಡ ಸೇರಿ ಧರ್ಮಶಾಸ್ತ್ರಗಳು ಕಲಂಕಿತಗೊಳ್ಳುವ ಸಾಧ್ಯತೆ ಇರುತ್ತದೆ.

ಇಂದು (20-6-2001) ಅಂತರಂಗದಲ್ಲಿ ಕೆಲವೊಂದು ಆಲೋಚನೆಗಳು ಮೂಡಿದವು. ಪತ್ರಿಕೆಯೊಂದರಲ್ಲಿ ಕಂಡ ಆಹಾರವಿಲ್ಲದೆ ಎಲುಬಿನ ಗೂಡಾದ ಬಾಲಕನನ್ನು ನೋಡಿ ಕರುಳು ಕತ್ತರಿಸಿದಂತಾಯಿತು. ಆಗ ನಾನು ಕೇಳಿದೆ,

1. "ದೇವರೇ, ನಮ್ಮ ದೇಶ ಸಾವಿರಾರು ಗುಡಿಗಳ ಆಗರ, ಕೋಟಿ ಕೋಟಿ ದೇವತೆಗಳ ಬೀಡು. ಆದರೆ ಎಂತಹ ದುಃಸ್ಥಿತಿ; ಕರ್‍ರಾಳ ಬಡತನ! ಸೃಷ್ಟಿಕರ್ತನಾದ ನಿನಗೆ ನೋವೆನಿಸುವುದಿಲ್ಲವೆ ?"

"ನಿನ್ನ ಪ್ರಶ್ನೆ ನಗ್ನ ಸತ್ಯವೊಂದನ್ನು ಬಿಂಬಿಸುತ್ತಿದೆ. ನಿಜ, ಆದರೆ ಈ ದೇಶದ ಜನರು ನನ್ನನ್ನೆಲ್ಲಿ ಅರಿತಿದ್ದಾರೆ, ಆರಾಧಿಸುತ್ತಿದ್ದಾರೆ ? ಪೌರಾಣಿಕ ಕಲ್ಪನೆಗಳಲ್ಲಿ ಕೆಲವರು, ಹಾಳುಮೂಳು ಕ್ಷುದ್ರ ದೈವಂಗಳ ಉಪಾಸನೆಯಲ್ಲಿ ಕೆಲವರು, ಮರ-ಗಿಡ ಸುತ್ತುವುದರಲ್ಲಿ ಮತ್ತೆ ಹಲವರು ನಿರತರಾಗಿ ನನ್ನನ್ನೇ ಮರೆತಿದ್ದಾರೆ. ನನ್ನ ಹೆಸರಿನಲ್ಲಿ ಹಲವಾರು ಮೂಢ ಮತ್ತು ಕ್ರೂರ ಆಚರಣೆ ಮಾಡುತ್ತ ನನಗೂ ಕಲಂಕ ತರುತ್ತಿದ್ದಾರೆ."

2. "ಅದೇನೋ ನಿಜ; ಅಜ್ಞಾನದಲ್ಲಿ ಬಿದ್ದಿರುವ ಈ ಜನರನ್ನು ಮೂಢನಂಬಿಕೆಯ ಕೆಸರಿನಿಂದ ಮೇಲೆತ್ತುವುದು ಕರುಣಾಳುವಾದ ನಿನ್ನ ಕರ್ತವ್ಯವಲ್ಲವೆ ? ಅಜ್ಞಾನಿಯಾದ ಮಗುವು ಅನ್ನಾಹಾರ ತಿನ್ನದೆ ಬರೀ ತುಂಟಾಟದಲ್ಲಿ ಕಾಲ ಕಳೆಯುತ್ತಿದ್ದರೆ ಕರುಣಾಮಯಿಯಾದ ತಾಯಿಯೇ ಹುಡುಕಿ ಮಗುವಿಗೆ ಉಣ್ಣಿಸುವುದಿಲ್ಲವೆ ? ಹಾಗೆ ನೀನು ಈ ಮೂಢರಿಗೆ ಜ್ಞಾನವನ್ನು, ವಿವೇಕವನ್ನು ಏಕೆ ಕೊಡಬಾರದು ?"

"ಅಹುದು, ಅದಕ್ಕಾಗಿಯೇ ನನ್ನ ಪರವಾಗಿ ನನ್ನ ಪ್ರತಿನಿಧಿಗಳನ್ನಾಗಿ ವಿಶೇಷ ವ್ಯಕ್ತಿಗಳನ್ನು ಕಳಿಸಿರುವುದು. ಅವರು ಬಂದು, ನನ್ನ ಆಶಯವನ್ನು ಜಗತ್ತಿಗೆ ತಿಳಿಸಿ, ನನಗೆ ಒಪ್ಪಿತವಾದ ದಾರಿ ಯಾವುದು ಎಂಬುದನ್ನು ತಮ್ಮ ವಚನಗಳ ಮೂಲಕ ಸಾರಿ ಹೇಳಿ, ಜನರನ್ನು ತಿದ್ದಲು ಪರಿಶ್ರಮಿಸಿದರೂ ಅದನ್ನು ಅರ್ಥ ಮಾಡಿಕೊಳ್ಳದಷ್ಟು ಅಜ್ಞಾನಿಗಳು, ಮೊಂಡರೂ ಆಗಿದ್ದಾರೆ ಕೆಲವು ಜನ.

3. "ನೀನು ಬಡತನವನ್ನೇಕೆ ಸೃಷ್ಟಿ ಮಾಡಿದ್ದು ? ಎಲ್ಲರೂ ಸುಖವಾಗಿ ಉಂಡು ಉಟ್ಟು ಇರುವಂತೆ ಮಾಡಬಹುದಿತ್ತಲ್ಲ ?" ನನ್ನ ಪ್ರಶ್ನೆ.

"ಅಹುದು ನನ್ನ ಇಚ್ಛೆಯೂ ಅದೇ! ಕೈ ತುಂಬ ಸಂಬಳ ಬಂದರೂ ದುಶ್ಚಟಗಳ ದಾಸರಾಗಿ, ದುಡಿದ ಹಣವನ್ನೆಲ್ಲ ದುಶ್ಚಟಗಳಿಗೆ ವ್ಯಯಿಸಿ ತಮ್ಮ ಶರೀರದ ಆರೋಗ್ಯವನ್ನೂ ಕೆಡಿಸಿಕೊಳ್ಳುವುದಲ್ಲದೆ, ತಮ್ಮ ಕುಟುಂಬವನ್ನು ದುಃಖಕ್ಕೆ ದೂಡುವರು. ಬಡತನ ನಾನು ಮಾಡಿದ್ದಲ್ಲ. ಪಂಚಭೂತಗಳಿಂದ ಕೂಡಿದ ಬ್ರಹ್ಮಾಂಡವನ್ನು, ಪಂಚವಿಂಶತಿ ತತ್ತ್ವಗಳಿಂದ ಕೂಡಿದ ಪಿಂಡಾಂಡವನ್ನು ಸೃಷ್ಟಿಮಾಡಿ ಕೊಟ್ಟರೂ ಇದನ್ನು ಬಳಸಿಕೊಳ್ಳುವ ಮರ್ಮವರಿಯದೆ ಮನುಷ್ಯ ಬಡತನವನ್ನು ಸೃಷ್ಟಿಮಾಡಿಕೊಂಡಿದ್ದಾನೆ. ನನ್ನ ಇಚ್ಛೆಯನರಿಯದ ಕೆಲವು ಸ್ವಾರ್ಥಿಗಳು ತಾವು ಈ ಜಗತ್ತಿನಲ್ಲಿ ಶಾಶ್ವತವಾಗಿ ಇರುವರೆಂಬಂತೆ ಧನ ಕನಕಗಳನ್ನು ಸಂಗ್ರಹ ಮಾಡಿಕೊಳ್ಳುವುದರಿಂದ, ಸ್ವಾರ್ಥದಿಂದ ಇನ್ನೊಬ್ಬರಿಗೆ ಮೋಸ ಮಾಡುವುದರಿಂದಲೂ ಉಳ್ಳವರು, ಇಲ್ಲದವರು ಎಂಬ ಅಸಮಾನತೆ ಸೃಷ್ಟಿಯಾಗಿದೆ. ಇದು ನನ್ನ ಇಚ್ಛೆಗೆ ವಿರುದ್ಧವಾಗಿದೆ." ಬೇರೆ ಕೆಲಸವಿದ್ದುದರಿಂದ ಇಂದಿನ ಸಂಭಾಷಣೆಯನ್ನು ನಿಲ್ಲಿಸಿದೆ.

ಷಟ್ಕೋನ ಚಿತ್ರದ ಮಾಂಗಲ್ಯ



ಲಿಂಗಾಯತ ಧರ್ಮದ ಲಾಂಛನ ಷಟ್ಕೋನ-ಇಷ್ಟಲಿಂಗದ ಚಿತ್ರವಿರುವ ಲಾಂಛನವನ್ನು ಧ್ವಜದಲ್ಲಿ, ಮನೆಗಳ ಮೇಲೆ, ವಾಹನಗಳ ಮೇಲೆ ಹೊಂದುವುದೇ ಅಲ್ಲದೆ ಮದುವೆಯಲ್ಲಿ ಗಂಡನು ಕಟ್ಟುವ ತಾಳಿಯಲ್ಲಿಯೂ ಇರುವಂತೆ ಮಾಡಬೇಕು. ಈ ಷಟ್ಕೋನ ಲಾಂಛನ ಹೊಂದಿದ ಮಾಂಗಲ್ಯವನ್ನು ತಯಾರು ಮಾಡಿಸಲಾಗಿದೆ. ಆದ್ದರಿಂದ ತಮ್ಮ ಮಕ್ಕಳ ಮದುವೆಗಳಿಗೆ ಇನ್ನು ಇದನ್ನೇ ಬಳಸಬೇಕೆಂದು ಸೂಚಿಸುತ್ತೇವೆ. ಮಾದರಿ ನೋಡಿ ನೀವೇ ಮಾಡಿಸಿಕೊಳ್ಳಬಹುದು. ಇಲ್ಲವೇ ಅದರ ಬೆಲೆ ಕೊಟ್ಟು ಬಸವ ಧರ್ಮ ಪೀಠದಿಂದ ಖರೀದಿಸಬಹುದು. ವಿವರ ಬೇಕಾದವರು ಬೆಂಗಳೂರು ಬಸವ ಮಂಟಪಕ್ಕೆ ಸಂಪರ್ಕಿಸಿರಿ.

-ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

-ಮಾತಾಜಿ

ನೇಪಾಳದ ಹತ್ಯಾಕಾಂಡ ಜ್ಯೋತಿಷ್ಯದ ಪ್ರತಿಫಲವೆ ?

"ಮಾನವ ಜನಾಂಗ ಹಾಳಾದರೂ ಚಿಂತೆಯಿಲ್ಲ ಜ್ಯೋತಿಷ್ಯ ಶಾಸ್ತ್ರ ಮತ್ತು ಜ್ಯೋತಿಷಿಗಳು ಬದುಕಬೇಕು." ಇದು ವೈದಿಕ ಧರ್ಮದ ಧ್ಯೇಯೋದ್ದೇಶ ಇರಬಹುದು. ಜೂನ್ ಒಂದು; ನೇಫಾಳದ ಅರಮನೆಯಲ್ಲಿ ಭಯಂಕರ ಹತ್ಯಾಕಾಂಡ. ಮೊದಲು ಬಂದ ವರದಿಯ ಪ್ರಕಾರ ಹತ್ಯಾಕಾಂಡಕ್ಕೆ ಅದೂ ತಂದೆ, ತಾಯಿ, ಸೋದರಿ ಎಲ್ಲರನ್ನೂ ಕೊಂದ ಮಾರಣಹೋಮಕ್ಕೆ ಜ್ಯೋತಿಷ್ಯದಲ್ಲಿ ರಾಜದಂಪತಿಗಳು ಇಟ್ಟ ನಂಬಿಕೆಯೇ ಕಾರಣ. ರಾಜ ಬೀರೇಂದ್ರ ಮತ್ತು ರಾಣಿ ಐಶ್ವರ್ಯ ಅವರ ಪುತ್ರ ದೀಪೇಂದ್ರ ದೇವಯಾನಿ ರಾಣಾ ಎಂಬುವವಳನ್ನು ಪ್ರೀತಿಸಿದ್ದು ವಿವಾಹವಾಗಲು ಬಯಸಿದ. ಆತ 35ನೆಯ ವಯಸ್ಸಿನ ವರೆಗೂ ಮದುವೆಯಾಗಬಾರದು; ಆದರೆ ತಂದೆಗೆ ಮರಣ ಎಂದು ಜ್ಯೋತಿಷಿಗಳು ಹೇಳಿದ್ದರು. ಅದಕ್ಕಾಗಿ ರಾಣಿ ಐಶ್ವರ್ಯ ಇನ್ನು 6-7ವರ್ಷ ಕಾಯಲು ತಿಳಿಸಿದ್ದರು. ಇದರಿಂದ ಕುಪಿತನಾದ ದೀಪೇಂದ್ರ ಗನ್ ತಂದು, ಎಲ್ಲರನ್ನೂ ಕೊಂದು ತಾನು ಗುಂಡಿಕ್ಕಿ, ಕೊಂದುಕೊಂಡ. ಹೀಗೆ ಪತ್ರಿಕೆಗಳಲ್ಲಿ ವರದಿಯಾಯಿತು. ಈ ವರದಿ ಸತ್ಯವೆಂದು ನಂಬುವುದಾದರೆ ಜ್ಯೋತಿಷ್ಯದ ಹೇಳಿಕೆಯೇ ಈ ದುರಂತಕ್ಕೆ ಕಾರಣ ಎಂಬುದು ಖಚಿತವಾಗುವುದು.

ಇನ್ನೊಂದು ಪತ್ರಿಕೆ ಹೇಳಿಕೆಯ ಪ್ರಕಾರ ದೇವಯಾನಿಯ ಅಜ್ಜಿ ಅರಮನೆಯಲ್ಲಿ ರಾಜನ ಉಪಪತ್ನಿಯಾಗಿದ್ದಳು. ಆದ್ದರಿಂದ ಯುವರಾಜನಿಗೆ ಅಂಥ ಮನೆತನದ ಕನ್ಯೆಯನ್ನು ತಂದುಕೊಳ್ಳುವುದು ಶೋಭಾಯಮಾನವಲ್ಲ ಎಂದು ರಾಣಿ ಐಶ್ವರ್ಯ ಹೇಳಿದ್ದಲ್ಲದೆ ಸುಪ್ರಿಯಾ ಎನ್ನುವವಳನ್ನು ವಿವಾಹವಾಗಿ, ಬೇಕಾದರೆ ದೇವಯಾನಿಯನ್ನು ಉಪಪತ್ನಿಯನ್ನಾಗಿ ಹೊಂದಬಹುದು ಎಂದು ಹೇಳಿದರು. ಆಧುನಿಕ ಶಿಕ್ಷಣ ಪಡೆದ ದೇವಯಾನಿ ಇದನ್ನು ಒಪ್ಪಲಿಲ್ಲ. ಇದರಿಂದ ದೀಪೇಂದ್ರನಿಗೆ ಉದ್ವಿಗ್ನತೆ ಉಂಟಾಗಿ ತಂದೆ-ತಂದೆ, ಸೋದರಿ ಮುಂತಾದವರಿಗೆಲ್ಲ ಗುಂಡಿಕ್ಕಿದ. ಈ ವರದಿ ಪ್ರಕಾರ ಜ್ಯೋತಿಷ್ಯ ಶಾಸ್ತ್ರ ಈ ಭಯಂಕರ ಹತ್ಯೆಗೆ ಕಾರಣವಾಗದೆ ವಂಶ, ಹುಟ್ಟು ಇವುಗಳಲ್ಲಿಟ್ಟ ನಂಬಿಕೆಯು ಕಾರಣವಾಗುತ್ತದೆ.

ಇದೆಲ್ಲಕ್ಕಿಂತ ಮಿಗಿಲಾಗಿ, "ಅರಸೊತ್ತಿಗೆಯ ಅಧಿಕಾರ ಮೋಹದಿಂದ ಈಗ ರಾಜನಾಗಿರುವ ಬೀರೇಂದ್ರರ ತಮ್ಮ ಜ್ಞಾನೇಂದ್ರ ಮತ್ತು ಆತನ ಮಗ ಪರಸ್ ಅವರ ಕಾರಸ್ಥಾನವಿದು. ಇವರ ಜೊತೆಗೆ ನೇಪಾಳದ ಸೇನೆಯೂ ಕೈಜೋಡಿಸಿದೆ. ದೀಪೇಂದ್ರ ಹೆತ್ತವರನ್ನು ಕೊಲೆ ಮಾಡುವಂಥ ಪಾತಕಿಯಲ್ಲ. ಮೇಲಾಗಿ ಗುಂಡು ಬೆನ್ನಿನ ಮೂಲಕ ಹಾದಿದೆ." ಎಂದು ಅನೇಕರು ಸಂದೇಹಿಸುತ್ತಲಿದ್ದು ಈ ಪಾತಕಕ್ಕೆ ಜ್ಞಾನೇಂದ್ರರತ್ತ ಬೊಟ್ಟು ಮಾಡಿ ತೋರಿಸಲಾಗುತ್ತಿದೆ. ಇದೆಲ್ಲ ರಾಜಕೀಯ ವಿಷಯ. ನಮ್ಮ ವಿಶ್ಲೇಷಣೆಯನ್ನು ಧಾರ್ಮಿಕ ನಂಬಿಕೆ ಮತ್ತು ಆಚರಣೆಗೆ ಕೇಂದ್ರೀಕರಿಸುತ್ತೇನೆ.

"ಹಿಂದು ರಾಷ್ಟ್ರ" ಎಂದು ಘೋಷಿಸಿಕೊಂಡ ಏಕಮೇವ ರಾಷ್ಟ್ರ ನೇಪಾಳ. ಭಾರತದಲ್ಲಿ ಹಿಂದುಗಳು ಬಹು ಸಂಖ್ಯಾತರು ಎನ್ನಿಸಿಕೊಂಡಿದ್ದರೂ ಇದು ಸೆಕ್ಯುಲರ್, ಜಾತ್ಯತೀತ ಅಥವಾ ಧರ್ಮನಿರಪೇಕ್ಷ ರಾಷ್ಟ್ರ ಎಂದು ಘೋಷಿಸಿಕೊಂಡಿರುವುದರಿಂದ ಇಡೀ ಜಗತ್ತಿನಲ್ಲಿ ನೇಪಾಳ ಏಕೈಕ ಹಿಂದು ರಾಷ್ಟ್ರ ಎಂಬ ಅಗ್ಗಳಿಕೆಗೆ ಪಾತ್ರವಾಗಿತ್ತು. ಆದರೆ ಈಗ ನಡೆದ ಪ್ರಸಂಗದಿಂದ ಹಿಂದು ವಿಚಾರ ಮತ್ತು ಆಚಾರ ಸಮುಚ್ಚಯ ಎಷ್ಟು ಅಸಹ್ಯವಾಗಿವೆ ಎಂಬುದು ಜಗಜ್ಜಾಹೀರು ಆದಂತೆ ಆಗಿ, ಹಿಂದು ಅನ್ನಿಸಿಕೊಳ್ಳಲು ನಾಚುವಂತೆ ಆಗಿದೆ.

1. ಹತ್ಯೆಯ ಹಿನ್ನೆಲೆ ಏನೇ ಇರಲಿ ಅಂತೂ ಜ್ಯೋತಿಷಿಯು 35ವರ್ಷಗಳವರೆಗೆ

ವಿವಾಹವಾಗಬಾರದು, ಮೊದಲೇ ಆದರೆ ತಂದೆಗೆ ಮರಣ ಎಂದು ಹೇಳಿದ್ದರ ಮೇಲಿನ ನಂಬಿಕೆಯಿಂದ ರಾಣಿ ಐಶ್ವರ್ಯ ಮಗನಿಗೆ ವಿವಾಹಕ್ಕೆ ಒಪ್ಪಿಗೆ ನೀಡಲಿಲ್ಲ; ಇದರಿಂದ ಮಗನಿಗೆ ಸಿಟ್ಟು ಬಂದಿತು.

2. ಜ್ಯೋತಿಷ್ಯವು ಮದುವೆಯಾದರೆ ಕೆಡುಕು ಆಗಬಹುದು ಎಂದು ಹೇಳಬಹುದಾದರೆ ಹತ್ಯೆಯಾಗಿ ನಿಮ್ಮ ವಂಶ ನಿರ್ವಂಶವಾಗುತ್ತದೆ ಎಂದೇಕೆ ಮುನ್ಸೂಚನೆ ಕೊಡಲಿಲ್ಲ ?

3. ಈ ಕಾರಣಕ್ಕೆ ವಿವಾಹಕ್ಕೆ ಒಪ್ಪಿಗೆ ನೀಡಲಾಗಲಿಲ್ಲ ಎಂಬುದರ ಬದಲು ದೇವಯಾನಿಯ ಮುತ್ತಜ್ಜ ರಾಜನ ಉಪಪತ್ನಿಯಾಗಿದ್ದಳು ಎಂಬ ಕಾರಣ ಮುಂದೆ ಮಾಡಿದರೂ ಹಿಂದು ಧರ್ಮ ಹುಟ್ಟಿಸುವ ಭ್ರಾಂತಿ ಎಷ್ಟು ಭಯಂಕರ ಎನ್ನಿಸದೆ ಇರದು. ಹಿಂದುಗಳು ಎಷ್ಟು ಆಧುನಿಕ ಶಿಕ್ಷಣ ಹೊಂದಿ, ಆಧುನಿಕರಂತೆ, ಪಾಶ್ಚಿಮಾತ್ಯರಂತೆ ವೇಷ ಧರಿಸಿದರೂ ಅವರ ಬೌದ್ಧಿಕ ಚಿಂತನೆ ಮಾತ್ರ ಸುಧಾರಿಸಿರುವುದಿಲ್ಲ ಎಂಬುದಕ್ಕೆ ಇದು ಜ್ವಲಂತ ಉದಾಹರಣೆ. ವೇಶ್ಯೆಯ ಮಗಳೇ ಗರತಿಯಂತೆ ಬಾಳಬಾರದೇಕೆ ?

ಹೀಗಿದ್ದಾಗ ದೇವಯಾನಿಯ ಮುತ್ತಜ್ಜ ರಾಜನ ಉಪಪತ್ನಿಯಾಗಿದ್ದಳು ಎಂಬುದು ವಿವಾಹ ನಿರಾಕರಣೆಗೆ ಅರ್ಥಸಹಿತವಾದ ಕಾರಣವಾದೀತೆ ?

4. ಇವೆಲ್ಲಕ್ಕಿಂತಲೂ ಅಸಹ್ಯ ಹುಟ್ಟಿಸಿರುವುದು ಮತ್ತು ಜಗತ್ತಿನ ಗಮನ ಸೆಳೆದಿರುವ ನಾಚಿಕೆಗೇಡಿತನ ವಿಷಯ ಬ್ರಾಹ್ಮಣ ಪೂಜಾರಿಗಳ ಮಾಂಸಾಹಾರ ಭೋಜನ ಮತ್ತು ದೇಶಾಂತರ. ತಂದೆ ಬೀರೇಂದ್ರ ಮತ್ತು ಮಗ ದೀಪೇಂದ್ರರ ಪ್ರೇತಗಳನ್ನು ತೃಪ್ತಿಪಡಿಸಿ ಹೊರಹಾಕಲು ಬ್ರಾಹ್ಮಣ ಪೂಜಾರಿ ಬೇಕಂತೆ. ಆತನು ಸತ್ತವರ ವೇಷ ಧರಿಸಿ 84 ಬಗೆಯ ಭಕ್ಷ್ಯಗಳನ್ನು ತಿನ್ನಬೇಕಂತೆ. ಅದರಲ್ಲಿ ಮಾಂಸಾಹಾರವೂ ಸೇರಿದ್ದು ಪ್ರಾಣಿಗಳ ಮಾಂಸ, ಮಜ್ಜೆಗಳ ಆಹಾರವನ್ನೂ ತಿನ್ನಬೇಕಂತೆ. ಇದನ್ನು ತಿಂದ ಬಳಿಕ ಬ್ರಾಹ್ಮಣನು ಕಲಂಕಿತನಾಗುವನು. ಹೀಗಾಗಿ ಆತನು ದೇಶಾಂತರ ಹೋಗಬೇಕು. ತನ್ನ ಹೆಂಡತಿ-ಮಕ್ಕಳು ಕುಟುಂಬ ವರ್ಗದವರ ಜೊತೆಗೆ ಇರುವಂತಿಲ್ಲ. ಇನ್ನು ಜೀವನ ಪರ್ಯಂತರ ಅಲೆಮಾರಿಯಾಗಿ ತಿರುಗಬೇಕು. ಈ ಭಯಂಕರ ಕೆಲಸ ಮಾಡಲು ಮುಂದೆ ಬಂದ ಬ್ರಾಹ್ಮಣರಿಗೆ ಸಾಕಷ್ಟು ದಕ್ಷಿಣೆ, ವಸ್ತ್ರ-ಒಡವೆ-ಸಂಪತ್ತು ಎಲ್ಲಾ ಅವರ ಬೇಡಿಕೆಗೆ ಅನುಸಾರವಾಗಿ ಕೊಡಲಾಗುವುದು. ಇದೇ ರೀತಿ ಧಾರ್ಮಿಕ ಕ್ರಿಯೆ ನೆರವೇರಿಸಲಾಯಿತು. ಹಿಂದು ಧರ್ಮದ ಒಂದು ಅನಿಷ್ಟ ಆಚರಣೆ ಇಡೀ ಜಗತ್ತಿನ ಗಮನಕ್ಕೆ ಬಂದು ನಿಜಕ್ಕೂ ಹಿಂದುಗಳು ನಾಚಿ ತಲೆ ತಗ್ಗಿಸುವಂತೆ ಆಗುವುದೆಂದರೆ ಉತ್ಪ್ರೇಕ್ಷೆಯಲ್ಲ.

ಧರ್ಮಪಿತ ಬಸವಣ್ಣನವರು ತಮ್ಮೊಂದು ವಚನದಲ್ಲಿ ಹೀಗೆ ಹೇಳುವರು:

ಕುಲದಲ್ಲಿ ಹಾರುವನು ಬ್ರಹ್ಮೇತಿಗೆ ಸಾರುವನು:
ಆರೋ ಮಾಡಿದ ಪಾಪಕ್ಕೆ ತಾನೆ ಕೈಯಾನುವನು !
ಸರಿಯೆ ದೇವಭಕ್ತಂಗಿವನು ?
ಸರಿಯೆ ಲಿಂಗಭಕ್ತಂಗಿವನು ?
ಬಡಗಿ ಮಾಚಲದೇವಿಯ ಕುಲಜೆಯ ಮಾಡೆಹೆವೆಂದು
ಹೊನ್ನ ಕಪಿಲೆಯ ರಾವಣಶಾಖದ ಉಚ್ಛಿಷ್ಟದ ಹಾಲಿನಿಂದ
ಕೂಳನಟ್ಟುಂಬುವರನೇನೆಂಬೆ, ಲಿಂಗದೇವಾ. - ಬ.ವ.ದೀ -581

ಇನ್ನೊಬ್ಬರ ಪಾಪ ಕರ್ಮಗಳನ್ನು ತಾನು ಹೊತ್ತುಕೊಳ್ಳುವನು ಎಂಬ ವಿಚಿತ್ರ ಕಲ್ಪನೆ ವೈದಿಕ ಧರ್ಮದಲ್ಲಿದೆ. ನವಗ್ರಹ ಪೂಜೆ ಮಾಡಿ ದಾನವನ್ನು ಪಡೆದುಕೊಂಡು ಹೋಗುವ ವಿಪ್ರನನ್ನು ನೋಡಬಾರದಂತೆ! ನೋಡಿದರೆ ಆ ಗ್ರಹಗಳು, ಅವುಗಳ ಪೀಡೆ ನೋಡಿದವರಿಗೆ ಬಡಿದುಕೊಳ್ಳುವುದಂತೆ!! ನವಗ್ರಹ ಪೂಜೆ ಮಾಡಿಸಿ ಧ್ಯಾನ, ದಾನ ಒಯ್ಯುವ ಬ್ರಾಹ್ಮಣ ಹೊರ

ಹೋಗುತ್ತಿದ್ದಂತೆಯೇ ಬಾಗಿಲು ಮುಚ್ಚಿಕೊಳ್ಳುತ್ತಿದ್ದರು. ಹಾಗೆಯೇ ಇನ್ನಿತರರು ರಸ್ತೆಯಲ್ಲಿ ಹೋಗುವಾತನನ್ನು ನೋಡಿದರೆ ಅವರಿಗೂ ಪೀಡೆ ಬಡಿದು, ಪುನಃ ಅವರು ನವಗ್ರಹ ಪೂಜೆ ಮಾಡಿಸಿಯೇ ಪಾಪವನ್ನು ಪರಿಹಾರ ಮಾಡಿಕೊಳ್ಳಬೇಕಂತೆ. ಇದೊಳ್ಳೆ ತಮಾಷೆ.

ಒಬ್ಬರಲ್ಲ ಒಬ್ಬರು ನೋಡಿದರೆ ನವಗ್ರಹ ಪೂಜೆ ಸತತವಾಗಿ ನಡೆಯುವುದಲ್ಲವೆ ? ಇದರಿಂದ ಪೂಜಾರಿಗೆ ಲಾಭ ! ಎಂಥಾ ವಿಲಕ್ಷಣ ನಂಬಿಕೆ ಬೆಳೆಸಿದ್ದಾರೆ.

ಶೂದ್ರಳಾದ ಬಡಗಿ ಜಾತಿಯ ಮಾಚಲದೇವಿ ಎಂಬಾಕೆಯನ್ನು ಶ್ರೇಷ್ಠ ಕುಲದವಳನ್ನಾಗಿ ಮಾಡಲು ವಿಪ್ರರು ಒಂದು ವಿಧಾನ ಅನುಸರಿಸಿದಂತೆ ತೋರುತ್ತದೆ. ಬಂಗಾರದ ಹಸುವನ್ನು ಮಾಡಿ, ಅದರಲ್ಲಿ ಹಾಲನ್ನು ತುಂಬಿ, ಹಸುವಿನ ಬಾಯಿಯಲ್ಲಿ ಹೊಕ್ಕು ಹಾಲಿನಲ್ಲಿ ಮಿಂದು ಗುದದ್ವಾರದಿಂದ ಆಕೆ ಹೊರಬರಬೇಕು. ಆ ಹಾಲಿನಿಂದ ಅಡಿಗೆ ಮಾಡಿ ಬ್ರಾಹ್ಮಣರ ಭೋಜನ ಮಾಡಿಸಿ, ಬಂಗಾರದ ಹಸುವನ್ನು ಕತ್ತರಿಸಿ ಊಟ ಮಾಡಿದ ಬ್ರಾಹ್ಮಣರಿಗೆ ನೀಡಿದಾಗ, ಆಕೆ ಶೂದ್ರತ್ವ ಅಳಿದುಕೊಂಡು ಕುಲಶ್ರೇಷ್ಠಳಾಗುವಳು. ಈ ವಿಷಯ ಓದಿದಾಗ ನಮಗೆ ನಂಬಲೇ ಆಗಿರಲಿಲ್ಲ. ಆದರೆ ನೇಪಾಳದಲ್ಲಿ ಬೀರೇಂದ್ರ-ದೀಪೇಂದ್ರರ ಪ್ರೇತಗಳಿಗೆ ಸಂತೃಪ್ತಿ ಮಾಡಲು ಬ್ರಾಹ್ಮಣರು ಅವರ ಪ್ರೇತಾತ್ಮಗಳನ್ನು ಆಹ್ವಾನಿಸಿ ತಾವು ವಿವಿಧ ಭೋಜ್ಯಗಳನ್ನು ಅದರಲ್ಲೂ ಮಾಂಸವನ್ನು ತಿಂದುದು ನೋಡಿದಾಗ ಮಾಚಲದೇವಿಯ ಪ್ರಸಂಗ ಖಂಡಿತಾ ನಡೆದಿರಲೇಬೇಕು ಎನ್ನಿಸಿತು.

ಹಿಂದು ಒಂದು ಧರ್ಮವಲ್ಲ, ಹಲವಾರು ಬುಡಕಟ್ಟು (tribes) ಗಳಿಂದ ಕೂಡಿದ ಒಂದು ಸಮೂಹವಾಚಕ ಪದ. ಬೌದ್ಧ ಧರ್ಮ, ಲಿಂಗಾಯತ ಧರ್ಮಗಳಂತಹ ಪ್ರಗತಿಪರ ಧರ್ಮಗಳಲ್ಲಿ ಬುದ್ಧ; ಬಸವಣ್ಣನವರಂತಹ ಮಹಾಪುರುಷರು ಧರ್ಮಸ್ಥಾಪಕರಾಗಿ ಹೊಸ ಧರ್ಮ ಸಂಹಿತೆಗಳನ್ನು ಕೊಟ್ಟು ಬುಡಕಟ್ಟುಗಳ (tribal)ಮತ್ತು ಬಣಗಳ (clans) ಆಚರಣೆಗಳಲ್ಲಿ ಅರ್ಥರಹಿತವಾದುದನ್ನು ಖಂಡಿಸಿ, ವಿಮರ್ಶಿಸಿ ಜನರಲ್ಲಿ ಏಕರೂಪದ ಆಚರಣೆಗಳನ್ನು ತಂದರು. ಹಿಂದು ಧರ್ಮದ ಹೆಸರಿನಲ್ಲಿ ವೈದಿಕ ಧರ್ಮದ ಆಚರಣೆಗಳೇ ಪ್ರಮುಖ ಪಾತ್ರವಹಿಸಿ ಅದರಲ್ಲಿ ತುಂಬಿರುವ ಜಾತಿ ಪದ್ಧತಿ, ಮೂಢನಂಬಿಕೆ, ಬಹುದೇವತೋಪಾಸನೆ ಮೇಲುಗೈ ಸಾಧಿಸಿವೆ. ಈ ವಿಲಕ್ಷಣ ವಿಪರ್ಯಾಸಗಳಿಂದ ಬಿಡುಗಡೆ ಹೊಂದದ ಹೊರತು ಮಾನವನ ಪ್ರಗತಿಯಾಗಲಿ, ಭಾರತ ದೇಶದ ಏಳ್ಗೆಯಾಗಲಿ ಸಾಧ್ಯವಿಲ್ಲ ಎಂದು ಹೇಳಿದರೆ ಉತ್ಪ್ರೇಕ್ಷೆಯಾಗದು. -ಮಾತಾಜಿ

ಭಕ್ತಿ ನಮನ

ಅನುಭವ-ಅನುಭಾವದಲಿ ಮೇರು ಪರ್ವತವಾಗಿ, ಅ
ಕ್ಕರೆಯಿಂದ ''ಮಹಾದೇವಿಯಕ್ಕ'' ಎಂದೆನಿಸಿ, ತನುವಿನೊಳಗಿದ್ದು ತನುವಗೆದ್ದು
ಮನದೊಳಗಿದ್ದು ಮನವಗೆದ್ದು, ಅಂಗಸಂಗವ ತೊರೆದು ಭವವಗೆದ್ದು
ಹಾಡಿ ಹಾಡಿ ಹಂಬಲಿಸಿ ಸಾವಿಲ್ಲದ, ಕೇಡಿಲ್ಲದ, ರೂಹಿಲ್ಲದ
ದೇವಂಗೊಲಿದು ''ಶರಣಸತಿ ಲಿಂಗಪತಿ'' ಭಾವದಿಂದೊಡಗೂಡಿ
ವಿರಕ್ತ-ಭಕ್ತಿಯಿಂ ವಿಜೃಂಭಿಸಿದ ಜಗನ್ಮಾತೆಗಿದೋ ಭಕ್ತಿಪೂರ್ವಕ ನಮನ

- ಸುಜ್ಞಾನ ಪ್ರಭು, ತುಮಕೂರು.

ಬಸವ ಗಂಗೋತ್ರಿಯಲ್ಲಿ ಬಸವ ತತ್ತ್ವ ತರಬೇತಿ ಕಮ್ಮಟ

ಅಕ್ಟೋಬರ್ 14 ರಿಂದ 28ರ ವರೆಗೆ

ವಿಶ್ವ ಕಲ್ಯಾಣ ಮಿಷನ್ ಸಂಸ್ಥೆಯಿಂದ ಪ್ರತಿವರ್ಷವೂ ಬಸವ ತತ್ತ್ವ ತರಬೇತಿ ಕಮ್ಮಟವನ್ನು ಮೇ ತಿಂಗಳ ರಜೆ ಅಥವಾ ಅಕ್ಟೋಬರ್ ರಜೆಯಲ್ಲಿ ನಡೆಸಲಾಗುವದು. ಆರ್ಥಿಕ ಅನಾನುಕೂಲತೆಯಿಂದಾಗಿ ಈ ಸಲದ ಕಮ್ಮಟವನ್ನು 2001ರ ಏಪ್ರಿಲ್/ ಮೇ ತಿಂಗಳಲ್ಲಿ ನಡೆಸಲಾಗಲಿಲ್ಲ.

ತರಬೇತಿ ಶಿಬಿರಗಳಿಂದ ಸಿಕ್ಕುವ ಜ್ಞಾನ ಅಪಾರ. ಹೀಗಾಗಿ ಬಹಳ ಜನರು ಕಮ್ಮಟವನ್ನು ಏರ್ಪಡಿಸಬೇಕೆಂದು ಆಗ್ರಹಿಸುತ್ತಲಿದ್ದಾರೆ. ಶರಣ ಬಂಧುಗಳ ಆತ್ಮೀಯ ಆಗ್ರಹಕ್ಕೆ ಸ್ಪಂದಿಸಿ ಅಕ್ಟೋಬರ್ ತಿಂಗಳಲ್ಲಿ ತರಬೇತಿ ಕಮ್ಮಟ ಏರ್ಪಡಿಸಲು ನಿರ್ಧರಿಸಲಾಗಿದೆ.

1. ಅಕ್ಟೋಬರ್ 14, 2001 ಭಾನು(ದೇವ)ವಾರದಿಂದ ಅಕ್ಟೋಬರ್ 28 ಭಾನು(ದೇವ)ವಾರದ ವರೆಗೆ 15ದಿವಸಗಳ ತರಬೇತಿ ಕಮ್ಮಟ ಜರುಗುತ್ತದೆ; 27 ಮತ್ತು 28 ಎರಡು ದಿವಸ ಭಕ್ತಿಪಕ್ಷ ಸಮ್ಮೇಳನ ನಡೆದು, ದಿ.28-10-2001ರಂದು ಬೆಳಿಗ್ಗೆ 10-30ಕ್ಕೆ ಸಮಾರೋಪ ಸಮಾರಂಭ ನಡೆಯುವುದು

23. 15ದಿವಸಗಳ ಶಿಬಿರ ಶುಲ್ಕ ಒಬ್ಬರಿಗೆ 350ರೂ (ಮುನ್ನೂರ ಐವತ್ತು) ವಿದ್ಯಾರ್ಥಿಗಳಿಗೆ ಮತ್ತು ಆರ್ಥಿಕವಾಗಿ ಅಶಕ್ತರಿಗೆ ಒಬ್ಬರಿಗೆ 200(ಎರಡುನೂರು) ರೂಗಳು. ಉಚಿತವಾಗಿ ಭಾಗವಹಿಸಬೇಕೆಂಬ ಇಷ್ಟವುಳ್ಳ ಆರ್ಥಿಕ ದುರ್ಬಲರು ಮೊದಲೇ ಪತ್ರ ಬರೆದು ಒಪ್ಪಿಗೆ ಪಡೆದುಕೊಳ್ಳಬೇಕು. ಭಕ್ತಿಪಕ್ಷ ಸಮ್ಮೇಳನ ಶುಲ್ಕ ಒಬ್ಬರಿಗೆ 60ರೂ

ವಿಶೇಷ ಸೂಚನೆ : ಊಟ - ವಸತಿ - ಕಾರ್ಯಕ್ರಮಗಳ ವೆಚ್ಚ ಬಹಳ ಬರುವುದರಿಂದ ಆರ್ಥಿಕವಾಗಿ ಸಶಕ್ತರಾದ ಶಿಬಿರಾರ್ಥಿಗಳು ತಮ್ಮ ಶಿಬಿರ ಶುಲ್ಕವನ್ನು ಕೊಡುವುದಲ್ಲದೆ ಹೆಚ್ಚಿನ ಕಾಣಿಕೆಯನ್ನು ಕೊಟ್ಟು ಸಹಕರಿಸಬೇಕು. ಒಳ್ಳೆಯ ಕಾರ್ಯಕರ್ತರು, ಕ್ರಿಯಾಮೂರ್ತಿಗಳಾಗುವ ಪ್ರತಿಭೆ ಇದ್ದವರು ಆರ್ಥಿಕವಾಗಿ ದುರ್ಬಲರಿದ್ದರೆ ರಾಷ್ಟ್ರೀಯ ಬಸವ ದಳದವರು ಗಾಡಿ ಖರ್ಚು ಮತ್ತು ಶಿಬಿರ ಶುಲ್ಕ ನೀಡಿ ಕಾರ್ಯಕರ್ತರನ್ನು ತರಬೇತಿಗೆ ಕಳಿಸಬೇಕು.

3. ಕ್ರಿಯಾಮೂರ್ತಿಗಳಾಗಿ ತರಬೇತಿ ಹೊಂದಿ ಧಾರ್ಮಿಕ ವಿಧಿ-ವಿಧಾನ ನೆರವೇರಿಸುವವರ ಸಂಖ್ಯೆ ಬೆಳೆಯಬೇಕಾಗಿದೆ. ತರಬೇತಿ ಕಮ್ಮಟವು ಸರ್ವಾಂಗೀಣ ತರಬೇತಿ ನೀಡುತ್ತದೆ. ತರಬೇತಿಯ ಬಳಿಕ ಕ್ರಿಯಾಮೂರ್ತಿ ದೀಕ್ಷೆ ನೀಡಿ, ಪ್ರಮಾಣ ಪತ್ರ (certificate) ಕೊಡಲಾಗುವುದು

4. ತರಬೇತಿಯ ಸ್ಥಳ: ಬೆಂಗಳೂರು-ಮೈಸೂರು ಹೆದ್ದಾರಿಯ ಮೇಲಿರುವ, ಬೆಂಗಳೂರಿನಿಂದ 21ಕಿ.ಮಿ ದೂರದ ಕುಂಬಳಗೋಡು ಗ್ರಾಮ ವ್ಯಾಪ್ತಿಯಲ್ಲಿರುವ ಬಸವ ಗಂಗೋತ್ರಿ.

5. ಅತ್ಯಂತ ಉಪಯುಕ್ತವಾದ ಈ ಬಸವ ತತ್ತ್ವ ತರಬೇತಿ ಕಮ್ಮಟದ ಏರ್ಪಾಡಿಗಾಗಿ ಉದಾರವಾದ ಧನ ಸಹಾಯ ಮಾಡುವವರಿಗೆ ಅವಕಾಶವಿದೆ

6. 2002ರ ಜನವರಿ 11ರಿಂದ 15ರ ವರೆಗೆ ನಡೆಯುವ 15ನೆಯ ಶರಣ ಮೇಳದ ಭಿತ್ತಿಪತ್ರ, ಕರಪತ್ರ, ರಸೀತಿ ಪುಸ್ತಕಗಳನ್ನು ಭಕ್ತಿ ಪಕ್ಷ ಸಮ್ಮೇಳನ ಸಮಯದಲ್ಲಿ ವಿತರಿಸಲಾಗುವುದು.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿಯಲ್ಲಿ ನಡೆಯುವ ಈ ಕಮ್ಮಟದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಶರಣ ಬಂಧುಗಳು ಭಾಗವಹಿಸಿ ಬಸವ ತತ್ತ್ವ ತರಬೇತಿ ಕಮ್ಮಟದ ಸದುಪಯೋಗ ತೆಗೆದುಕೊಳ್ಳುವಿರಾಗಿ ಹಾರೈಸುತ್ತೇವೆ.

ಪೂಜ್ಯ ಶ್ರೀ ಸದ್ಗುರು ಅಲ್ಲಮಪ್ರಭು ಸ್ವಾಮಿಗಳು, ಪ್ರಧಾನ ಕಾರ್ಯದರ್ಶಿ
ವಿಶ್ವ ಕಲ್ಯಾಣ ಮಿಷನ್, ಬಸವ ಮಂಟಪ, 2035, 20ನೇ ಮೇನ್, ಕಾರ್ಡ್ ರಸ್ತೆ,
ರಾಜಾಜಿ ನಗರ, ಬೆಂಗಳೂರು-560 010, ದೂರವಾಣಿ: 080- 3325335/3322790

ವೀರಶೈವರಲ್ಲೂ ಇಲ್ಲದ, ಲಿಂಗಾಯತರಲ್ಲೂ ಇಲ್ಲದ ಅಂತರ ಪಿಶಾಚಿಗಳು

- ಲೇಖಕ: ಎಸ್.ಟಿ. ಚಂದ್ರಶೇಖರಪ್ಪ

ಕ್ರಿ.ಶ. 1956ನೇ ಇಸವಿ, ''ನೊಣಬ'' ಲಿಂಗಾಯತರ ಹುಡುಗನಾದ ನಾನು, (ಆಗಿನ್ನು 'ನೊಳಂಬ' ಎಂಬುದು ಚಾಲ್ತಿಯಲ್ಲಿರಲಿಲ್ಲ) ವಿದ್ಯಾಭ್ಯಾಸ ಮುಂದುವರಿಸಲು, ಬೆಂಗಳೂರಿಗೆ ಬಂದು, ಪಂಚಾಚಾರ್ಯ ಬ್ಯಾನರ್‌ನ ವೀರಶೈವ ವಿದ್ಯಾರ್ಥಿ ನಿಲಯಕ್ಕೆ ಸೇರಲು, ಅರ್ಜಿ ಹಾಕಬೇಕೆಂದು, ನಿಗದಿತ ಅರ್ಜಿ ಫಾರಂ ತುಂಬಲು ಪ್ರಾರಂಭಿಸಿ, ಕೊನೆಯ ಕಾಲಂ ನೋಡಿ ಕಕ್ಕಾಬಿಕ್ಕಿಯಾಗಿ ಏನೆಂದು ತುಂಬಬೇಕೆಂದು ತಿಳಿಯದೆ, ಅಲ್ಲಿಯೇ ಕುಳಿತು, ಫಾರಂ ತುಂಬುತ್ತಿದ್ದ ಬೇರೊಬ್ಬ ವಿದ್ಯಾರ್ಥಿಯು ಬರೆದುದನ್ನು ಕದ್ದು ನೋಡಿ ನಾನು ಅದನ್ನೇ ತುಂಬಿ, ವಿದ್ಯಾರ್ಥಿನಿಲಯದ ಕಛೇರಿಗೆ ತಲುಪಿಸಿದ್ದಾಯ್ತು. ಆ ಕಾಲಂನಲ್ಲಿ ಕೇಳಿದ್ದು, ನೀವು ಯಾವ ಪೀಠಕ್ಕೆ ಸೇರಿದವರು ? ನಿಮ್ಮ ಗೋತ್ರ ಮತ್ತು ಸೂತ್ರ ಯಾವುದು ? ಇದನ್ನು ದೃಢೀಕರಿಸಲು ಶಿಫಾರಸು ಪತ್ರ ಲಗತ್ತಿಸಿದೆಯೇ ? ಇವಾವು ಗೊತ್ತಿಲ್ಲದ ನನಗೆ, ಏನು ಬರೆಯಲು ತೋಚದೆ, ಬೇರೊಬ್ಬ ವಿದ್ಯಾರ್ಥಿಯು ಬರೆದ ನನ್ನದಲ್ಲದ ರೇಣುಕ ಪೀಠ, ರೇಣುಕ ಗೋತ್ರ ಎಂಬ ಸೂತ್ರಗಳನ್ನು ನನ್ನದಾಗಿಸಿಕೊಂಡು, ಶಿಫಾರಸು ಪತ್ರಕ್ಕಾಗಿ, ನನ್ನ ಸಮಾಜದ ಅಂದಿನ ಮಠದ ಸ್ವಾಮಿಗಳನ್ನು ಸಂಪರ್ಕಿಸಿದಾಗ, ಅವರು ಮೊದಲು ಶಿಫಾರಸ್ ಪತ್ರ ಕೊಡಲು ಹಿಂಜರಿದು ನಂತರ ಕೊಟ್ಟ, ಪತ್ರದ ಶಿರೋಭಾಗ (ಲೆಟರ್‌ಹೆಡ್) ನೋಡಿ ಆಶ್ಚರ್ಯವಾಯ್ತು. ಲೆಟರ್‌ಹೆಡ್‌ನ ಮೊದಲ ಸಾಲು ''ಶ್ರೀ ಗುರುಸಿದ್ಧರಾಮೇಶ್ವರಾಯ ನಮಃ'' ಎಂದು ಸಣ್ಣ ಅಕ್ಷರಗಳಲ್ಲಿ ಪ್ರಿಂಟ್ ಮಾಡಲಾಗಿತ್ತು ನಂತರ ದೊಡ್ಡ ಅಕ್ಷರಗಳಲ್ಲಿ ಶ್ರೀಮದ್ ರಂಭಾಪುರಿ ವೀರಸಿಂಹಾಸನ ಶ್ರೀಶ್ರೀಶ್ರೀ 1008 ಜಗದ್ಗುರು....... ಎಂದು ಎಡಭಾಗದಲ್ಲಿ ಲಿಂಗದಲ್ಲಿ ಉದ್ಭವವಾದ ಕಮಂಡಲವನ್ನು ಒಂದು ಕೈಯಲ್ಲಿ, ಕೋಲನ್ನು ಇನ್ನೊಂದು ಕೈಯಲ್ಲೂ ಹಿಡಿದು ನಿಂತಿರುವ ಮೂರ್ತಿಯ ಚಿತ್ರ ನೋಡಲಾಗಿ, ಇದೇ ತರಹದ ಮೂರ್ತಿಯ ಚಿತ್ರವಿದ್ದ 'ಶ್ರೀ ಗುರು ಸಿದ್ಧರಾಮೇಶ್ವರಾಯ ನಮಃ' ಎಂಬ ಶಿರೋನಾಮೆಯನ್ನು ಹೊರತು ಪಡಿಸಿ, ಉಳಿದಂತೆ ವಿವರವಿದ್ದ ಬೆಂಗಳೂರಿನ ವಿದ್ಯಾರ್ಥಿನಿಲಯದ ಅರ್ಜಿ ಫಾರಂನ ಶಿರೋಭಾಗವನ್ನು ಮಠದ ಸ್ವಾಮಿಗಳಲ್ಲಿ ನಿವೇದಿಸಿಕೊಂಡಾಗ ಅವರು ಉತ್ತರ ಕೊಡದಾದರು.

ಬೆಂಗಳೂರಿನ ವಿದ್ಯಾರ್ಥಿ ನಿಲಯದ ಇಂಟರ್‌ವ್ಯೂ ಸಮಯದಲ್ಲಿ ಈ ಶಿಫಾರಸ್ ಪತ್ರ ನೋಡಿ ಸದಸ್ಯರು ವ್ಯಂಗ್ಯವಾಗಿ ಮಾತನಾಡಿದ್ದನ್ನು ನೋಡಿ ನನಗೆ ಕಸಿವಿಸಿಯಾಯ್ತು. ಅಲ್ಲಿ ನನಗೆ ಪ್ರವೇಶ ದೊರೆಯಲಿಲ್ಲ ಎಂದು ಹೇಳಬೇಕಾಗಿಲ್ಲ. ಮೇಲಿನ ಪ್ರಿಯಾಂಬಲ್ ಏಕೆ ಬರೆದೆ ಎಂದರೆ, ಅಂದಿನ ದಿನಗಳಲ್ಲಿ (50 ವರ್ಷಗಳ ಹಿಂದೆ) ಈ ವೀರಶೈವ ಮಠಗಳ ವಿದ್ಯಾರ್ಥಿ ನಿಲಯಗಳಲ್ಲಿ ನನ್ನಂತೆ ನೊಣಬ ಲಿಂಗಾಯತ ಹುಡುಗರಿಗೆ ಅಷ್ಟು ಸುಲಭವಾಗಿ ಪ್ರವೇಶ ದೊರೆಯುತ್ತಿರಲಿಲ್ಲ ಎಂಬ ಕಾರಣಕ್ಕಾಗಿ ಅಲ್ಲ ಅಂದಿನ ಈ ದಡ್ಡ ನೊಣಬ ಲಿಂಗಾಯತ ಮಠಾಧೀಶರುಗಳು, ಈ ವೀರ ಸಿಂಹಾಸನ, ಸೂರ್ಯ ಸಿಂಹಾಸನ ಇತ್ಯಾದಿ ಆಸನಗಳ, ಈ 1008 ಶ್ರೀಶ್ರೀಶ್ರೀಗಳಂತಹ ಪ್ರವರಗಳನ್ನು ಹೇಳಿಕೊಂಡು, ಪಂಚಪೀಠಗಳ ಮಠಾಧೀಶರನ್ನು ಅನುಕರಿಸುತ್ತಾ, ತಮ್ಮ ಪೀಠಗಳನ್ನು ಪಂಚಾಚಾರ್ಯರೆಂಬ ಕಾಲ್ಪನಿಕ ಪೀಠಗಳೊಡನೆ ಸಮೀಕರಿಸಿಕೊಳ್ಳುತ್ತಾ, ಎರಡನೆ ದರ್ಜೆ ವೀರಶೈವರಾಗಲು ಪ್ರಯತ್ನ ಪಡುತ್ತಿದ್ದುದು, ಶ್ರೀ ಗುರುಸಿದ್ಧರಾಮೇಶ್ವರರ ಕೃಪೆಯಿಂದ ಗಳಿಸಿಕೊಂಡ ನಿಜ ''ಲಿಂಗಾಯತ'' ತನವನ್ನು ಮರೆ ಮಾಚಿ, ತಮ್ಮ ನೊಣಬ ಲಿಂಗಾಯತ ಶಿಷ್ಯವೃಂದವನ್ನು ದಿಕ್ಕುಗೆಡಿಸಿದವರಲ್ಲಾ ಎಂಬ ಕಾರಣಕ್ಕಾಗಿ.

ನೊಣಬ ಲಿಂಗಾಯತರು ಕರ್ನಾಟಕದ ಮಧ್ಯ ಜಿಲ್ಲೆಗಳಾದ ತುಮಕೂರು, ಹಾಸನ, ಚಿಕ್ಕಮಗಳೂರು, ಶಿವಮೊಗ್ಗ, ದಾವಣಗೆರೆ, ಚಿತ್ರದುರ್ಗ, ಹಾವೇರಿ ಜಿಲ್ಲೆಗಳಲ್ಲಿ ಅತಿ ದಟ್ಟವಾಗಿಯೂ,

ಈ ಜಿಲ್ಲೆಗಳಿಗೆ ಹೊಂದಿಕೊಂಡಂತಹ ಸ್ಥಳಗಳಲ್ಲಿ ತೆಳುವಾಗಿಯೂ ವಾಸಿಸುತ್ತಿರುವುದು ವೇದ್ಯ. ಇವರ ಒಟ್ಟು ಜನಸಂಖ್ಯೆ ನಿಖರವಾಗಿ ತಿಳಿಯದಿದ್ದರೂ 3 ರಿಂದ 4 ಲಕ್ಷವಿರಬಹುದು, ಅಥವಾ ಇನ್ನೂ ಹೆಚ್ಚು ಇರಬಹುದು. ಕ್ರಿ.ಶ. 1970ನೇ ಇಸವಿಯವರೆಗೂ ನೊಣಬ ಲಿಂಗಾಯತರೆಂದೆ ಕರೆಸಿಕೊಳ್ಳುತ್ತಿದ್ದ ಈ ಜನರನ್ನು, ಈ ಸಮಾಜದ ಕೆಲವೊಂದು ವಿದ್ವಾಂಸರು ಸಂಶೋಧಕರ ಪರಿಶ್ರಮದ ಫಲವಾಗಿ, ಈ ಜನಾಂಗದವರು ಮೂಲತಃ ಕ್ಷತ್ರಿಯರು, ಸಾಮ್ರಾಜ್ಯವನ್ನು ಕಟ್ಟಿ ಮೆರೆದವರು, ಸಾಮ್ರಾಜ್ಯ ಕಳೆದುಕೊಂಡು ಸಾಮಂತ ರಾಜರಾದವರು, ಕೊನೆಗೆ ಪಾಳೆಯ ಪಟ್ಟುಗಳ ಮಟ್ಟಕ್ಕೆ ಬಂದು ಈಗ ಜನಸಾಮಾನ್ಯರಾಗಿ ಒಳ್ಳೆಯ ವ್ಯವಸಾಯಗಾರರಾಗಿ, ವ್ಯಾಪಾರಿಗಳಾಗಿ, ಕೈಗಾರಿಕೋದ್ಯಮಿಗಳಾಗಿ, ಸರ್ಕಾರಿ ನೌಕರರಾಗಿ ಸತ್ಯ ನಿಷ್ಠ ಕಾಯಕದಲ್ಲಿ ನಿರತರಾಗಿದ್ದಾರೆ.

ವಿದ್ವಾಂಸರ, ಸಂಶೋಧಕರ ಅಭಿಪ್ರಾಯದಂತೆ ಈ ನೊಳಂಬರು ಕ್ಷತ್ರಿಯರು ಹೌದು, ಲಿಂಗಾಯತರು ಹೇಗಾದರು ?

ಈ ಜನಾಂಗ ಸ್ವಭಾವತಃ ವೀರರು, ಶೂರರು, ನ್ಯಾಯನಿಷ್ಠರು, ನಿಷ್ಠೂರಿಗಳು. ಎಲ್ಲಕ್ಕಿಂತ ಹೆಚ್ಚಾಗಿ ಸಸ್ಯಾಹಾರಿಗಳು. ಹಿಂದೂ ಧರ್ಮದ ಶೈವ ಮತ್ತು ವೈಷ್ಣವ ಪಂಥಗಳನ್ನು ಸರಿಸಮವಾಗಿ ಅಳವಡಿಸಿಕೊಂಡಿದ್ದರು.

ಕಲ್ಯಾಣ ಕ್ರಾಂತಿಯ ನಂತರ, ವಿಶ್ವಗುರು ಧರ್ಮಪಿತ ಬಸವಣ್ಣನವರಿಂದ ಪ್ರಣೀತವಾದ ಲಿಂಗಾಯತ ಧರ್ಮ ಪ್ರಚಾರಕ್ಕೋಸ್ಕರ ಅಸಂಖ್ಯಾತ ಶರಣರು ನಾಡಿನ ತುಂಬ ಚದುರಿ ಹೋದಂತೆ, ಷಟ್‌ಗಣಾಧೀಶರಲ್ಲಿ ಪ್ರಮುಖರಾದ ಶ್ರೀಗುರು ಸಿದ್ಧರಾಮೇಶ್ವರರು ತಮ್ಮ ಶಿಷ್ಯವೃಂದದೊಡಗೂಡಿ ಕರ್ನಾಟಕದ ಮೇಲೆ ಹೇಳಿದ ಪ್ರಾಂತ್ಯಗಳಲ್ಲಿ ಧರ್ಮ ಪ್ರಚಾರ, ಸಮಾಜ ಸುಧಾರಣೆ ಮಾಡುತ್ತಿದ್ದ ಸಮಯದಲ್ಲಿ, ಈ ಹಿಂದೆ ಶ್ರೀಗುರು ಸಿದ್ಧರಾಮೇಶ್ವರರಿಂದ ಉಪಕೃತರಾಗಿ, ಕಳೆದುಕೊಂಡಿದ್ದ ತಮ್ಮ ರಾಜಸತ್ತೆಯನ್ನು ಮರಳಿ ಪಡೆದಿದ್ದ ಈ ನೊಳಂಬ ಸಾಮಂತ ರಾಜರು, ಶ್ರೀಗುರು ಸಿದ್ಧರಾಮೇಶ್ವರರನ್ನು ಬಹಳ ಭಕ್ತಿ ಗೌರವ ಶ್ರದ್ಧೆಯಿಂದ ಬರಮಾಡಿಕೊಂಡು, ಲಿಂಗದೀಕ್ಷೆ ಪಡೆದು, ಇಷ್ಟಲಿಂಗಧಾರಿಗಳಾಗಿ, ಲಿಂಗಾಯತ ಧರ್ಮ ಸ್ವೀಕರಿಸಿದ್ದಲ್ಲದೆ, ತಮ್ಮ ಸಮಾಜದ ಇತರ ಸಾಮಾನ್ಯ ಜನರಿಗೂ ಶ್ರೀಗುರು ಸಿದ್ಧರಾಮೇಶ್ವರರಿಂದ ಲಿಂಗ ದೀಕ್ಷೆ ಮತ್ತು ಇಷ್ಟಲಿಂಗ ಕರುಣಿಸಿ ಲಿಂಗಾಯತ ಧರ್ಮ ಸ್ವೀಕರಿಸುವಂತೆ ಮಾಡಿದರು.

ಇದು ಇತಿಹಾಸ; ಈ ಇತಿಹಾಸವನ್ನು ಏಕೆ ಹೇಳಿದೆನೆಂದರೆ, ಈ ನೊಳಂಬರು ಯಾವ ಕಾಲಕ್ಕೂ ವೀರಶೈವರಾಗಿರಲಿಲ್ಲ. ವೈದಿಕ ಧರ್ಮದ ಬಾಣಲೆಯಿಂದ ವೀರಶೈವದ ಬೆಂಕಿಗೆ ಬೀಳಲೇ ಇಲ್ಲ, ಬಿದ್ದದ್ದು ಹೂವಿನ ಹಾಸಿಗೆಯ ಮೇಲೆಯೇ! ನೊಳಂಬರು ಕ್ಷತ್ರಿಯ ಕುಲದವರಾಗಿದ್ದವರು ಶ್ರೀಗುರು ಸಿದ್ಧರಾಮೇಶ್ವರರ ಕರುಣೆಯಿಂದ, ಇಷ್ಟಲಿಂಗ ಧರಿಸಿ ಪಂಚಾಚಾರಗಳನ್ನು ಅಳವಡಿಸಿಕೊಂಡು "ಲಿಂಗಾಯತ" ಎಂಬ ಹೂವಿನ ಹಾಸಿಗೆಯ ಮೇಲೆ ವಿರಾಜಮಾನರಾದರೆಂದು ಹೇಳಲು ಮಾತ್ರ.

ಸುಮಾರು 800 ವರ್ಷಗಳೇ ಸಂದವು ಈ ನೊಳಂಬರು ಲಿಂಗಾಯತ ಧರ್ಮ ಸ್ವೀಕರಿಸಿ. ಗುರು ಕರುಣೆಯಿಂದ ಇಷ್ಟಲಿಂಗವನ್ನೇನೋ ಧರಿಸಿದರು, ಆದರೆ ಆಚರಣೆ ? ಇವರು ಪೂರ್ವಾಶ್ರಮದ ವಾಸನೆಯಿಂದ ಬಿಡುಗಡೆ ಹೊಂದಲು, ಬಹುದೇವತೋಪಾಸನೆ ಕೈಬಿಡಲು ಆ ಕಾಲದಲ್ಲಿದ್ದ ಈ ಎರಡನೇ ತರಗತಿ ವೀರಶೈವ ಮಠಾಧೀಶರು, ಇವರಿಗೆ ಆಸ್ಪದ ಕೊಡದೆ, ಇವರನ್ನು ಒಂದು ತರಹ ವೀರಶೈವ ಲಿಂಗಾಯತರನ್ನಾಗಿಸಿದರಲ್ಲದೆ, ತಾವೂ ಸಹ ವೀರಶೈವ - ಲಿಂಗಾಯತ ಸ್ವಾಮಿಗಳಾಗಿಯೇ ಮುಂದುವರೆದರು.

ಶ್ರೀಗುರು ಸಿದ್ಧರಾಮೇಶ್ವರರ ಪರಂಪರೆಯವರು ಎಂದು ಹೇಳಿಕೊಂಡು, ಬಹುದೇವತೋಪಾಸನೆ ಮಾಡುತ್ತ, ಮೇಲೆ ಹೇಳಿದ ಹಾಗೆ ತಮ್ಮ ಮಠಗಳಲ್ಲಿ, ವೀರ ಸಿಂಹಾಸನ, ಸೂರ್ಯ ಸಿಂಹಾಸನ, ಶ್ರೀಮದ್ ಉಜ್ಜಯನಿ ಸದ್ಧರ್ಮ ಸಿಂಹಾಸನ ಶ್ರೀಶ್ರೀಶ್ರೀ 1008 ಎಂಬ ಬೋರ್ಡ್‌ಗಳನ್ನು ತಗುಲಿ ಹಾಕಿಕೊಂಡು ಧರ್ಮಪಿತ ಬಸವೇಶ್ವರರ ಬಗ್ಗೆಯಾಗಲಿ, ಲಿಂಗದೀಕ್ಷಾ ಗುರು ಶ್ರೀಗುರು ಸಿದ್ಧರಾಮರ ಬಗ್ಗೆಯಾಗಲಿ, ತಮ್ಮ ನೊಳಂಬ ಲಿಂಗಾಯತ ಶಿಷ್ಯ ವರ್ಗಕ್ಕೆ ಏನನ್ನೂ ಉಪದೇಶಿಸದೆ, ಶರಣ ಸಂಸ್ಕೃತಿಯ ಬದಲು, ಶನಿ ಸಂಸ್ಕೃತಿ ಈ ಜನಾಂಗದಲ್ಲಿ ಬೇರೂರುವಂತೆ ಶ್ರಮಿಸುತ್ತಿರುವ ಈ ಎರಡನೇ ದರ್ಜೆಯ ವೀರಶೈವ ಮಠಗಳ ಸ್ವಾಮಿಗಳನ್ನು ಏನೆಂದು ಕರೆಯಲಿ ?

ವೀರಶೈವರಲ್ಲೂ ಇಲ್ಲದ ಲಿಂಗಾಯತರಲ್ಲೂ ಇಲ್ಲ ಅಂತರಪಿಶಾಚಿಗಳು ಎಂದು ಕರೆಯಬಹುದೆ ?

★

ಪ್ರಜಾರಾಜ್ಯದಲ್ಲಿ ಆಡ್ಡಪಲ್ಲಕ್ಕಿ ಪ್ರಸ್ತುತವೆ ?

ಮುಗ್ಧ ಜನರ ಭಾವನೆಗಳ ದುರುಪಯೋಗ ತಕ್ಕೊಂಡು ಧರ್ಮದ ಹೆಸರಿನಲ್ಲಿ ಮೂಢನಂಬಿಕೆ ಕಂದಾಚಾರ ಗೊಡ್ಡು ಸಂಪ್ರದಾಯ ರೂಢಿಯಲ್ಲಿ ತಂದು ಮನುಷ್ಯರ ಹೆಗಲೇರಿ "ಮಾನವ ಕುಲಕ್ಕೆ ಜಯವಾಗಲಿ" ಎಂಬ ಘೋಷಣೆ ಹಾಕುತ್ತಾರೆ. ಸ್ವತಂತ್ರ ಭಾರತದಲ್ಲಿ ರಾಜ ಮಹಾರಾಜರೆಲ್ಲಾ ಹೇಳ ಹೆಸರಿಲ್ಲದೇ ಹೋಗಿದ್ದಾರೆ. ಅವರ ವೈಭವ ಆಡಂಬರಗಳೆಲ್ಲ ಕಾಲಗರ್ಭದಲ್ಲಿ ಲೀಯವಾಗಿ ಇತಿಹಾಸ ಪುಟಗಳಲ್ಲಿ ಸೇರಿಹೋಗಿವೆ. ಆನೆ ಮೇಲೆ ಬಂಗಾರದ ಅಂಬಾರಿಯಲ್ಲಿ ಮೆರೆಯುವ ಮೈಸೂರ ಮಹಾರಾಜರು ಇಂದು ಮತದಾರರ ಬಾಗಿಲಿಗೆ ಹೋಗಿ ಕೈಮುಗಿದು ಮತ ಯಾಚಿಸುತ್ತಿದ್ದಾರೆ. ಮೈಸೂರು ಅರಸು ಮನೆತನದವರೇ ರಾಜ್ಯಪಾಲ ಅಥವಾ ಮುಖ್ಯಮಂತ್ರಿಗಳಾಗಿ ಶಾಶ್ವತವಾಗಿ ಇರಬಹುದಾಗಿತ್ತಲ್ಲಾ ? ಪ್ರಜಾರಾಜ್ಯದಲ್ಲಿ ಇದಕ್ಕೆ ಅವಕಾಶವಿಲ್ಲ !

ಮುಖ್ಯಮಂತ್ರಿಗಳು, ರಾಜ್ಯಪಾಲರು, ಪ್ರಧಾನ ಮಂತ್ರಿಗಳು ಹಾಗೂ ರಾಷ್ಟ್ರಪತಿಗಳು, ಎಲ್ಲ ವರ್ಗದ ಜನರಾಗುತ್ತಿದ್ದಾರೆ. ಇದು ಪ್ರಜಾರಾಜ್ಯದ ವ್ಯವಸ್ಥೆ ಕೂಡ. ಆದರೆ ಮಠಾಧೀಶರು ಮಾತ್ರ ಒಂದೇ ಕೋಮಿಗೆ ಸೇರಿದವರು. ಅವರಲ್ಲಿ ಯೋಗ್ಯತೆಗಳಿರಲಿ ಇಲ್ಲದಿರಲಿ ಮಠಾಧೀಶರಾಗುತ್ತಾರೆ. ಪಲ್ಲಕ್ಕಿಯಲ್ಲಿ ಮೆರವಣಿಗೆ ಮಾಡಿಸಿಯೇಕೊಳ್ಳುತ್ತಾರೆ. ಅಡ್ಡಪಲ್ಲಕ್ಕಿ ಮೆರವಣಿಗೆ ಎಂದರೆ ಈ ಪ್ರದೇಶದಲ್ಲಿ ನಾವೇ ಸರ್ವಶ್ರೇಷ್ಠರು. ನಮಗಿಂತ ಹೆಚ್ಚಿನವರು ಯಾರೂ ಇಲ್ಲ ಎಂದಂತೆ. ಇದನ್ನು ಅರಿಯದ ಮುಗ್ಧಜನತೆ ಇಂತಹ ಅಕ್ಷಮ್ಯ ಅಪರಾಧವನ್ನು ಮಠಾಧೀಶರ ಆಜ್ಞೆಯಿಂದ ಮಾಡುತ್ತಾರೆ.

ಅಡ್ಡ ಪಲ್ಲಕ್ಕಿ ಉತ್ಸವ ಮಾಡಿಸಿರಿ; ಗ್ರಾಮಕ್ಕೆ ಸುಭಿಕ್ಷೆಯಾಗುತ್ತದೆ ಎಂಬ ಹಸಿ ಸುಳ್ಳು ಜನರಲ್ಲಿ ಬಿತ್ತಿ ಮೋಸವೆಸಗುತ್ತಾರೆ. ದಿ|| ಬಸವಲಿಂಗಪ್ಪನವರು ತಲೆ ಮೇಲೆ ಮಲ ಹೊರುವುದನ್ನು ನಿಲ್ಲಿಸಿದ್ದಾರೆ. ಆದರೆ ಹೆಗಲ ಮೇಲೆ ಸ್ವಾಮಿಗಳನ್ನು ಹೊರುವದನ್ನು ನಿಲ್ಲಿಸಲಿಲ್ಲ. ಪ್ರಜಾರಾಜ್ಯದಲ್ಲಿ ಅಡ್ಡಪಲ್ಲಕ್ಕಿ ಪ್ರಸ್ತುತವೇ ? ಪ್ರಜ್ಞಾವಂತರು ಇದರ ಬಗ್ಗೆ ಚಿಂತನೆ ಮಾಡಬೇಕು. ಇಂಥ ಅನಿಷ್ಟ ಸಂಪ್ರದಾಯವನ್ನು ಖಂಡಿಸಬೇಕು. ಸರಕಾರವು ಹೊರಿಸಿಕೊಳ್ಳುವವರು ಹೊರುವವರು ಎಂಬ ಮೇಲು ಕೀಳು ಭೇದವನ್ನು ತೊಡೆದು ಹಾಕಬೇಕು. ಸಮಾನತೆ ಬರಬೇಕು. ಇಲ್ಲದಿದ್ದರೆ ಬೀದಿಗಿಳಿದು ಹೋರಾಟ ಮಾಡಬೇಕಾಗುತ್ತದೆ.

- ಡಾ|| ಶಿ.ಬಾ. ಪಾಟೀಲ್

ರಾಷ್ಟ್ರೀಯ ಬಸವ ದಳ,ಸಂಕೇಶ್ವರ

ವಚನ ದಂಡ

-ಪೂಜ್ಯ ಶ್ರೀ ಮಾತೆ ಕಸ್ತೂರಿದೇವಿ.

ಎತ್ತು ಅನ್ಬೌದೆ ಎಡಗೋಲ ಬಸವಣ್ಣ
ಸುತ್ತೇಳು ಲೋಕ ಮೆರೆಯುವ (ನ) ಬಸವಣ್ಣ
ಎತ್ತು ಅನ್ಬೌದೆ ಧರೆಯಲ್ಲಿ ?! ॥ -ಜನಪದ ಗೀತೆ

ಬಂಧುಗಳೇ, ತಾವು ಲಿಂಗಾಯತ ಧರ್ಮಕರ್ತರಾದ ಬಸವಣ್ಣನವರ ಭಾವಚಿತ್ರಗಳನ್ನು ನೋಡಿದ್ದೀರಾ !? ಬಳಕೆಯಲ್ಲಿರುವ ಹೆಚ್ಚಿನ ಚಿತ್ರಗಳಲ್ಲಿ ಧರ್ಮಪಿತರು ತಮ್ಮ ಎಡಹಸ್ತದಲ್ಲಿ ಏನನ್ನು ಹಿಡಿದಿದ್ದಾರೆ ? ವಚನ ಸಾಹಿತ್ಯದ ಕಟ್ಟನ್ನು ಅಲ್ಲವೆ !? ಇದನ್ನು ನೆನಪಿನಲ್ಲಿರಿಸಿಕೊಂಡು ಈ ಲೇಖನವನ್ನು ಓದಿರಿ. ಅಲ್ಲದೆ ಎಡಗೈಯಲ್ಲಿ ಇಷ್ಟಲಿಂಗ ಇರಿಸಿಕೊಂಡು ಪೂಜಿಸುತ್ತಿರುವ ಚಿತ್ರಗಳೂ ಇವೆ. ಆದರೆ ಲೇಖನಕ್ಕೆ ಇದು ಪ್ರಸ್ತುತವಲ್ಲ. ಏಕೆಂದರೆ ಸೃಷ್ಟಿಕರ್ತ ಲಿಂಗದೇವನು ದೇವಸುತ ಬಸವಣ್ಣನವರಂತೆ ಕ್ರಾಂತಿ ಮಾಡಿದ ದಾಖಲೆ ನಮಗೆ ಸಿಕ್ಕಿಲ್ಲ.

ಮೇಲಿನ ತ್ರಿಪದಿಯಲ್ಲಿ ಜನಪದ ಕವಿಗಳು ತಮ್ಮ ಹೃದಯಪೀಠದ ಆರಾಧ್ಯಗುರು ಬಸವಣ್ಣನವರನ್ನು ಎರಡು ಕೊಂಬು, ನಾಲ್ಕು ಕಾಲಿನ ಎತ್ತು ಅಥವ ಎತ್ತಿನ ಪ್ರತಿರೂಪವಾದ ನಂದಿ ಎಂದು ನಂಬುವ, ಭಾವಿಸುವ, ಆರಾಧಿಸುವ, ಪೂಜಿಸುವ ಜನರನ್ನು ಕೇಳುತ್ತಿದ್ದಾರೆ ; ತಿಳಿ ಹೇಳುತ್ತಿದ್ದಾರೆ. ಈ ಗೀತೆಯಲ್ಲಿ ಬರುವ ''ಎಡಗೋಲ ಬಸವಣ್ಣ'' ಅಂದರೆ ಏನು ? ಎಂಬ ಬಗ್ಗೆ ಸ್ವಲ್ಪ ಮಟ್ಟಿಗೆ ಚಿಂತಿಸೋಣ.

ಸತ್ಯಶೀಲರ, ಜನಸಾಮಾನ್ಯರ ಪವಿತ್ರ ಹೃದಯವನ್ನು ಪರುಷಮೂರ್ತಿ ಬಸವಣ್ಣನವರು ಆಕ್ರಮಿಸಿಕೊಂಡಿದ್ದು ಹೇಗೆ ? ಇದಕ್ಕೆ ಅವರು ಮಾಡಿದ ಪವಾಡ ಯಾವುದು ?! ಸಾತ್ವಿಕ ಸ್ವಭಾವದ ವಿವೇಕಯುಕ್ತ ತಂದೆಯ ಪರಿಚಯ ತಮಗಿರಬಹುದು. ತಮ್ಮ ಮಕ್ಕಳು ಮರಿ ತಪ್ಪು ಮಾಡಿದಾಗ ಅಂಥವರಿಗೆ ಹೊಡೆಯಲು-ಬೈಯಲು ಬರುವುದಿಲ್ಲ. ಹಾಗೆಂದು ಜವಾಬ್ದಾರಿ ಅರಿಯದ ಹೊಣೆಗೇಡಿ ತಂದೆಯು ಈತನಲ್ಲ. ಏಕೆಂದರೆ ಸಕಾಲಕ್ಕೆ ಬುದ್ಧಿ ಹೇಳದಿದ್ದರೆ ಶಿಕ್ಷಿಸದಿದ್ದರೆ ತಪ್ಪುಗಳನ್ನೇ ಆದರ್ಶಗಳೆಂದು ತಿಳಿದುಕೊಂಡು ಈ ಮಕ್ಕಳು ಮುಂದೆ ಸಮಾಜ ಕಂಟಕರಾಗಬಹುದೆಂಬ ಭಯ ತಂದೆಗೆ. ಅಂಥ ಸಂದರ್ಭಗಳಲ್ಲಿ ಸುಮ್ಮನಿರಲು ಅವರ ಅಂತರಾತ್ಮ ಒಪ್ಪುವುದಿಲ್ಲ. ಆಗ ಮಾಡಬೇಕಾದುದು ಏನು ? ಸಿಟ್ಟು ಬಂದು ಹೊಡೆಯಲು ಕೈಯನ್ನು ಮೇಲೆತ್ತುವರು. ತಂದೆಯ ಈ ಅನಿರೀಕ್ಷಿತ ವರ್ತನೆಗೆ ಮಗ ''ಇನ್ನೇನು ಜೋರಾಗಿ ಏಟು ಬೀಳುತ್ತದೆ. ಅದಕ್ಕೆ ನಾನು ಸಿದ್ಧನಾಗಬೇಕು'' ಎಂದುಕೊಂಡು ಬೀಳಲಿರುವ ಬಲವಾದ ಪೆಟ್ಟನ್ನು ಸಹಿಸಿಕೊಳ್ಳಲು ಹಲ್ಲು ಕಚ್ಚಿಕೊಂಡು, ಕಣ್ಣು ಮುಚ್ಚಿಕೊಂಡು ಸಿದ್ಧನಾಗುತ್ತಾನೆ. ಕ್ಷಣಗಳು ಉರುಳುತ್ತವೆ. ''ಅರೇ ಇದೇನು ಇಷ್ಟೊತ್ತಾದರು ಏಟು ಬೀಳಲೇ ಇಲ್ಲ'' ಎಂದು ಚಕಿತನಾದ ಮಗ ಕಣ್ತೆರೆದು ನೋಡುತ್ತಾನೆ. ಹೊಡೆಯಲೆಂದೇ ಎತ್ತಿದ್ದ ಕೈ ಈಗ ತಾನೇ ಕೆಳಗಿಳಿಯುತ್ತಿದೆ. ಇದರಿಂದ ದೇಹಕ್ಕೆ ಏಟು ಬೀಳದಿದ್ದರೂ, ಮನಸ್ಸಿಗೆ ಪಶ್ಚಾತ್ತಾಪವಾಗಿರುತ್ತದೆ. ''ಓಹೋ, ನಾನು ತಪ್ಪು ಮಾಡಿದರೆ ಅಪ್ಪನಿಗೆ ಸಿಟ್ಟು ಬರುತ್ತದೆ. ಆದ್ದರಿಂದ ಇನ್ನು ಮುಂದೆ ತಪ್ಪಾಗದಂತೆ ಎಚ್ಚರ ವಹಿಸಬೇಕೆಂದು'' ಮಗನೂ ಸಂಕಲ್ಪಿಸುತ್ತಾನೆ.

ಹಾಗೆಯೇ ವಚನ ಸಾಹಿತ್ಯ ಸಾರ್ವಭೌಮರಾದ ಬಸವಣ್ಣನವರ ವಚನಗಳನ್ನು ಓದುವಾಗ ಆಗುವುದು ಇಂಥ ಅನುಭವವೇ !! ಅಪ್ಪನವರಿಗೆ ದಂಡಂ ದಶಗುಣಂನಲ್ಲಿ ನಂಬಿಕೆಯಿಲ್ಲ. ಅಲ್ಲದೆ ತಾಯಿ-ತಂದೆಯರು ಮಕ್ಕಳಿಗೆ ಚೆನ್ನಾಗಿ ಹೊಡೆದು ಬುದ್ಧಿಕಲಿಸುವುದನ್ನು ರೂಢಿಸಿಕೊಂಡರೆ, ಪೆಟ್ಟು ತಿಂದೂ ತಿಂದೂ ಅಭ್ಯಾಸವಾದ ಮಕ್ಕಳು ಮೊಂಡು ಬೀಳುತ್ತವೆ ಎಂದು ಧರ್ಮಪಿತರಿಗೆ ಚೆನ್ನಾಗಿ ಗೊತ್ತಿತ್ತು. ಅಲ್ಲದೆ ಇಲ್ಲಿ ಬುದ್ಧಿ ಕಲಿಸುವುದು, ಕಲಿಯುವುದು ಅಂದರೆ ಏನು? ನಮ್ಮ ಗುರೂಜಿಯವರಾದ

ಪೂಜ್ಯ ಶ್ರೀ ಲಿಂಗಾನಂದ ಅಪ್ಪಾಜಿಯವರು ಹೇಳುತ್ತಿದ್ದರು ''ಕಪಟಿಯಾದ ಬುದ್ಧಿವಂತನಿಗಿಂತ, ಮುಗ್ಧನಾದ ಅಜ್ಞಾನಿ ಲೇಸು. ಆದ್ದರಿಂದ ಬುದ್ಧಿವಂತರು, ಜ್ಞಾನಿಗಳು ಎಂದು ನಿರ್ಧರಿಸುವಾಗ ಎಚ್ಚರಿಕೆಯಿಂದಿರಿ'' ಎಂದು. ಬುದ್ಧಿಯಲ್ಲಿ ಎರಡು ವಿಧ. ಒಂದು ಸುಬುದ್ಧಿ; ಇನ್ನೊಂದು ದುರ್ಬುದ್ಧಿ. ಇದರಲ್ಲಿ ಬಸವಣ್ಣನವರ ಉದ್ದೇಶ ತಮ್ಮ ಅನುಯಾಯಿಗಳಿಗೆ ಸುಬುದ್ಧಿಯನ್ನು ಕಲಿಸುವುದು ; ಸದ್ಭಕ್ತಿಯನ್ನು ಬಿತ್ತುವುದು; ಸುಜ್ಞಾನವನ್ನು ಬೆಳೆಸುವುದು; ಸತ್ಕ್ರಿಯೆ ಎಂಬ ಫಲ ತೆಗೆಯುವುದು. ಏಕೆಂದರೆ ಇವುಗಳಿಂದ ನಮಗೆ ಕೇಡಿಲ್ಲ. ಇತರರಿಗೆ ಹಾನಿಯಿಲ್ಲ. ಎಲ್ಲರು ಕೂಡಿಕೊಂಡು ಸುಖವಾಗಿ ಬದುಕಬಹುದು. ಅಂತೆಯೇ ನಮಗೆ ಈ ರೀತಿ ಬೇಡುವುದನ್ನು ಕಲಿಸುತ್ತಾರೆ.

ವಿಷಯವೆಂಬ ಹಸುರನೆನ್ನ ಮುಂದೆ ತಂದು ಪಸರಿಸದಿರಯ್ಯ
ಪಸುವೇನ ಬಲ್ಲುದು, ಹಸುರೆಂದೆಳೆಸುವುದು.
ವಿಷಯರಹಿತನ ಮಾಡಿ, ಭಕ್ತಿರಸವ ದಣಿಯೆ ಮೇಯಿಸಿ
ಸುಬುದ್ಧಿಯೆಂಬ ಉದಕವನೆರೆದು
ನೋಡಿ ಸಲಹಯ್ಯ ಲಿಂಗದೇವಾ. -ಬ.ವ.ದೀ 49

ಇಂಥ ಆಧ್ಯಾತ್ಮಿಕ, ಸಾಮಾಜಿಕ, ನೈತಿಕ, ತಾತ್ತ್ವಿಕ ಮೌಲ್ಯಗಳನ್ನು ಸಮಾಜದಲ್ಲಿ ಬಿತ್ತಿ ಬೆಳೆಯುವಾಗ ಬೇಜವಾಬ್ದಾರಿಯಿಂದ ಬಲಗೈಯಲ್ಲಿ ಕೋಲು ಹಿಡಿದರೆ, ಸಹಜವಾಗಿ ಶಕ್ತಿ ಜಾಸ್ತಿಯಿರುವ ಈ ಬಲಗೋಲಿನಿಂದ ಜೋರಾಗಿ ಪೆಟ್ಟು ಬಿದ್ದು ಮಕ್ಕಳ ಕಣ್ಣಲ್ಲಿ ನೀರು ಬಂದರೆ ; ಮೈಯೆಲ್ಲ ಕೆಂಪಾಗಿ ಬಾಸುಂಡೆ ಎದ್ದರೆ ಉಸಿಟು ಕಟ್ಟಿದರೆ ಎಂಬ ಆತಂಕವೋ ಆತಂಕ ಬಸವಣ್ಣನವರಿಗೆ. ಅದಕ್ಕೆಂದೇ ಜನಪದರ ಉಸಿರಾದ ಬಸವಣ್ಣನವರು ಬಲವಾಗಿ ಪೆಟ್ಟುಬೀಳಬಾರದೆಂಬ ಮಹದುದ್ದೇಶದಿಂದಲೇ ತಮ್ಮ ಎಡಗೈಯಲ್ಲಿ ವಚನದಂಡ ಅಂದರೆ ಎಡಗೋಲನ್ನು ಹಿಡಿದಿದ್ದಾರೆ !! ಪೂಜ್ಯ ಶ್ರೀ ಬಸವಾತ್ಮಜೆಯವರ ಮಾತಿನಲ್ಲಿ ಹೇಳುವುದಾದರೆ ''ಧರ್ಮಪಿತರು ಅತ್ಯಂತ ಮೃದುವಾದ ಮಾತೃವಾಣಿಯ ಶೈಲಿಯಲ್ಲಿ'' ತಮ್ಮ ಅನುಯಾಯಿಗಳಿಗೆ ತಿಳುವಳಿಕೆ ಕೊಡುತ್ತಿದ್ದಾರೆ. ಈ ಮಾತುಗಳಿಗೆ ನಿಮಗೆ ಸಾಕ್ಷಿ ಬೇಕೆ ? ಹಾಗಿದ್ದರೆ ಅಪ್ಪನವರ ಹೃದಯ ಈ ವಚನದಲ್ಲಿ ಹೇಗೆ ಮಿಡಿಯುತ್ತಿದೆ ನೋಡಿರಿ !!

ಅದ್ವೈತವ ಅಂತರಂಗದಲ್ಲಿ ಅರಿದು
ಹೊರಗೆ ದಾಸೋಹವ ಮಾಡದಿರ್ದಡೆ
ಎಂತಯ್ಯ, ಉಭಯ ಸಂದೇಹದಲ್ಲಿ ನಿಜವಪ್ಪುದು ?
ನಿಮ್ಮ ಶರಣರ ಮನ ನೊಂದಲ್ಲಿ ನಾನು ಸೈರಿಸಿಕೊಂಬೆನೆಂತಯ್ಯ?
ಲಿಂಗದೇವಾ, ಹಾವು ಸಾಯದೆ
ಕೋಲು ನೋಯದಂತೆ ಮಾಡಾ ನಿಮ್ಮ ಧರ್ಮ ! -ಬ.ವ.ದೀ 1155

ದಿ. 26-8-1994 ರಂದು ಬೆಂಗಳೂರು ಮಹಾನಗರದ ಶಾಸಕರ ಭವನದ ಮುಂದೆ ಕಂಚಿನ ಅಶ್ವಾರೂಢ ಬಸವ ಪುತ್ಥಳಿಯನ್ನು ಸ್ಥಾಪಿಸಿದ ಸುದಿನ. ಅಂದಿನ ಸಮಾರಂಭಕ್ಕೆ ಆಗಮಿಸಿದ್ದ ಕರ್ನಾಟಕದ ಮಾಜಿ ಮುಖ್ಯ ಮಂತ್ರಿಗಳಾದ ಶ್ರೀ ನಿಜಲಿಂಗಪ್ಪನವರು ತಮ್ಮ ಭಾಷಣದಲ್ಲಿ ಆಕ್ಷೇಪಿಸಿದ್ದು ಹೀಗೆ ''ಈ ಜನರಿಗೆ ಅಧಿಕಾರದ ಮೇಲೆ ಬಹಳ ಆಸೆ. ಅದಕ್ಕಾಗಿಯೇ ತಮ್ಮ ಭವನದ ಮುಂದೆ ಅಶ್ವಾರೂಢ ಬಸವಣ್ಣನವರನ್ನು ಸ್ಥಾಪಿಸಿಕೊಂಡಿದ್ದಾರೆ.'' ಎಂದು. ಈ ಆಕ್ಷೇಪಣೆಗೆ ಬಸವ ಪುತ್ಥಳಿಯ ಸ್ಥಾಪಕರಾದ ಸನ್ಮಾನ್ಯ ಬಿ.ಡಿ. ಜತ್ತಿಯವರು ''ನಾವು ಅಧಿಕಾರದ ಆಸೆಯಿಂದ ಈ ಮೂರ್ತಿಯನ್ನು ಸ್ಥಾಪಿಸಲಿಲ್ಲ. ಬೇರೆ ಭಂಗಿಯ ಬಸವ ಮೂರ್ತಿ ರೂಢಿಯಲ್ಲಿ ಇರದ ಕಾರಣ ಇದನ್ನೇ ಸ್ಥಾಪಿಸಬೇಕಾಯಿತು.'' ಎಂದು ಸಮರ್ಥಿಸಿಕೊಂಡರು. ವಿಶ್ವಜ್ಯೋತಿ ಬಸವೇಶ್ವರರನ್ನು ಕೆಲವರು ಕೇವಲ ಸಾಹಿತಿಯಾಗಿ, ಕೆಲವರು

ಪ್ರಧಾನಿ (ರಾಜಕಾರಣಿ)ಯಾಗಿ, ಕೆಲವರು ಭಕ್ತನಾಗಿ ತಮ್ಮ ತಮ್ಮ ಅಭಿರುಚಿಗೆ ತಕ್ಕಂತೆ ಚಿತ್ರಿಸಿ ತೃಪ್ತಿಪಟ್ಟುಕೊಂಡರು. ಆದರೆ ಆಧ್ಯಾತ್ಮವೀರ, ವಿಶ್ವಗುರು, ಧರ್ಮಪಿತ ಬಸವೇಶ್ವರರ ಭಾವಚಿತ್ರವನ್ನು ರೂಢಿಗೆ ತಂದ ಕೀರ್ತಿ ಬೆಂಗಳೂರಿನ ವಿಶ್ವ ಕಲ್ಯಾಣ ಮಿಷನ್ನಿಗೆ ಸಲ್ಲುತ್ತದೆ. ಇತ್ತೀಚೆಗೆ ಪದ್ಮಾಸನದಲ್ಲಿ ಕುಳಿತು, ಭಕ್ತರಿಗೆ ಅಭಯಹಸ್ತ ತೋರಿಸುತ್ತ ಎಡಗೈಯಲ್ಲಿ ವಚನ ಪರುಷ ಹಿಡಿದ ಸರಳ ಸುಂದರವಾದ ಭಾವಚಿತ್ರಗಳು, ಮೂರ್ತಿಗಳು ಜನಪ್ರಿಯವಾಗಿ ಮುಮುಕ್ಷುಗಳನ್ನು ಆಕರ್ಷಿಸುತ್ತಿವೆ ಎಂಬುದು ಅತಿಶಯೋಕ್ತಿಯಲ್ಲ.

ಇಲ್ಲಿಯವರೆಗು ಎಡಗೋಲಿನ ಬಗ್ಗೆ ಪ್ರಸ್ತಾಪಿಸಿ, ಈಗ ಬಲಗೋಲಿನ ಬಗ್ಗೆ ಬರೆಯದಿದ್ದರೆ ಪಕ್ಷಪಾತವಾದೀತು. ಜನಪದರ ಹೃದಯವನ್ನು ಗೆದ್ದಿರುವ ಬಸವಣ್ಣನವರು ಎಡಗೋಲಿನಂತಿರುವ ವಚನ ದಂಡವನ್ನು ಹಿಡಿದು ನಾನಾ ವಿಧವಾಗಿ ತಮ್ಮ ಮಕ್ಕಳನ್ನು ಸರಿದಾರಿಗೆ ಹಚ್ಚಲು ಶ್ರಮಿಸುತ್ತಿರುವಾಗ, ಬಸವ ಹೃದಯವನ್ನು ಆಕ್ರಮಿಸಿಕೊಂಡಿರುವ ಲಿಂಗದೇವನು ಬಲಗೈಯಲ್ಲಿ ಕೋಲು ಹಿಡಿದುಕೊಂಡು ತನ್ನ ಭಕ್ತರಿಗೆ ಜೀವನದಲ್ಲಿ ಪಾಠ ಕಲಿಸುತ್ತಾನೆ. ಈ ಮಾತುಗಳನ್ನು ನಾನು ಹೇಳುತ್ತಿಲ್ಲ. ಅಪ್ಪ ಬಸವಣ್ಣನವರೇ ಹೇಳುತ್ತಿದ್ದಾರೆ ಕೇಳಿರಿ.

ಎಡದ ಕೈಯಲು ಹಾಲು ಬಟ್ಟಲು, ಬಲದ ಕೈಯಲ್ಲಿ ಓಜುಗಟ್ಟಿಗೆ
ಆವಾಗ ಬಂದಾನೊ ನಮ್ಮಯ್ಯ ಬಡಿದು ಹಾಲು
ಕುಡಿಸುವ ತಂದೆ !
ಲಿಂಗದೇವಯ್ಯ ತಾನೇ ಭಕ್ತಿ ಪಥವ ತೋರುವ ತಂದೆ. -ಬ.ವ.ದೀ- 389

ಭಕ್ತರಿಗೆ ಪಾಠ ಕಲಿಸಲೆಂದೇ ಲಿಂಗದೇವನು ಹಿಡಿದ ಬಲಗೈಯಲ್ಲಿರುವ ಈ ಕೋಲಿನಿಂದ ಬೀಳುವ ಪೆಟ್ಟು ಸಾಮಾನ್ಯ ಎಂದು ಭಾವಿಸಬೇಡಿ. ಬಲವಾಗಿ ಬೀಳುವ ಈ ಪೆಟ್ಟಿನಿಂದ ಕಣ್ಣಲ್ಲಿ ನೀರು ಬರಬಹುದು ; ಮೈಯಲ್ಲಿ ಬಾಸುಂಡೆ ಏಳಬಹುದು; ಅಷ್ಟೇ ಏಕೆ ಕೆಲವೊಮ್ಮೆ ಪ್ರಾಣಾಂತಿಕವೂ ಆಗಬಹುದು ಅನ್ನುತ್ತಾರೆ ಅಪ್ಪನವರು ಈ ವಚನದಲ್ಲಿ .

ನಚ್ಚಿದೆನೆಂದಡೆ ಮಚ್ಚಿದೆನೆಂದಡೆ
ಸಲೆ ಮಾರುವೋದೆನೆಂದಡೆ
ತನುವನಲ್ಲಾಡಿಸಿ ನೋಡುವೆ ನೀನು
ಮನವನಲ್ಲಾಡಿಸಿ ನೋಡುವೆ ನೀನು
ಧನವನಲ್ಲಾಡಿಸಿ ನೋಡುವೆ ನೀನು
ಇವೆಲ್ಲಕ್ಕಂಜದಿದ್ದಡೆ ಭಕ್ತಿಕಂಪಿತ ನಮ್ಮ ಲಿಂಗದೇವ. -ಬ.ವ.ದೀ- 216

ಹಾಗೆಂದು ಬಸವಣ್ಣನವರ ದೇವರು ವಿಘ್ನಸಂತೋಷಿಯೂ ಅಲ್ಲ. ಅವನು ಒಡ್ಡುವ ಎಲ್ಲಾ ರೀತಿಯ ಕಷ್ಟ-ಸುಖಗಳ ಕಠಿಣ ಪರೀಕ್ಷೆಯಲ್ಲಿ ತೇರ್ಗಡೆಯಾದರೆ, ಭಕ್ತನಿಗಿಂತ ಅವನಿಗೆ ಹೆಚ್ಚು ಸಂತೋಷವಾಗಿ ಕರುಣೆಯೆಂಬ ಅನುಗ್ರಹ ಹಸ್ತದಿಂದ ತಲೆ ನೇವರಿಸುತ್ತಾನೆ; ಆತ್ಮಬಲವೆಂಬ ಹಾಲು ಕುಡಿಸುತ್ತಾನೆ ; ರಕ್ಷಾಕವಚದ ವಜ್ರಪಂಜರದಲ್ಲಿಕ್ಕಿ ಮುದ್ದಿಸುತ್ತಾನೆ. ಅಷ್ಟೇ ಏಕೆ ಅವನ ಮೇಲಿನ ವಿಶ್ವಾಸ ಗಟ್ಟಿಗೊಂಡರೆ ತನ್ನನ್ನೇ ಕೊಟ್ಟುಬಿಡುತ್ತಾನೆ. ಕೊನೆಗೆ ಜೀವನ ಎಂಬ ರಣರಂಗದಲ್ಲಿ ಭಕ್ತನನ್ನು ಗೆಲ್ಲಿಸಿ ತಾನೇ ಸೋಲುತ್ತಾನೆ. ಈ ಮಾತುಗಳ ಪ್ರತಿಬಿಂಬದಂತಿರುವ ವಚನವನ್ನು ನೋಡಿರಿ.

ದೇವನೊಲ್ಳಿದನೆಂದು ಮುಯ್ಯಾನಲು ಬೇಡ
ಕರಕಟ ಕಾಡಿದನೊಲ್ಳಿದನೆ ?
ಅಳಿಸುವ ನಗಿಸುವನೊಲ್ಳಿದನೆ ?

ಬೆಚ್ಚದೆ ಬೆದರದೆ ತೊತ್ತುತನವ ಮಾಡಲು
ತನ್ನನೀವನು ಲಿಂಗದೇವ ! -ಬ.ವ.ದೀ- 150

ಅಷ್ಟೇ ಅಲ್ಲ ದೇವನು ಒಡ್ಡುವ ಕಡುಕಷ್ಟಗಳಿಂದ ಪಾರಾಗುವುದು- ಎದುರಿಸುವುದು ಹೇಗೆ ? ಅಂದರೆ ಅಪ್ಪನವರು ಅದಕ್ಕೂ ಸುಲಭೋಪಾಯ - ಗುಟ್ಟನ್ನು ಹೇಳಿಕೊಡುತ್ತಿದ್ದಾರೆ ! ಅದು ಏನು ಗೊತ್ತೇ ?! ನೀವು ಹುಟ್ಟುಗುರುಡನೊಬ್ಬ ನಡೆಯುವುದನ್ನು ನೋಡಿದ್ದೀರಾ ? ಹೇಗೆ ನಡೆಯುತ್ತಾನೆ ? ತನ್ನ ಕೈಯಲ್ಲಿರುವ ಕೋಲಿನ ಸಹಾಯದಿಂದ ದಾರಿಯಲ್ಲಿರುವ ತಗ್ಗು ದಿಣ್ಣೆಗಳನ್ನು ಗುರುತಿಸುತ್ತಾ, ಅಡೆ ತಡೆಗಳನ್ನು ದಾಟುತ್ತಾ, ಅಷ್ಟೆ ಏಕೆ ಬೆಂಗಳೂರಿನಂಥ ಮಹಾನಗರದಲ್ಲಿ ರಸ್ತೆಗಳನ್ನು ದಾಟಲು ಕಣ್ಣಿದ್ದು ಗಟ್ಟಿಮುಟ್ಟಾದವರೆ ಹೆದರುತ್ತಿರುವಾಗ ಈತ ಮಾತ್ರ ನಿರ್ಭಯವಾಗಿ ಅದೇ ಕೋಲಿನ ಸಹಾಯದಿಂದ ಒಬ್ಬಂಟಿಯಾಗಿ ಭಯಂಕರ ಟ್ರಾಫಿಕ್ ಮಧ್ಯದಲ್ಲೂ ಯಶಸ್ವಿಯಾಗಿ ರಸ್ತೆಗಳನ್ನು ದಾಟುತ್ತಾ ಗುರಿ ಮುಟ್ಟುತ್ತಾನೆ. ಹಾಗೆಯೇ ಧರ್ಮಪಿತರು ಹೇಳುತ್ತಾರೆ. ಲಿಂಗದೇವನು ನಮ್ಮನ್ನು ಬೆದರಿಸಲೆಂದೇ ಹಿಡಿದ ಬರುವ ಈ ದೇವರ ಕೋಲ(ಬಲಗೋಲು)ನ್ನೇ ಸಂಪೂರ್ಣ ಶರಣಾಗತಿಯಿಂದ ಅನನ್ಯ ಭಕ್ತಿಯಿಂದ ಪರಿ ಪರಿಯಾಗಿ ಕಾಡಿ ಬೇಡಿ ಪಡೆದುಕೊಂಡು, ಅದನ್ನೇ ಭಕ್ತಿ ಪಥದಲ್ಲಿ ಆಧಾರವಾಗಿಟ್ಟುಕೊಂಡು ನಡೆದರಾಯಿತು. ಅದಕ್ಕೆಂದೆ ಈ ವಚನದಲ್ಲಿ ಸರ್ವೋನ್ನತ ಶಕ್ತಿಯಾದ ದೇವರೊಂದಿಗೆ ಹೇಗೆ ಮಾತಾಡಬೇಕೆಂದು ಕಲಿಸುತ್ತಿದ್ದಾರೆ.

ಮತಿ ಮಂದನಾಗಿ ಗತಿಯ ಕಾಣದೆ ಇದ್ದೆನಯ್ಯ
ಹುಟ್ಟುಗುರುಡನ ಕೈಯ ಕೋಲು ಕೊಟ್ಟು
ನಡೆಸುವಂತೆ ನಡೆಸಯ್ಯ ಎನ್ನ
ನಿಮ್ಮ ಅಚ್ಚ ಶರಣರ ಒಕ್ಕುದ ಮಿಕ್ಕುದ
ನಚ್ಚಿಸು ! ಮಚ್ಚಿಸು ! ಲಿಂಗದೇವಾ . - ಬ.ವ.ದೀ - 267

ಶರಣರೇ, ಈಗ ನಿಮಗೆ ಅರ್ಥವಾಯಿತ್ತೇ ? ಸದ್ಭಕ್ತರಿಂದ, ಸತ್ಯವಿಶ್ವಾಸಿಗಳಿಂದ ಮನುಕುಲೋದ್ಧಾರಿ ಬಸವಣ್ಣನವರು ಹೇಗೆ ಹೆಚ್ಚು ಪ್ರೀತಿಸಲ್ಪಟ್ಟವರೆಂದು. ನೀವು ಶಾಲೆಗೆ ಹೋಗುತ್ತಿರುವ ಪುಟ್ಟ ಪುಟ್ಟ ಮಕ್ಕಳ ಮಾತನ್ನು ಎಂದಾದರೂ ಆಲಿಸಿದ್ದೀರಾ ? ಅವರು ಹೇಳುತ್ತಾರೆ.....

''ನಮಗೆ ಆ ಟೀಚರನ್ನು ಕಂಡರೆ ತುಂಬಾ ಇಷ್ಟ''

''ಏಕೆ ?!''

''ಅವರು ನಮಗೆ ಹೊಡೆಯೋಲ್ಲ, ಬೈಯ್ಯಲ್ಲ. ನಮ್ಮ ಮೇಲೆ ಕೋಪ ಮಾಡಿಕೊಳ್ಳೊಲ್ಲ, ಅಷ್ಟೇ ಅಲ್ಲ ನಮ್ಮ ಮನಸ್ಸಿಗೆ ಮುಟ್ಟುವಂತೆ ಪಾಠ ಮಾಡುತ್ತಾರೆ. ಅವರಷ್ಟು ಚನ್ನಾಗಿ ಬೇರೆ ಯಾರೂ ಪಾಠ ಹೇಳಿಕೊಡುವುದಿಲ್ಲ ಅದಕ್ಕೆ. ''

ಈಗ ನಿಮಗೂ ತಿಳಿಯಿತಲ್ಲವೆ ? ಹಾಗೆಯೇ ನಮ್ಮ ಬಸವಣ್ಣನವರು ಮೇಲು, ಕೀಳು, ಜಾತಿ, ಮತ, ಪಂಥ, ಲಿಂಗ, ವರ್ಗ, ವರ್ಣ ಭೇದವಿಲ್ಲದೆ ಎಲ್ಲರನ್ನು ಇಂಬಿಟ್ಟುಕೊಂಡು, ಎಲ್ಲರಿಗೂ ಸಲ್ಲುವಂತೆ ಬಾಳಲು-ಬದುಕಲು ಕಲಿಸಿದರು, ಬೋಧಿಸಿದರು, ಶ್ರಮಿಸಿದರು. ಇದರಿಂದಲೇ ಇವರು ಬಹು ಬೇಗ ಜಗದ್ವಂದ್ಯರಾದರು. ಈ ಕಾರಣಕ್ಕಾಗಿಯೇ ಪೂಜ್ಯ ಮಾತಾಜಿಯವರು ಹೇಳುತ್ತಾರೆ. ''ಬಸವಣ್ಣನವರದು ಎಲ್ಲರೂ ಹೊಟ್ಟೆಕಿಚ್ಚು ಪಡುವಂಥ ವ್ಯಕ್ತಿತ್ವ'' ಎಂದು. ಇದು ನಿಮ್ಮ ಅನುಭವಕ್ಕೂ ಬರಬೇಕಾದರೆ ನೀವು ಅವರ ವಚನಗಳನ್ನು ಓದಬೇಕು, ಬರೆಯಬೇಕು, ಮನನ ಮಾಡಬೇಕು, ಅನುಷ್ಠಾನಕ್ಕೂ ತರಬೇಕು. ಅಷ್ಟೇ ಅಲ್ಲ ತಿಳಿಯದವರಿಗೆ ತಿಳಿಸಬೇಕು. ಇದರಿಂದ ಆಗುವ ಪ್ರಯೋಜನವೇನು ? ಎಂದು ಕೇಳುತ್ತೀರಲ್ಲವೆ ? ಅದಕ್ಕೆ ನಾನು ಹೇಳುತ್ತೇನೆ '' ನಿಮ್ಮೊಳಗೆ

ಬಚ್ಚಿಟ್ಟುಕೊಂಡಿರುವ ಪ್ರತಿಭಾವಂತರೆಲ್ಲ ಜಿಗಿದು ಹೊರಗೆ ಬರುತ್ತಾರೆಂದು.''

ಇಂಥ ನಮ್ಮ ಪ್ರಾಣ, ಗುರು, ತಂದೆ, ತಾಯಿ, ಬಂಧು, ಬಳಗ, ಎಲ್ಲವೂ ಆಗಿದ್ದ ಬಸವಣ್ಣನವರನ್ನು ಅದು ಯಾರು ಎತ್ತು (ನಂದಿ) ಮಾಡಿ ಕೂಡಿಸಿದ್ದು ?! ನಂದಿಯನ್ನೇ ಬಸವಣ್ಣ ಎಂದು ಕರೆದು ಬಸವ ಜಯಂತಿ ದಿನ ಅದನ್ನು ಪೂಜಿಸಿ, ಎತ್ತುಗಳನ್ನು ಮೆರವಣಿಗೆ ಮಾಡಿ ಪಾನಕ-ಕೋಸಂಬರಿ ಹಂಚುವುದು? ರೈತನ ಬೆನ್ನೆಲುಬು ಆದ ಎತ್ತುಗಳನ್ನು ಪ್ರೀತಿಯಿಂದ ಸಾಕಿ ಪೋಷಿಸಿರಿ, ಬೇಡವೆಂದವರಾರು ?

ಸಕಲಕೆಲ್ಲಕೆ ನೀನೇ ಅಕಳಂಕ ಗುರುವೆಂದು
ನಿಖಿಲ ಶಾಸ್ತ್ರವು ಪೇಳುತಿರಲರಿದೆನು
ಅವರವರ ದರುಶನಕೆ ಅವರವರ ವೇಷದಲಿ
ಅವರವರಿಗೆಲ್ಲ ಗುರು ನೀನೊಬ್ಬನೇ

ಎಂದು ಅದ್ಯಾರು ಮುಪ್ಪಿನ ಷಡಕ್ಷರಿಗಳೊಂದಿಗೆ ರಾಜಿ ಮಾಡಿಕೊಳ್ಳುತ್ತಿರುವವರು ? ಶಾಸ್ತ್ರಗಳ ಮಾತನ್ನೇ ನಂಬಿಕೊಂಡು ನಂದಿಯನ್ನೇ ಬಸವಣ್ಣ ಎಂದು ನಮಗೂ ತೋರಿಸಿ ದಾರಿ ತಪ್ಪಿಸುತ್ತಿರುವವರು? As He is ಬಸವಣ್ಣನವರ ವಿರಾಟ್ ರೂಪವನ್ನು ತೋರಿಸಲು ಇವರೆಲ್ಲ ಸೋಲುತ್ತಿರುವುದೇಕೆ ? ಬಸವ ವಚನ ಪ್ರಕಾಶವನ್ನು ಕೈಯಲ್ಲಿ ಹಿಡಿದು ನಾವು ಮುಂದೆ ಮುಂದೆ ಸಾಗುತ್ತಿರುವಾಗ ನೀವೆಲ್ಲ ಮತ್ತೆ ಮತ್ತೆ ಶಾಸ್ತ್ರ ಪುರಾಣಗಳನ್ನು ಹಿಡಿದು ನಮ್ಮ ದಾರಿಗೆ ಏಕೆ ಅಡ್ಡ ಬರುತ್ತೀರಿ ? ಪಕ್ಕಕ್ಕೆ ಸರಿಯಿರಿ. ಇನ್ನು ಮುಂದೆ ನಾವು ನಿಮ್ಮ ಮಾತುಗಳನ್ನು ನಂಬುವುದಿಲ್ಲ ; ಕೇಳುವುದೂ ಇಲ್ಲ ; ಏಕೆಂದರೆ ಚಿನ್ಮಯ ಜ್ಞಾನಿ ಚನ್ನಬಸವಣ್ಣನವರು ನಮಗೆ ಸ್ಪಷ್ಟವಾಗಿಯೇ ಈ ರೀತಿ ಹೇಳಿಕೊಟ್ಟಿದ್ದಾರೆ ...

ಶ್ರೀ ಗುರು ತನ್ನ ಸಾಕಾರವ ಬಿಟ್ಟು ನಿರಾಕಾರವಾದಡೆ
ಸಂದೇಹಿಸಲಿಲ್ಲ
ಸಾಕಾರವಿಡಿದು ಉಪದೇಶವ ಕೊಟ್ಟು
ಎನ್ನ ಕಾಯವ ಸಮರ್ಪಿಸಿಕೊಂಡು
ಶುದ್ಧನ ಮಾಡಿದನಯ್ಯ ಶ್ರೀಗುರು;
ಪ್ರಾಣದಲಡಗಿ ಸಿದ್ಧನ ಮಾಡಿದನಯ್ಯಾ ಶ್ರೀಗುರು;
ಎನ್ನ ಆತ್ಮಪಥದಲ್ಲಿ ಬೆರಸಿ ಪ್ರಸಿದ್ಧನ
ಮಾಡಿದನಯ್ಯ ಶ್ರೀಗುರು;
ಇಂತು ಅವಿರಳ ಗುರುತತ್ತ್ವ - ಸಂಗನ (ಕರ್ತನ) ಬಸವಣ್ಣನು
ಕೂಡಲ ಚನ್ನ ಸಂಗಾ ನಿನ್ನೊಳಗೆ ಪರಿಪೂರ್ಣ ಕಾಣಾ. - ಚ.ಬ.ವ -271

ಧರ್ಮಬಂಧುಗಳೇ, ಈಗ ನಿಮಗೆ ಯಾರು ಬೇಕು ? ವಿಶ್ವಗುರು, ಧರ್ಮಪಿತ, ಲಿಂಗದೇವನ ಕಂದ ಕರ್ತನ ಬಸವಣ್ಣ ಬೇಕೊ ? ಕೈಲಾಸಾಧಿಪತಿಯಾದ ಶಿವನ ವಾಹನ ಸಂಗನ ಬಸವಣ್ಣ (ನಂದಿ) ಬೇಕೋ ? ಅಥವ ಲಿಂಗದೇವ ಬೇಕೋ ? ಏಕೆ ? ನಿರ್ಧಾರ ತೆಗೆದುಕೊಳ್ಳುವುದು ಕಷ್ಟವಾಗುತ್ತಿದೆಯೇ ? ಹಾಗಿದ್ದರೆ ಈ ವಚನಗಳ ಸಾಲುಗಳನ್ನು ಓದಿರಿ; ಚಿಂತಿಸಿರಿ; ನಿರ್ಧರಿಸಿರಿ.

----ತ್ರಿವಿಧ ಭಕ್ತಿಯನರುಹಿಸಿ ಕೊಟ್ಟ ಸಂಗನ (?)
(ಕರ್ತನ) ಬಸವಣ್ಣನ ಬೆರೆಸಿ ನೀನು ನಾನು ಬದುಕಿದೆವು
ಕಾಣಾ ಗುಹೇಶ್ವರಾ ! -ಅ.ಪ್ರ.ವ -922

ಕೂಡಲ ಚನ್ನಸಂಗಯ್ಯನಲ್ಲಿ ನಿಮ್ಮ ತೋರಿ
ಎನ್ನ ಸಲಹಿದ ವರಗುರು (ಸಂಗನ) ಬಸವಣ್ಣನ
ಶ್ರೀಪಾದಕ್ಕೆ ಶರಣೆಂದು ಬದುಕಿದೆನು ಕಾಣಾ ಪ್ರಭುವೆ. -ಚ.ಬ.ವ -953

ಕಲಿದೇವರ ದೇವಾ, ನಾನು ನೀನಾಗಬಹುದಲ್ಲದೆ
ಭಕ್ತಿಗೆ ಬಸವಣ್ಣನಲ್ಲದಾಗಬಾರದೆಂದರಿದು
ಆ ಬಸವಣ್ಣನ ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು. -ಮ. ಮಾ - 537

ನಿಮ್ಮ ಶರಣ ಬಸವಣ್ಣನ ತೇಜದೊಳಗಲ್ಲದೆ
ಆನಿನ್ನೆಂತು ಕಾಂಬೆನು ಹೇಳಾ ಚನ್ನಮಲ್ಲಿಕಾರ್ಜುನಾ. -ಅಕ್ಕಮಹಾದೇವಿ


ಇಂಥ ಅಸಂಖ್ಯಾತ ವಚನಗಳು ಸಿಗುತ್ತವೆ. ಆದ್ದರಿಂದ ನಾನು ಈ ವಿಷಯದಲ್ಲಿ <u>ಬಸವ ಯೋಗಿ ಸಿದ್ಧರಾಮೇಶ್ವರರ ಪಕ್ಷವನ್ನು ವಹಿಸುತ್ತೇನೆ.</u> ಲಿಂಗಾಯತರೇ, ಈಗ ತಾವು ಯಾರ ಪಕ್ಷ ಸೇರುತ್ತೀರಿ ?

ಗುರುವಿಂಗಾದೊಡೆಯು ಬಸವಣ್ಣನೇ ಬೇಕು
ಲಿಂಗಕ್ಕಾದೊಡೆಯು ಬಸವಣ್ಣನೇ ಬೇಕು
ಜಂಗಮಕ್ಕಾದೊಡೆಯು ಬಸವಣ್ಣನೇ ಬೇಕು
ಕಪಿಲ ಸಿದ್ಧಮಲ್ಲಿಕಾರ್ಜುನಯ್ಯಾ ನಿಮಗೂ, ಎನಗೂ,
ನಿಮ್ಮ ಶರಣರಿಗೂ ಬಸವಣ್ಣನೇ ಬೇಕು. - ಬಸವಯೋಗಿ ಸಿದ್ಧರಾಮೇಶ್ವರರು.




ಮಾತೆ ಮಹಾದೇವಿ

<u>ಮಾ</u> ಸದಾ ಕಂಪುಳ್ಳ ಜ್ಞಾನದ ಹೂವು
<u>ತೆ</u> ೕದಪ್ಪೂಗಮಗಮಿಸುವ ಗಂಧವು
<u>ಮ</u> ನಸೂರೆಗೈಯ್ಯಬಲ್ಲ
<u>ಹಾ</u> ! ಶಕ್ತಿರೂಪಿಣಿಯು ನೀವು
<u>ದೇ</u> ವನ ಸೃಷ್ಟಿಯಲಿಹ ಅಪರೂಪದ ರತ್ನವು ।
<u>ವಿ</u> ವರಿಸಲಾಗದ ಅದಾವುದೋ ಮಹಾನ್ ಶಕ್ತಿಯು. - ಭಾನು , ಸಾಗರ





ಬೀದರ್ ಜಿಲ್ಲೆ ಲಿಂಗಾಯತ ಧರ್ಮ ಮಹಾಸಭಾದ ಅಧ್ಯಕ್ಷರಾದ
ಶಿವರಾಜ್ ಪಾಟೀಲ್ ಸಭೆಯನ್ನುದ್ದೇಶಿಸಿ ಮಾತನಾಡುತ್ತಿರುವುದು.



ಪ್ರವಚನ ಮುಕ್ತಾಯ ಸಮಾರಂಭದಲ್ಲಿ ಆಶೀರ್ವಚನ
ನೀಡುತ್ತಿರುವ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು.




ಪೂಜ್ಯ ಶ್ರೀ ಮಾತೆ ಗಂಗಾದೇವಿಯವರಿಗೆ ಸನ್ಮಾನ ಪತ್ರವನ್ನು
ಸಮರ್ಪಿಸುತ್ತಿರುವ ಶರಣ. ಸೂರ್ಯಕಾಂತ ಶೀಲವಂತರು.



ಪೂಜ್ಯ ಶ್ರೀ ಮಾತೆ ಗಂಗಾದೇವಿಯವರಿಗೆ ಅರ್ಪಿಸಿದ
ಅಭಿನಂದನ ಪತ್ರವನ್ನು ಓದುತ್ತಿರುವ ಹುಬ್ಬಳ್ಳಿ
ರಾಷ್ಟ್ರೀಯ ಬಸವ ದಳದ ಕಾರ್ಯಾಧ್ಯಕ್ಷರಾದ ಕಲ್ಯಾಣಪ್ಪ ಪರಮಾದಿ



ಪ್ರವಚನ ವ್ಯವಸ್ಥಾಪಕರಾದ ಶರಣ. ಬಿ.ಜಿ. ಹೊಸಗೌಡರಿಂದ ಗುರುಕಾಣಿಕೆ ಸಮರ್ಪಣೆ



ಬಸವ ಧರ್ಮ ಪೀಠದಲ್ಲಿ ಸಾಮೂಹಿಕ ವಸತಿ ಗೃಹ ಕಟ್ಟಿಸಲು ಒಂದು ಲಕ್ಷ ರೂ. ನೀಡಿದ ಶರಣ. ಸೂರ್ಯಕಾಂತ ಶೀಲವಂತ ಅವರಿಗೆ ಸನ್ಮಾನ

ಓಂ ಶ್ರೀ ಗುರು ಬಸವಲಿಂಗಾಯ ನಮಃ

86666

ಪ್ರಪ್ರಥಮ ಮಹಿಳಾ ಜಗದ್ಗುರುಗಳು ಬಸವ ಧರ್ಮ ಪೀಠಾಧ್ಯಕ್ಷೆಯೂ ಆದ

ಪೂಜ್ಯ ಶ್ರೀಮನ್ ನಿರಂಜನ

ಮಹಾಜಗದ್ಗುರು ಮಾತೆ ಮಹಾದೇವಿ ಅವರ

ದಿವ್ಯ ಸನ್ನಿಧಿಯಲ್ಲಿ

ಕಿರಿದಾದ ವಯಸ್ಸಿನಲ್ಲೇ ಹಿರಿದಾದ ಜ್ಞಾನಗಳಿಸಿದ ಅಪೂರ್ವ ವಾಗ್ಮಿ, ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠದ

ದ್ವಿತೀಯ ಮಹಿಳಾ ಜಗದ್ಗುರು

ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ

ಇವರ ಕರಕಮಲಗಳಿಗೆ ಸಲ್ಲಿಸಿದ ಅಭಿನಂದನ ಪತ್ರ

ಪೂಜ್ಯ ಶ್ರೀ ಮಾತೆ ಗಂಗಾದೇವಿಯವರೇ,

ತಾವು ಶರಣ ಭೂಮಿ ಬಸವ ಕಲ್ಯಾಣವನ್ನು ಹೊಂದಿರುವ, ಕರ್ನಾಟಕದ ಕಿರೀಟದಂತಿರುವ ಬೀದರ ಜಿಲ್ಲೆಯ ಚಟ್ನಳ್ಳಿ ಎಂಬ ಗ್ರಾಮದಲ್ಲಿ ದಿ. 16-9-1958 ರಂದು ಶರಣ ಮಾಣಿಕ್ಯಪ್ಪ ಬೆಣ್ಣೆ ಮತ್ತು ಶರಣೆ. ಭಾಗೀರಥಮ್ಮನವರ ಮಗಳಾಗಿ ಜನಿಸಿ ಗಂಗಮ್ಮ ಎಂಬ ನಾಮಕರಣ ಹೊಂದಿದಿರಿ. ತಾಯಿಯ ಸ್ವಾತಿಕತೆ, ತಂದೆಯ ಜ್ಞಾನಾಕಾಂಕ್ಷೆ ಎರಡನ್ನೂ ಮೈಗೂಡಿಸಿಕೊಂಡು ಬೆಳೆದು, ಅತ್ಯಂತ ಕಿರಿಯ ವಯಸ್ಸಿನಲ್ಲಿ, ಅಂದರೆ 15ನೆಯ ವಯಸ್ಸಿನಲ್ಲೇ ವೈರಾಗ್ಯ ಭಾವ ಬಲಿದು ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿಗೆ ಬಂದಿರಿ. ಪರಮ ಪೂಜ್ಯ ಸದ್ಗುರು ಲಿಂಗಾನಂದ ಮಹಾಸ್ವಾಮಿಗಳಿಂದ ಇಷ್ಟಲಿಂಗ ದೀಕ್ಷೆ ಪಡೆದು ಶಿವಯೋಗ ಸಾಧನೆಯಲ್ಲಿ ತೊಡಗಿ, 21ನೆಯ ವಯಸ್ಸಿನಲ್ಲಿ 1979ರಲ್ಲಿ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರಿಂದ ಜಂಗಮ(ಸನ್ಯಾಸ) ದೀಕ್ಷೆಯನ್ನು ಪಡೆದು, ಮಾತೆ ಗಂಗಾದೇವಿ ಎಂಬ ಅಭಿಧಾನ ತಾಳಿದಿರಿ.

ಪ್ರವಚನ ಪ್ರವೀಣರೇ,

ಹುಬ್ಬಳ್ಳಿಯ ನೂತನ ಬಡಾವಣೆಯಾದ ನವನಗರದಲ್ಲಿ ದಿ. 15-4-2001ರಂದು ಪ್ರವಚನವನ್ನು ಆರಂಭಿಸಿದಿರಿ. 42 ದಿವಸಗಳ ಕಾಲ ಅಖಂಡವಾಗಿ ಅವ್ಯಾಹತವಾಗಿ ಪ್ರವಚನವನ್ನು ಮಾಡಿ ಜನಮನವನ್ನು ಗೆದ್ದಿದ್ದೀರಿ. ಇದು ಸಂತೋಷದ ವಿಷಯವಾದರೂ ನಮ್ಮೆಲ್ಲರಿಗೆ ಕೆಲವೊಂದು ವಿಷಯಗಳಲ್ಲಿ ನೋವಾಗಿ ನಿಮ್ಮಲ್ಲಿ ಕ್ಷಮೆ ಯಾಚಿಸುತ್ತೇವೆ.

ಹುಬ್ಬಳ್ಳಿಯ ನೂತನ ಬಡಾವಣೆಯಾದ ನವನಗರದ ಸುತ್ತಲೂ ಗಾಮನಗಟ್ಟಿ, ಸುತಗಟ್ಟಿ, ಅಮರಗೋಳ, ನವಲೂರು, ಬೈರಿದೇವರಕೊಪ್ಪ, ಉಣಕಲ್ ಮುಂತಾದ ಗ್ರಾಮಗಳಿದ್ದು ಇಲ್ಲಿನ ಜನರಿಗೆ ಅಪಾರ ಜ್ಞಾನದಾಸೋಹ ಲಭ್ಯವಾಗಬೇಕು ಎಂಬ ಹಂಬಲದಿಂದ ನಾವುಗಳು ಸ್ಥಳೀಯ ಜನರ ಸಮಿತಿ ಮಾಡಿ ಅದರ ವತಿಯಿಂದ ನವನಗರದಲ್ಲಿ ನಿಮ್ಮ ಅಮೋಘ ಪ್ರವಚನ ಏರ್ಪಡಿಸಿದೆವು. ಆದರೆ ದುರಾಸೆ, ಸಣ್ಣತನ, ಅಧಿಕಾರ ದಾಹ, ಆಕ್ರಮಣಶೀಲ ಪ್ರವೃತ್ತಿ, ದ್ವೇಷ-ಮಾತ್ಸರ್ಯಗಳಿಂದ ಕುದಿಯುತ್ತಿರುವ ಚಿತ್ರದುರ್ಗದ ಮುರುಘರಾಜೇಂದ್ರ ಮಠದ ಶಿವಮೂರ್ತಿ ಸ್ವಾಮಿಗಳು, ಧಾರವಾಡದ ಶಾಸಕ

ಚಂದ್ರಕಾಂತ ಬೆಲ್ಲದ ಎಂಬುವವರ ಮೂಲಕ ಪ್ರವಚನವು ಆಗಗೊಡಬಾರದೆಂದು ದುಷ್ಟ ಪ್ರಯತ್ನ ಮಾಡಿದ್ದರಿಂದ ತಮಗೆ ಬಹಳಷ್ಟು ಕಿರಿಕಿರಿಯಾಯಿತು. ಇದಕ್ಕಾಗಿ ನಾವು ನಿಜಕ್ಕೂ ವಿಷಾದಿಸುತ್ತೇವೆ.

ಆದರೆ ತಮ್ಮ ಸಹನೆ, ಧೈರ್ಯ, ಧೀಮಂತಿಕೆ ಮೆಚ್ಚಿಕೊಳ್ಳುವಂಥವು. ಚಿತ್ರದುರ್ಗದ ಬೃಹನ್ಮಠದ ಸ್ವಾಮಿಗಳ ಮತ್ತು ಶಾಸಕ ಚಂದ್ರಕಾಂತ ಬೆಲ್ಲದರ ಪ್ರವಚನಕ್ಕೆ ವಿಘ್ನ ಉಂಟು ಮಾಡಬೇಕೆಂಬ ಪ್ರಯತ್ನಗಳು ತೀವ್ರಗೊಂಡರೂ ತಾವು ವಿಚಲಿತರಾಗಲಿಲ್ಲ. ಧೈರ್ಯದಿಂದ ಪ್ರವಚನ ಮಾಡಿದ್ದರಿಂದ ಇಂದು ಈ ಮುಕ್ತಾಯ ಸಮಾರಂಭವು ಅದ್ದೂರಿಯಾಗಿ ನಡೆಯಲು ಸಾಧ್ಯವಾಯಿತು. ಇದಕ್ಕಾಗಿ ನಿಮ್ಮನ್ನು ಪ್ರಪ್ರಥಮವಾಗಿ ಅಭಿನಂದಿಸುತ್ತೇವೆ. ಬಸವ ತತ್ವ ಪ್ರಚಾರಕ್ಕಾಗಿ ತನು-ಮನ-ಧನ-ಸಮಯ-ಅಭಿಮಾನ-ಪ್ರಾಣ ಎಂಬ ಷಡಂಗಗಳನ್ನು ತಾವು ಮೀಸಲಿಟ್ಟವರೆಂಬುದನ್ನು ಈ ಸನ್ನಿವೇಶದಲ್ಲಿ ದೃಢಪಡಿಸಿದ್ದೀರಿ.

ಈ ಹಿಂದೆ ಹುಬ್ಬಳ್ಳಿಯ ಮೂರುಸಾವಿರ ಮಠದ ಉತ್ತರಾಧಿಕಾರಿಗಳ ವಿಷಯದಲ್ಲಿಯೂ ಹಸ್ತಕ್ಷೇಪ ಮಾಡಿ, ಮಠದಲ್ಲಿ ಗೂಂಡಾಗಿರಿಗೂ ಅವಕಾಶ ಮಾಡಿ, ಆವರೆಗೂ ಕೀರ್ತಿಶಾಲಿಯಾಗಿದ್ದ ಮೂರುಸಾವಿರ ಮಠದ ಪ್ರಕರಣ ಗಂಭೀರ ಅವಸ್ಥೆ ತಲುಪುವಲ್ಲಿ ಬೃಹನ್ಮಠದ ಚಿತ್ರದುರ್ಗ ಸ್ವಾಮಿಗಳ ಹಸ್ತಕ್ಷೇಪವು ಬಲವಾಗಿತ್ತು ಎಂಬುದನ್ನು ಹುಬ್ಬಳ್ಳಿ -ಧಾರವಾಡಗಳ ಜನ ಅರಿತಿದ್ದರಿಂದ ಈ ಸಲ ಪ್ರವಚನಕ್ಕೆ ವಿಘ್ನ ಮಾಡುವ ಅವರ ಕುತಂತ್ರವನ್ನು ದುರ್ಬಲಗೊಳಿಸಲು ತತ್ವನಿಷ್ಠ ಬಸವಾನುಯಾಯಿಗಳು ದೃಢಸಂಕಲ್ಪ ಮಾಡಿದರು.

ಬೃಹನ್ಮಠದ ಶ್ರೀ ಶಿವಮೂರ್ತಿ ಸ್ವಾಮಿಗಳು ಮತ್ತು ಅವರ ಪರವಾಗಿ ಶಾಸಕ ಚಂದ್ರಕಾಂತ ಬೆಲ್ಲದ ಅವರು ಒಡ್ಡಿದ ಆಸೆ-ಆಮಿಷ-ಬೆದರಿಕೆಗೆ ಈಡಾಗದೆ, ಅಬ್ಬರದ ಪತ್ರಿಕಾ ಪ್ರಚಾರಗಳಿಗೂ ಹೆದರದೆ ತತ್ವನಿಷ್ಠ ಬಸವಾನುಯಾಯಿಗಳು ಪ್ರವಚನವನ್ನು ಯಶಸ್ವಿಗೊಳಿಸಲು ಪಣತೊಟ್ಟು, ದಿ.23-4-2001ರಂದು ಮತ್ತು 29-4-2001ರಂದು ಗುಂಪು ಕಟ್ಟಿಕೊಂಡು ಬಂದ ಬೃಹನ್ಮಠದವರ ಅನುಯಾಯಿಗಳನ್ನು, ಚಂದ್ರಕಾಂತ ಬೆಲ್ಲದರ ಗುಂಪನ್ನು ಸಮರ್ಥವಾಗಿ ಎದುರಿಸಿದರು. ಮುಖಭಂಗಿತರಾಗಿ ಹೋದ ಆ ಜನರು ಪುನಃ ಬರಲಿಲ್ಲ, ಆ ನಂತರ ವಿಶ್ವಧರ್ಮ ಪ್ರವಚನವು ನಿರ್ವಿಘ್ನವಾಗಿ ನೆರವೇರಿತಲ್ಲದೆ ದಿನದಿನಕ್ಕೆ ಹೆಚ್ಚು ಜನರನ್ನು ಆಕರ್ಷಿಸುತ್ತಾ ಬಂದಿತು. ಈ ಯಶಸ್ವಿಗೆ ತತ್ವನಿಷ್ಠರಾದ ಶರಣಬಂಧುಗಳ ಪಾತ್ರವು ಮುಖ್ಯವಾಗಿದ್ದರೂ ತಾವು ಪ್ರದರ್ಶಿಸಿದ ಚಿತ್ತ ಸಮತೆ, ತಾಳ್ಮೆ, ಬಸವ ನಿಷ್ಠೆ, ಅಪೂರ್ವವಾದವು. ''ಬೆಳ್ಳಿತ್ತಿನ ಮರೆಯಲ್ಲಿದ್ದು ಹುಲ್ಲೆಗೆ ಅಂಬ ತೊಡುವಂಥ'' ಬಾಯಲ್ಲಿ ಬಸವ ಮಂತ್ರ ಜಪಿಸುತ್ತ ನಡೆಯಲ್ಲಿ ಬಸವ ತತ್ವಕ್ಕೆ, ಶರಣ ಸಂಸ್ಕೃತಿಗೆ ಹೊರತಾಗಿ ನಡೆಯುವ ಮಠಾಧೀಶರಿಗೆ ವ್ಯತಿರಿಕ್ತವಾಗಿ ತಾವು ನಡೆ-ನುಡಿಗಳೆರಡರಲ್ಲೂ ಬಸವ ತತ್ವವನ್ನು ಅಳವಡಿಸಿಕೊಂಡು ನಮ್ಮೆಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದೀರಿ. ಹೀಗಾಗಿ ನೀವು ನಡೆದಲ್ಲೆಲ್ಲ ಬಸವ ತತ್ವದ ಬೆಳಕು ಹರಿಯುತ್ತದೆ. ಬಸವ ಧರ್ಮದ ಬೆಳೆ ಬೆಳೆಯುತ್ತದೆ ಎನ್ನುವಲ್ಲಿ ನಮಗೆ ಅತೀವ ಹೆಮ್ಮೆ ಎನಿಸುತ್ತದೆ.

''ಜೋ ಕುಚ್ಛ ಹುವಾ ಅಚ್ಛಾ ಕೆ ಲಿಯೇ ಹುವಾ''- ಆಗುವುದೆಲ್ಲ ಒಳ್ಳೆಯದಕ್ಕೆ ಎಂಬ ಗಾದೆಯ ಮಾತಿನಂತೆ. ಚಿತ್ರದುರ್ಗ ಬೃಹನ್ಮಠದ ಶ್ರೀಗಳ ಕುತಂತ್ರವು ನಮಗೆ ಗಣಾಚಾರ ದಳವನ್ನು ಕಟ್ಟಲು ಪ್ರೇರಣೆ ನೀಡಿದೆ. ಬಸವ ತತ್ವವು ನಿಜವಾಗಿಯೂ ಪ್ರಚಾರವಾಗಬಾರದು ಎಂಬ ತಂತ್ರ ಚಿತ್ರದುರ್ಗ ಬೃಹನ್ಮಠದವರದ್ದು. ನಿಮ್ಮ ಪ್ರತಿಭೆ ಬೆಳೆಯುಗೊಡಬಾರದು, ಬಸವ ಧರ್ಮ ಪೀಠದ ಕೀರ್ತಿಯು ವಿಸ್ತಾರಗೊಳ್ಳಬಾರದು ಎಂಬ ಸಣ್ಣತನವೂ ಅವರಲ್ಲಿದೆ. ಇದನ್ನರಿದು ತತ್ವನಿಷ್ಠರ ಪಡೆಯೊಂದನ್ನು ತಯಾರು ಮಾಡಿ ಪ್ರವಚನಗಳು ನಿರ್ವಿಘ್ನವಾಗಿ ನಡೆಯಲು ತತ್ವನಿಷ್ಠ ಶರಣರು ಸದಾ ಸನ್ನದ್ಧರಾಗಿರಲು ಗಣಾಚಾರ ದಳವೊಂದನ್ನು ಕಟ್ಟಲು ತಮ್ಮ ಪ್ರವಚನವು ಪ್ರೇರಣೆ ನೀಡಿದೆ ಎಂದರೆ ಉತ್ಪ್ರೇಕ್ಷೆಯಲ್ಲ. ಧನ

ಬಲ, ರಾಜಕೀಯ ಬಲ ಮತ್ತು ಗೂಂಡಾಶಕ್ತಿಯ ಬಳಕೆಯಿಂದ ಸತ್ಯವನ್ನು , ಮೌಲ್ಯವನ್ನು ದುರ್ಬಲಗೊಳಿಸುವವರನ್ನು ಸಾತ್ವಿಕ ಜನರ ಬಲ, ನೈತಿಕ ಸ್ಥೈರ್ಯ, ಆತ್ಮವಿಶ್ವಾಸ, ಸಾತ್ವಿಕತೆಯಿಂದ ಎದುರಿಸುವುದೇ ಗಣಾಚಾರ ಎಂಬುದನ್ನು ತಾವು ಮನವರಿಕೆ ಮಾಡಿಕೊಟ್ಟದ್ದೀರಿ. ಅದಕ್ಕಾಗಿ ತುಂಬಾ ಕೃತಜ್ಞರಾಗಿದ್ದೇವೆ.

ದ್ವಿತೀಯ ಮಹಿಳಾ ಜಗದ್ಗುರುಗಳೇ,

ಶ್ರೇಷ್ಠ ಗುರುವಿನ ಶ್ರೇಯಸ್ಸಿರುವುದು ಉತ್ತಮ ಶಿಷ್ಯಂದಿರನ್ನು ತಯಾರು ಮಾಡುವುದರಲ್ಲಿ. ಎಂಥಾ ದೊಡ್ಡ ದೊಡ್ಡ ಮಠಗಳು ಸಮರ್ಥ ಅಧಿಕಾರಿಗಳಿಲ್ಲದೆ ಇರುವಾಗ, ಕೆಲವೊಂದು ಮಠ-ಪೀಠಗಳ ಗುರುಗಳು ತಮ್ಮ ನಂತರ ಮಠವನ್ನು ನಡೆಸಿಕೊಂಡು ಹೋಗುವಂಥ ಉತ್ತಮ ಅಧಿಕಾರಿಗಳನ್ನು ನಿಯೋಜಿಸಲು ಅಸಮರ್ಥರಾಗಿರುವಾಗ ಲಿಂ॥ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು ಉತ್ತಮ ಸಾಧಕರ ಪರಂಪರೆಯನ್ನೇ ಸೃಷ್ಟಿಸಿದ್ದಾರೆ. ಪೂಜ್ಯ ಗುರುಗಳ ಕಾಯಕವನ್ನು ಪೂಜ್ಯ ಮಾತಾಜಿಯವರು ಮುಂದುವರಿಸಿಕೊಂಡು ಹೋದಂತೆ, ತಾವೂ ಸಹ ಅಪೂರ್ವವಾಗಿ ಮುಂದುವರಿಸುತ್ತಿದ್ದೀರಿ. ಪೂಜ್ಯ ಗುರುಗಳು ದಿ.16-11-1956 ರಂದು ಜ್ಞಾನ ಸನ್ಯಾಸವನ್ನು ಸ್ವೀಕರಿಸ ಬಯಸಿ ಕಾಷಾಯ ವಸ್ತ್ರವನ್ನು ಸ್ವಯಂ ಪ್ರೇರಣೆಯಿಂದ ಧರಿಸಿದ್ದು ಧಾರವಾಡದಲ್ಲಿ. ಮಹಿಳೆಯರ ಸಮಾನತೆ ಸಾರುವ ಮಹಿಳಾ ಜಗದ್ಗುರು ಪೀಠವು ಸ್ಥಾಪನೆಗೊಂಡುದು ಧಾರವಾಡದಲ್ಲಿ. ಹೀಗಾಗಿ ಅಕ್ಕಮಹಾದೇವಿ ಅನುಭಾವ ಪೀಠವು ಸ್ತ್ರೀ ಸಮಾನತೆಯ ಹೆಗ್ಗುರುತು. ಪೂಜ್ಯ ಗುರುಗಳು ದಿ.30-6-1995ರಂದು ಲಿಂಗೈಕ್ಯರಾಗಿ ಕ್ರಿಯಾ ವಿಶ್ರಾಂತಿಯನ್ನು ಪಡೆದ ಮೇಲೆ ಪೂಜ್ಯರು ಪ್ರಥಮ ಅಧಿಕಾರಿಗಳಾಗಿದ್ದ ಕೂಡಲ ಸಂಗಮದ ಬಸವ ಧರ್ಮದ ಮಹಾಜಗದ್ಗುರು ಪೀಠವು ತೆರವಾಯಿತು. ಪೂಜ್ಯರ ಸದಿಚ್ಛೆಯಂತೆ ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠದ ಪ್ರಥಮ ಅಧಿಕಾರಿಣಿಯಾದ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಬಸವ ಧರ್ಮ ಪೀಠದ ಎರಡನೆಯ ಅಧಿಕಾರಿಣಿಯಾಗಿ ದಿ. 13-1-1996ರಂದು ಪೀಠಾರೋಹಣ ಮಾಡಿದರು. ಇದರಿಂದ ತೆರವಾದ ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಪೀಠಕ್ಕೆ ತಾವು ಎರಡನೆಯ ಅಧಿಕಾರಿಣಿಯಾಗಿ ದಿ.15-4-1996ರಂದು ಪೀಠಾರೋಹಣ ಮಾಡಿದಿರಿ. ನಿಮ್ಮ ಸಾತ್ವಿಕತೆ, ವೈರಾಗ್ಯ, ತಾಳ್ಮೆ, ಪ್ರೇಮಳ ಸ್ವಭಾವ, ಸರಳತೆ, ಅಪೂರ್ವ ವಾಗ್ಮಿತ್ವ, ಗುರುಭಕ್ತಿ, ಕಾಯಕ ಶ್ರದ್ಧೆ ನಮ್ಮೆಲ್ಲರನ್ನು ಸಮ್ಮೋಹಿತಗೊಳಿಸಿವೆ. ಗುರುದ್ವಯರ ಮೆಚ್ಚುಗೆಯ ಶಿಷ್ಯೆಯಾದಂತೆ ನಮ್ಮೆಲ್ಲರ ಆತ್ಮೀಯ ಮಾತೆಯಾಗಿದ್ದೀರಿ ; ಸಮಾಜದ ಮಗಳಾಗಿದ್ದೀರಿ. ಗುರು ಬಸವಣ್ಣನವರ ಕಾರುಣ್ಯದ ಶಿಶುವಾಗಿದ್ದೀರಿ. ಜಗನ್ಮಾತಾ ಅಕ್ಕಮಹಾದೇವಿ ಪೀಠದ ಕೀರ್ತಿ ತಮ್ಮಿಂದ ಇನ್ನೂ ವಿಸ್ತಾರಗೊಳ್ಳುವದೆಂಬುದರಲ್ಲಿ ಸಂದೇಹವಿಲ್ಲ. ಯಾವ ಧ್ಯೇಯವನ್ನಿಟ್ಟುಕೊಂಡು ಮನೆ ತೊರೆದಿರೋ ಅದರತ್ತ ಏಕನಿಷ್ಠೆಯಿಂದ ಸಾಗಿದ್ದೀರಿ. ಅಪೂರ್ವ ಗುರುವನ್ನು ಪಡೆದ ಅಪೂರ್ವ ಶಿಷ್ಯೆಯಾದ ತಾವು ಗುರುಗಳ ಆದೇಶ ಪಾಲನೆಯಲ್ಲಿ ಇಟ್ಟ ಶ್ರದ್ಧೆ ಮತ್ತು ನಿಷ್ಠೆ ಇತರರಿಗೆ ಅನುಕರಣೀಯವಾಗಿವೆ.

ಭಕ್ತಿಪೂರ್ವಕ ಅಭಿನಂದನೆ

ನಿಮ್ಮ ಭವಿಷ್ಯವನ್ನು ಅರಿತರೋ ಎಂಬಂತೆ ನಿಮ್ಮ ಮಾತಾಪಿತೃಗಳು 'ಗಂಗಮ್ಮ' ಎಂದು ಹೆಸರಿಟ್ಟರು. ನೀವು ಹರಿವ ಗಂಗೆಯೇ ಆಗಬೇಕು ಎಂಬ ಸತ್ಸಂಕಲ್ಪದಿಂದ ಪೂಜ್ಯ ಗುರುಗಳು ಮತ್ತು ಪೂಜ್ಯ ಮಾತಾಜಿಯವರು ಜಂಗಮ ದೀಕ್ಷೆ ನೀಡಿದಾಗ ''ಮಾತೆ ಗಂಗಾದೇವಿ'' ಎಂಬ ವಿಶೇಷ ಅಭಿಧಾನ ನೀಡಿದರು. ಹರಿವ ಗಂಗೆಯಂತೆಯೇ ಜಗದ ಬಯಲಲಿ ನಿರಂತರವಾಗಿ ಸಂಚರಿಸುತ್ತ ಭಕ್ತರ ಹೃದಯ

ಭೂಮಿಯ ಮೇಲೆ ಭಕ್ತಿ-ಜ್ಞಾನಗಳ ಬೆಳೆಯನ್ನು ತೆಗೆಯುತ್ತಿದ್ದೀರಿ. ನವನಗರದ ಕೆ.ಹೆಚ್.ಬಿ. ಕಾಲನಿಯಲ್ಲಿ ದಿ. 15-4-2001ರಂದು ಪ್ರವಚನವನ್ನು ಆರಂಭಿಸಿ ನಿತ್ಯವೂ ಅಖಂಡವಾಗಿ, ಅವ್ಯಾಹತವಾಗಿ ಸಂಜೆ 7 ರಿಂದ 9ರವರೆಗೆ ಜ್ಞಾನಗಂಗೆಯನ್ನು ಹರಿಸುತ್ತಿದ್ದೀರಿ. ದೂರದರ್ಶನದ ಆಕರ್ಷಣೆಯ ಈ ಯುಗದಲ್ಲಿ ಸಹ ಜನರು ತಮ್ಮ ವಾಣಿಗೆ ಮಾರುಹೋಗಿ ಜ್ಞಾನಜಲವನ್ನು ತುಂಬಿಕೊಳ್ಳಲು ಆಸಕ್ತಿಯಿಂದ ಸೇರುತ್ತಿರುವುದು ಎಲ್ಲರನ್ನು ಬೆರಗುಗೊಳಿಸಿದೆ. ಇಂದಿಗೆ 43ನೆಯ ದಿವಸ. ಒಂದು ದಿನ ಹೇಳಿದ ವಿಷಯ ಮತ್ತೊಂದು ದಿನ ಪುನರಾವರ್ತನೆಯಾಗುವುದಿಲ್ಲ. ಅಷ್ಟು ಅಗಾಧವಾದ ಜ್ಞಾನ ವಾರಾಶಿ ನೀವು. ತಾತ ಮತ್ತು ತಂದೆ ಉಭಯತರೂ ಗಳಿಸಿದ ಆಸ್ತಿ ಪ್ರಾಪ್ತಿಯಾದ ಅಗರ್ಭ ಶ್ರೀಮಂತ ಮಗನಂತೆ ತಾವು ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು ಮತ್ತು ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಗಳಿಸಿದ ಜ್ಞಾನವನ್ನು ಪಡೆದ ಪುಣ್ಯವಂತರು. ಹೀಗೆ ಗಳಿಸಿದ ಜ್ಞಾನ ಸಂಪತ್ತು ಮತ್ತಷ್ಟು ಬೆಳೆಸಿಕೊಂಡು ಜಗತ್ತಿಗೆ ಪ್ರವಚನದ ಮೂಲಕ ಧಾರೆ ಎರೆಯುತ್ತಿರುವ ದಿವ್ಯ ಯೋಗಿಣಿ ತಾವು. ಇಂತಹ ತಮಗೆ ಸೃಷ್ಟಿಕರ್ತ ಲಿಂಗದೇವ, ಧರ್ಮಕರ್ತ ಬಸವಣ್ಣನವರು, ಆದಿ ಶರಣರು ಆಯುರಾರೋಗ್ಯ ಭಾಗ್ಯ ಸಕಲ ಸಂಪತ್ತನ್ನು ಅನುಗ್ರಹಿಸಲೆಂದು ಅವರಲ್ಲಿ ಬೇಡಿಕೊಂಡು, ನಮಗೆ ನೀಡಿದ ಜ್ಞಾನಕ್ಕಾಗಿ ತುಂಬು ಹೃದಯದಿಂದ ಕೃತಜ್ಞತೆ ಸಲ್ಲಿಸುತ್ತ ಈ ಅಭಿನಂದನ ಪತ್ರವನ್ನು ಸಮರ್ಪಿಸುತ್ತಿದ್ದೇವೆ.

ದಿ. 27-5-2001. ಶರಣು ಶರಣಾರ್ಥಿಗಳೊಡನೆ,

ಶರಣ.ಕಲ್ಯಾಣಪ್ಪ ಪರಮಾದಿ
ಅಧ್ಯಕ್ಷರು, ರಾಷ್ಟ್ರೀಯ ಬಸವ ದಳ, ಹುಬ್ಬಳ್ಳಿ

ಶರಣ.ಬಿ.ಜಿ. ಹೊಸಗೌಡರು
ಗೌರವಾಧ್ಯಕ್ಷರು, ಗಣಾಚಾರ ದಳ, ಹುಬ್ಬಳ್ಳಿ

ಶರಣ. ಎಸ್.ಎಲ್. ಗೌಡರು
ಲಿಂಗಾಯತ ಧರ್ಮ ಮಹಾಸಭಾ, ಧಾರವಾಡ

ಶರಣ. ಶಿವಣ್ಣ ಶಿರೂರು
ಅಧ್ಯಕ್ಷರು, ರಾಷ್ಟ್ರೀಯ ಬಸವ ದಳ, ಧಾರವಾಡ

ವಚನ ಕಿರಣ

ಸದ್ಗುರು ಶ್ರೀ ಗಂಗಾಮಾತೆಯ ಶ್ರೀ ಚರಣವ ಮುಟ್ಟಿ
ಎನ್ನ ತನು ಶುದ್ಧವಾಯಿತ್ತು.
ಸದ್ಗುರು ಶ್ರೀ ಗಂಗಾಮಾತೆಯ ಶ್ರೀ ಚರಣವ ನೋಡಿ
ಎನ್ನ ದೃಷ್ಟಿ ದಿವ್ಯವಾಯಿತ್ತು.
ಸದ್ಗುರು ಶ್ರೀ ಮಾತೆಯ ಶ್ರೀ ಚರಣವ ಹಾಡಿ
ಎನ್ನ ಮಾತು ಮಂತ್ರವಾಯಿತ್ತು.
ಸದ್ಗುರು ಶ್ರೀ ಗಂಗಾ ಮಾತೆಯ ಶ್ರೀ ಚರಣವ ನೆನೆದು
ಎನ್ನ ಮನ ಪರಿಶುದ್ಧವಾಯಿತ್ತು.
ಸದ್ಗುರು ಶ್ರೀ ಗಂಗಾಮಾತೆಯ ಶ್ರೀ ಚರಣ ಧ್ಯಾನಿಸಿ
ಎನ್ನ ಭಾವ ಅನುಭಾವವಾಯಿತ್ತು; ಕಾಣಾ
ಲಿಂಗಜ್ಞಾನಿ ಶ್ರೀ ಚನ್ನಬಸವಣ್ಣ.

-ಡಾ|| ಮರಿಬಸಪ್ಪ ದನದಮನಿ, ಧಾರವಾಡ.

ಪೂರ್ಣಯೋಗ ತರಬೇತಿ- ಆವಶ್ಯಕತೆ ಮತ್ತು ಉದ್ದೇಶ

ಮಾನವ ಜೀವನವು ಅತ್ಯಂತ ಅಮೂಲ್ಯವಾದುದು. ಸೃಷ್ಟಿಕರ್ತನಾದ ಪರಮಾತ್ಮನು ಪಂಚಭೂತಗಳಿಂದ ಕೂಡಿದ ಬ್ರಹ್ಮಾಂಡವನ್ನು ಮತ್ತು ಪಿಂಡಾಂಡವನ್ನು ಜೀವರಾಶಿಗೆ ವರವನ್ನಾಗಿ ಕೊಟ್ಟಿದ್ದಾನೆ. ಪ್ರಾಣಿಗಳು ಹುಟ್ಟುಗುಣಗಳಿಂದ ಪ್ರಚೋದಿತವಾಗಿ ಬದುಕುತ್ತವಾದರೂ ಮನುಷ್ಯನಷ್ಟು ಇಂದ್ರಿಯ ಚಾಪಲ್ಯದಿಂದ ಕೂಡಿಲ್ಲ. ಆದರೆ ಮನುಷ್ಯನು ವಿಷಮ ಆಹಾರ- ವಿಹಾರ- ವಿಚಾರ- ವ್ಯಸನಗಳಿಂದ ಕೂಡಿ ಆರೋಗ್ಯಭಾಗ್ಯದಿಂದ ವಂಚಿತನಾಗಿ ಜೀವನವನ್ನು ದುಃಖಮಯವಾಗಿ ಮಾಡಿಕೊಳ್ಳುವುದಲ್ಲದೆ ಇನ್ನಿತರರಿಗೂ ದುಃಖವನ್ನು ಕೊಡುವನು.

ಮಾನವನು ತನು-ಮನ-ಆತ್ಮ ಎಂಬ ಮೂರು ಘಟಕಗಳಿಂದ ಕೂಡಿರುವನು. ತನುವಿಗೆ ಆರೋಗ್ಯ, ಮನಸ್ಸಿಗೆ ಶಾಂತಿ, ಆತ್ಮನಿಗೆ ದಿವ್ಯಾನಂದ ಹೊಂದುವುದೇ ಪೂರ್ಣತ್ವ ಪ್ರಾಪ್ತಿ. ಇಂಥ ತ್ರಿವಿಧ ಭಾಗ್ಯವನ್ನು ಒದಗಿಸುವುದೇ ಪೂರ್ಣಯೋಗದ ತರಬೇತಿ ಕಮ್ಮಟದ ಗುರಿ. ಯೋಗಾಸನ, ಪ್ರಾಣಾಯಾಮ, ಸತ್ವಭರಿತ ಆಹಾರ ಸೇವನೆ ಇವುಗಳಿಂದ ಶರೀರದ ಸ್ವಾಸ್ಥ್ಯವನ್ನು ಕಾಪಾಡಿಕೊಂಡು, ಜ್ಞಾನ-ಭಕ್ತಿ-ಅಧ್ಯಯನಗಳಿಂದ ಮನಸ್ಸಿಗೆ ಜ್ಞಾನಾತ್ಮಕ ಶಾಂತಿಯನ್ನು ಪಡೆದುಕೊಂಡು, ಆತ್ಮನಿಗೆ ದಿವ್ಯಾನಂದವನ್ನು ಧ್ಯಾನದಿಂದ ಪಡೆದುಕೊಂಡು ವ್ಯಕ್ತಿಯು ಪೂರ್ಣತ್ವವನ್ನು ಸಂಪಾದಿಸುವಂತೆ ಪೂರ್ಣಯೋಗವು ತರಬೇತಿ ನೀಡುತ್ತದೆ. ಯೋಗವು ಒಂದು ದೈವೀವಿದ್ಯೆ ಮಾತ್ರವಲ್ಲ ಅತ್ಯಂತ ವೈಜ್ಞಾನಿಕವಾದುದು.

ಶ್ರೀ ಬಸವೇಶ್ವರ ದಿವ್ಯಜ್ಞಾನ ವಿದ್ಯಾಲಯ ಎಂಬ ಅಧ್ಯಾತ್ಮಿಕ ಕೇಂದ್ರವು 15 ದಿವಸಗಳ ಅವಧಿಯ ತರಬೇತಿಯನ್ನು ಏರ್ಪಡಿಸುತ್ತದೆ. ಬೆಳಿಗ್ಗೆ 6-30ರಿಂದ 8-30ರವರೆಗೆ, ಸಂಜೆ 6-30ರಿಂದ 8-30ರವರೆಗೆ ಹೀಗೆ ಎರಡು ತಂಡಗಳಲ್ಲಿ ತರಬೇತಿ ನೀಡಲಾಗುವುದು. ಆಸಕ್ತರು ತಮಗೆ ಅನುಕೂಲವಾದ ಸಮಯವನ್ನು ಆರಿಸಿಕೊಳ್ಳಬಹುದು. 15ನೆಯ ದಿವಸ ಮಾತ್ರ ಬೆಳಗಿನ 6-30ರಿಂದ ಸಂಜೆ 8-30ರವರೆಗೆ ಎರಡೂ ತಂಡಗಳವರು ಒಟ್ಟಾಗಿ ಸೇರಿ ಪೂರ್ಣ ದಿವಸ ಪ್ರಾಯೋಗಿಕ ತರಬೇತಿ ಪಡೆಯಬೇಕು. ಕಮ್ಮಟದ ಸಮಯದಲ್ಲಿ ತಾವು ಪಡೆದುಕೊಂಡ ಜ್ಞಾನ ತರಬೇತಿ ಕುರಿತು ಅಭಿಪ್ರಾಯ ತಿಳಿಸಬೇಕು. ಪುರುಷರು ಮತ್ತು ಮಹಿಳೆಯರು ಉಭಯತರಿಗೂ ಪ್ರವೇಶವಿದೆ. ತರಬೇತಿ ಕಾಲದಲ್ಲಿ ಪಾಲಿಸಬೇಕಾದ ನಿಯಮ, ಉಡಬೇಕಾದ ಬಟ್ಟೆ, ಯೋಗಾಸನಕ್ಕೆ ನೆಲಹಾಸು- ಮುಂತಾದವುಗಳ ಬಗ್ಗೆ ಮೊದಲನೆಯ ದಿವಸ ವಿವರಗಳನ್ನು ನೀಡಲಾಗುವುದು. ಬೊಜ್ಜು, ಉಸಿರಾಟದ ತೊಂದರೆ, ಆಸ್ತಮಾ, ಕೀಲು ನೋವು, ಅಲರ್ಜಿ, ಮಧುಮೇಹ, ಉದ್ವಿಗ್ನತೆ, ರಕ್ತದೊತ್ತಡ ಇಂಥ ಅನೇಕ ಶಾರೀರಿಕ ಬಾಧೆಗಳಿಗೆ ಸೂಕ್ತ ಚಿಕಿತ್ಸೆಯನ್ನು ಸೂಚಿಸಲಾಗುವುದು.

ಜಾತಿ ಪಂಥ ಧರ್ಮ ಭೇದವಿಲ್ಲದೆ ಹೆಚ್ಚಿನ ಜನರು ಭಾಗವಹಿಸಿ ಈ ತರಬೇತಿ ಕಮ್ಮಟದ ಸದುಪಯೋಗವನ್ನು ಮಾಡಿಕೊಳ್ಳಬೇಕೆಂದು ವಿನಂತಿಸುತ್ತೇವೆ. ತಮ್ಮ ತಮ್ಮ ಊರುಗಳಲ್ಲಿ ಪೂರ್ಣಯೋಗ ತರಬೇತಿ ಕಮ್ಮಟವನ್ನು ಏರ್ಪಡಿಸಬೇಕು ಎಂಬ ಅಪೇಕ್ಷೆಯುಳ್ಳವರು ಕೊಟ್ಟಿರುವ ವಿಳಾಸಕ್ಕೆ ಸಂಪರ್ಕಿಸಬಹುದು.

ಶರಣ. ಮಹಾಂತೇಶ ಹಿರೇಮಠ
ತರಬೇತಿದಾರರು

ಪೂಜ್ಯ ಶ್ರೀ ಸಿದ್ಧರಾಮೇಶ್ವರ ಸ್ವಾಮೀಜಿ
ಸಂಚಾಲಕರು

ಶ್ರೀ ಬಸವೇಶ್ವರ ದಿವ್ಯಜ್ಞಾನ ವಿದ್ಯಾಲಯ, 2035, 20ನೆಯ ಮುಖ್ಯ ರಸ್ತೆ
2ನೆಯ ವಿಭಾಗ, ರಾಜಾಜಿನಗರ, ಬೆಂಗಳೂರು-560010. ☎ : 3325335, 3322790

ಬಸವ ಗಂಗೋತ್ರಿ ನಗರ ಯೋಜನೆ - 2ನೇ ಹಂತ

ಶರಣ ಬಂಧುಗಳಿಗೆ ಸಂತೋಷದ ಸುದ್ದಿ

ಬೆಂಗಳೂರಿನ ಉಪನಗರವಾದ ಕೆಂಗೇರಿಯಿಂದ ಆಚೆಗೆ ಬೆಂಗಳೂರು-ಮೈಸೂರು ಹೆದ್ದಾರಿಗೆ ಹೊಂದಿಕೊಂಡಂತೆ, ಕುಂಬಳಗೋಡು ಗ್ರಾಮದ ಸರಹದ್ದಿಗೆ ಸೇರಿದ **"ಬಸವ ಗಂಗೋತ್ರಿ"** ನಗರವು ಬೆಂಗಳೂರಿನಿಂದ ಅತಿದೂರದಲ್ಲಿಯೂ ಇರದೆ, ನಗರ ಮಧ್ಯದ ಗೋಜು ಗಡಿಬಿಡಿಗಳಿಂದ ದೂರವಾಗಿಯೂ ಇದೆ. ನಗರ ಸಾರಿಗೆ ಮತ್ತು ಗ್ರಾಮಾಂತರ ಸಾರಿಗೆಯ ಅನುಕೂಲತೆ ಹೊಂದಿದೆ.

1. ''ಬಸವ ಗಂಗೋತ್ರಿ ನಗರ'' ಯೋಜನೆಯು ವಿಶ್ವಕಲ್ಯಾಣ ಮಿಷನ್ ಟ್ರಸ್ಟಿನ ಒಡೆತನದಲ್ಲಿ ರೂಪುಗೊಳ್ಳುತ್ತಿದ್ದು, ಇದಕ್ಕಾಗಿ ಒಂದು ನಿವೇಶನ ವಿತರಣಾ ಸಮಿತಿಯನ್ನು ರಚಿಸಲಾಗಿದೆ. ಈ ಯೋಜನೆಯಡಿಯಲ್ಲಿ ಕೆಳಕಂಡ ಅಳತೆಗಳನ್ನುಳ್ಳ ನಿವೇಶನಗಳು ಲಭ್ಯವಾಗಲಿವೆ.

    ವರ್ಗ 'ಎ'-40' X 60'-ವಿಸ್ತೀರ್ಣ 2400 ಚ.ಅಡಿಗಳು

    ವರ್ಗ 'ಬಿ'-30' X 40'-ವಿಸ್ತೀರ್ಣ 1200 ಚ.ಅಡಿಗಳು

ನಿವೇಶನಗಳಲ್ಲಿ ಬೆಳೆದಿರುವ ತೆಂಗಿನಮರಗಳನ್ನು ಹಾಗೆಯೇ ಉಳಿಸಿಕೊಳ್ಳಲು ಸಂಕಲ್ಪಿಸಿರುವುದರಿಂದ ನಿವೇಶನಗಳ ಅಳತೆಗಳು ಸ್ವಲ್ಪ ಏರುಪೇರಾಗುವ ಸಂಭವವಿದೆ. ಅಲ್ಲದೆ ಭೂಮಿಯ ಆಕಾರಕ್ಕನುಗುಣವಾಗಿಯೂ ಸಹ ನಿವೇಶನಗಳ ಅಳತೆಗಳಲ್ಲಿ ಕೆಲವೊಂದು ಮಾರ್ಪಾಟಾಗಬಹುದು. ಚದುರಡಿಯ ಮೇಲೆ ಬೆಲೆಯನ್ನು ನಿರ್ಧರಿಸಲಾಗುವುದು.

2. ನಿವೇಶನಗಳು ಸೀಮಿತ ಸಂಖ್ಯೆಯಲ್ಲಿರುವುದರಿಂದ ಅರ್ಜಿ ಪತ್ರಗಳ ಆಧಾರದ ಮೇಲೆ ವಿತರಣಾ ಸಮಿತಿಯು ಸದಸ್ಯರನ್ನು ಆಯ್ಕೆ ಮಾಡಿ, ನಂತರ ಸದಸ್ಯತ್ವ ಶುಲ್ಕ ರೂ. 1000/- (ಒಂದು ಸಾವಿರ)ರೂಪಾಯಿ ಕಟ್ಟಲು ಪರವಾನಗಿ ನೀಡುವುದು.
3. ನಿವೇಶನ ಪಡೆಯಲಿಚ್ಛಿಸುವವರು ಅರ್ಜಿ ಮತ್ತು ಹೆಚ್ಚಿನ ವಿವರಗಳಿಗಾಗಿ ''ವಿಶ್ವಕಲ್ಯಾಣ ಮಿಷನ್, ಬೆಂಗಳೂರು'' ಹೆಸರಿಗೆ 100/-(ಒಂದುನೂರು) ರೂಗಳನ್ನು ಎಂ.ಓ/ಕ್ರಾಸ್ಡ್ ಡ್ರಾಫ್ಟ್ ಮೂಲಕ ಬೆಂಗಳೂರಿನಲ್ಲಿನ ಬ್ಯಾಂಕ್‌ಗಳಲ್ಲಿ ಪಾವತಿಯಾಗುವಂತೆ ಈ ಕೆಳಕಂಡ ವಿಳಾಸಕ್ಕೆ ಕಳಿಸುವುದು. ಈ ಮೊಬಲಗನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ. ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ನಿವೇಶನ ಅಭಿವೃದ್ಧಿ ಕಾರ್ಯವನ್ನು ತ್ವರಿತಗತಿಯಲ್ಲಿ ಕೈಗೆತ್ತಿಕೊಂಡಿರುವುದರಿಂದ ಸದಸ್ಯರ ಆಯ್ಕೆ ಮತ್ತು ನಿವೇಶನ ವಿತರಣೆ ಬೇಗನೆ ಆಗುವುದು. ಆದ್ದರಿಂದ ಆಸಕ್ತರು ಬೇಗನೆ ಪತ್ರ ವ್ಯವಹಾರ ಮಾಡಬೇಕು.

ವ್ಯವಹರಿಸಬೇಕಾದ ವಿಳಾಸ :- ದೂರವಾಣಿ : 080-3325335 / 3322790

ಪೂಜ್ಯ ಶ್ರೀ ಸದ್ಗುರು ಸ್ವಾಮಿ ಅಲ್ಲಮ ಪ್ರಭು
ವಿಶ್ವಕಲ್ಯಾಣ ಮಿಷನ್, ಬಸವ ಗಂಗೋತ್ರಿ ನಗರ ಯೋಜನೆ
ಬಸವ ಮಂಟಪ, 2035, 20ನೆಯ ಮುಖ್ಯರಸ್ತೆ, 2ನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು-560010

☹ ಸಮಸ್ಯೆ ? - ☺ ಸಮಾಧಾನ !

ಸೌಭಾಗ್ಯ ನಾಗರಾಜು, ಮೈಸೂರು. -ನಮಗೆಲ್ಲ ಲಿಂಗದೇವಾ ಪದವು ಬಹಳ ಆಪ್ಯಾಯಮಾನವಾಗಿ ಅರ್ಥಗರ್ಭಿತವಾಗಿ ಕಂಡು ಬಂದು ಮೊದಲು 'ಪ್ರಭೋ ನೀನು ಸರ್ವವ್ಯಾಪಿಯಾಗಿರುವೆ' ಎಂಬುದರ ಬದಲಿಗೆ ಈಗ 'ಲಿಂಗದೇವಾ ನೀನು ಸರ್ವವ್ಯಾಪಿಯಾಗಿರುವೆ' ಎಂಬ ಸ್ತೋತ್ರ ಅತೀವ ಆನಂದಕೊಡುತ್ತಿದೆ. ಆದರೆ ಕೆಲವು ಲಿಂಗಾಯತರು 'ಲಿಂಗದೇವ ' ಪದ ಕೇಳಿದರೆ ಸಾಕು ಉರಿದುಬೀಳುತ್ತಾರಲ್ಲ, ಏಕೆ ?

★ ಭೂತ ಪ್ರೇತಗಳು 'ದೇವರ' ಹೆಸರು ಕೇಳಿದರೆ ಸಿಡಿದು ಬೀಳುತ್ತವೆ, ಪ್ರತಿಭಟಿಸುತ್ತವೆ. ಒಮ್ಮೆ ಓರ್ವ ಮಹಿಳೆಗೆ ದೆವ್ವ ಬಡಿದಿದೆ ಎಂದು ಕರೆತಂದರು. ಆಗ ನಾನು ತಲೆಯ ಮೇಲೆ ಮಂತ್ರೋದಕ ಹಾಕಿ, ಭಸ್ಮಧಾರಣೆ ಮಾಡಿ, ಮಂತ್ರವನ್ನು ಉಚ್ಚರಿಸುತ್ತಿದ್ದಂತೆಯೇ ಆ ಮಹಿಳೆ, ''ಬೇಡ ಬೇಡ ಮಂತ್ರ ಹೇಳಬೇಡ. ನಾನು ಈಕೆಯನ್ನು ಬಿಟ್ಟು ಹೋಗಲಾರೆ.'' ಎಂದು ಚೀರತೊಡಗಿದಳು. ಗದರಿಸಿ ಮಂತ್ರೋಪದೇಶ ಮಾಡಿ ಆಕೆಯಿಂದ ಹೇಳಿಸಲು ಯತ್ನಿಸಿದಾಗಲೂ ಪ್ರತಿಭಟಿಸಿದಳು. ನಂತರ ನಿಧಾನವಾಗಿ 5 ಸಲ ಹೇಳಿದಾಗ ''ನಾನು ಇನ್ನು ಹೋಗುತ್ತೇನೆ'' ಎಂದು ಚೀರಿದಳು, ನಂತರ ಎಚ್ಚರ ತಪ್ಪಿದಳು. ಎಚ್ಚರವಾದಾಗ ಸಂಪೂರ್ಣ ಆರಾಮವಾಗಿದ್ದಳು, ಹಾಗೆಯೇ ಕೆಲವು ಲಿಂಗಾಯತರಿಗೆ ಯಾವುದೊ(?) ಭೂತ ಪ್ರವೇಶವಾಗಿದ್ದು ಲಿಂಗದೇವನ ಹೆಸರು ಕೇಳಿದರೆ ಸಿಡಿದು ಬೀಳುತ್ತಾರೆ. ನಾವು ದೃಢವಾಗಿ ಹೇಳುತ್ತಾ ಹೋಗಬೇಕು. ಒಂದು ದಿನ ಆ ಪೂರ್ವಾಗ್ರಹ ಪೀಡಿತ ಮನೋಭಾವದ ಭೂತ ತೊಲಗಿ ಮಾನಸಿಕವಾಗಿ, ಬೌದ್ಧಿಕವಾಗಿ ಸ್ವಸ್ಥರಾಗುತ್ತಾರೆ.

ಅಡಿವೆಯ್ಯಾ ಸ್ವಾಮಿ, ಹೈದರಾಬಾದ. -ಕಲ್ಯಾಣ ಕಿರಣದಲ್ಲಿ ಮಲ್ಲಿಕಾರ್ಜುನ ಡೊಣಗಾಪುರೆ ಅವರು ಬರೆದ ಲಿಂಗದೇವ ಸ್ತುತಿಯ ಕಡೆಯಲ್ಲಿ, ಬಸವ ನಾಮಾಮೃತವು ನಿತ್ಯದಿ ಎಂಬುದರ ಬದಲಿಗೆ ಲಿಂಗದೇವ ನಾಮಾಮೃತವು ಎಂದು ಬರೆದಿದ್ದಾರೆ. ಅದಕ್ಕೆ ನಮ್ಮ ಪರಿಚಿತರೊಬ್ಬರು ನಿಮ್ಮ ಮಾತಾಜಿಯವರು ಬಸವಣ್ಣನವರ ಹೆಸರನ್ನು ತಿಂದು ಹಾಕಿದ್ದಾರೆ ಎಂದು ವ್ಯಂಗ್ಯವಾಡಿದರು. ಇದಕ್ಕೆ ನಿಮ್ಮ ಉತ್ತರವೇನು ?

★ ಲಿಂಗಾಯತರು ಬುದ್ಧಿ(intellect) ಮುಂದಾದ ಜನರಲ್ಲ, ಬಾಯಿ(ಕುಹಕದ ಮಾತು) ಮುಂದಾದ ಜನರು. ಆಲೋಚಿಸದೆ ಮಾತನಾಡುವ ಪ್ರವೃತ್ತಿ ಬೆಳೆಸಿಕೊಂಡು, ದುಡುಕಿ ಮಾತನಾಡಿ, ಮುಖಭಂಗಿತರಾಗುವರು. ಆ ಸ್ತುತಿ ಪದ್ಯ ಬರೆದವರು ಮಲ್ಲಿಕಾರ್ಜುನ ಎಂಬುವವರು. ಭಾಮಿನಿ ಷಟ್‌ಪದಿಯಲ್ಲಿ ನಾನು ಬರೆದಿದ್ದ ''ಬಸವ ನಾಮಾಮೃತವು'' ಎಂಬ ಪದ್ಯ ಬಳಸಿಕೊಂಡು ತಾವು ಬರೆದ ಸ್ತುತಿ ಗೀತೆಗೆ ಮಂಗಲ ಪದ್ಯ ಮಾಡಿದ್ದಾರೆ. 'ಬಸವ' ಎಂಬ ಮೂರಕ್ಷರದ ಬದಲು, ಲಿಂಗದೇವ ಎಂಬ ನಾಲ್ಕು ಅಕ್ಷರದ ಪದ ಇಟ್ಟಾಗ ಭಾಮಿನಿ ಷಟ್‌ಪದಿಯ ಛಂದಸ್ಸಿಗೆ ಲೋಪ ಬರುತ್ತದೆ. ಪಾಪ ! ರಾಷ್ಟ್ರೀಯ ಬಸವ ದಳದ ಕಾರ್ಯಕರ್ತರೋರ್ವರು ಇಷ್ಟಾದರೂ ಆಲೋಚಿಸಿ ಲಿಂಗದೇವನ 108 ನಾಮಾವಳಿ ಬರೆದಿದ್ದಾರೆ ಎಂದು ಹರ್ಷಿಸಿ ಆ ಪದ್ಯ ಮುದ್ರಿಸಲಾಗಿದೆ. ಯಾರು ಬರೆದಿದ್ದು ಎಂಬುದನ್ನೂ ತಿಳಿದುಕೊಳ್ಳಲು ಸಾಮರ್ಥ್ಯವಿಲ್ಲದ ನಿಮ್ಮ ಪರಿಚಿತರ ಬುದ್ಧಿವಂತಿಕೆ ಪ್ರದರ್ಶನಕ್ಕಾಗಿ ಮರುಕ ಪಡಬೇಕು ಅಷ್ಟೆ !

ಮಾತೆ ಕಸ್ತೂರಿದೇವಿ, ಬಸವ ಗಂಗೋತ್ರಿ. -ರಾಜಕೀಯ ಶಾಸ್ತ್ರದ ಅಧ್ಯಾಪಕರಾದ ಓರ್ವ ವೀರಶೈವರು ಭೇಟಿಯಾದರು. ಅವರು ಹೇಳಿದರು, ''ಲಿಂಗದೇವ ಪದವನ್ನು ಬಳಕೆಗೆ ತರಲು ಮಾತಾಜಿ ತೀರಾ ಶ್ರಮಪಡುತ್ತಿದ್ದಾರೆ. ಒಂದು ಗ್ರಾಂ ಚಿನ್ನಕ್ಕಾಗಿ 2 ಕಿ.ಮೀಟರ್ ಗಣಿ ಅಗೆಯುವ ಶ್ರಮದಂತಿದೆ''.

ಎಂದರು. ಅಲ್ಲದೆ ಮುಂದುವರಿದು, ''ಲಿಂಗದೇವ ವಚನಾಂಕಿತವನ್ನು ಸಮಾಜದ ಮೇಲೆ ಒತ್ತಾಯಪೂರ್ವಕವಾಗಿ ಹೇರುತ್ತಿದ್ದಾರೆ.'' ಎಂದರು. ಇದಕ್ಕೆ ನಿಮ್ಮ ಉತ್ತರವೇನು ?

★ ಮೊಟ್ಟ ಮೊದಲನೆಯದಾಗಿ ವೀರಶೈವರ ಜೊತೆ ವಾದಕ್ಕೆ ಇಳಿಯಲೇ ಬಾರದು. ಏಕೆಂದರೆ ಅವರಿಗೆ ನಿರಾಕಾರ ದೇವರ ಕಲ್ಪನೆಯಾಗಲಿ, ಇಷ್ಟಲಿಂಗದ ಮಹತಿಯಾಗಲಿ ತಿಳಿದಿರುವುದಿಲ್ಲ. ಇರಲಿ; ಇತರರಿಗಾದರೂ ತಿಳಿಸಲೆಂದು ಈ ಪ್ರಶ್ನೆಗಳಿಗೆ ಉತ್ತರಿಸುತ್ತೇನೆ. ಶ್ರಮದಾಯಕ ಪ್ರಯತ್ನ ಪಡದೆ ಯಾವ ಸತ್ಯವನ್ನೂ ಪ್ರತಿಷ್ಠಾಪಿಸಲು ಸಾಧ್ಯವಿಲ್ಲ. ಜಗತ್ತಿನ ಇತಿಹಾಸವನ್ನು ಗಮನಿಸಿದರೆ ವಿವಿಧ ರಂಗಗಳಲ್ಲಿ ಸಂಶೋಧಕರು ಎಷ್ಟು ಶ್ರಮಪಟ್ಟಿದ್ದಾರೆಂದು ತಿಳಿದು ಬರುತ್ತದೆ. ನಮಗೆ ಅಂಥ ಶ್ರಮವೇನಿಲ್ಲ. ಶ್ರಮವಾದರೂ ಲೆಕ್ಕಿಸುವುದಿಲ್ಲ.

ಇನ್ನು ಒತ್ತಾಯದಿಂದ ಹೇರುತ್ತೇವೆಂಬುದು ಹಾಸ್ಯಾಸ್ಪದವಾದ ಮಾತು. ನಾವೇನು ಸರ್ವಾಧಿಕಾರಿಗಳಲ್ಲ. ಪ್ರವಚನದ ಮೂಲಕ, ಬರಹದ ಮೂಲಕ ಸತ್ಯವನ್ನು ಮನವರಿಕೆ ಮಾಡುತ್ತಾ ಹೋಗುತ್ತಿದ್ದೇವೆ. ತಿಳಿದುಕೊಂಡಂತೆ ನಿಧಾನವಾಗಿ ಹೆಚ್ಚಿನ ಜನರು ಅಳವಡಿಸಿಕೊಳ್ಳುತ್ತಿದ್ದಾರೆ.

2. ಓರ್ವ ಸರ್ಕಾರಿ ನೌಕರದಾರರು ಧರ್ಮ ಕಾಲಂದಲ್ಲಿ ''ಲಿಂಗಾಯತ'' ಎಂದು ಮಾತ್ರ ಬರೆದರಂತೆ. ಆಗ ಲಿಂಗಾಯತರೇ ಆಗಿದ್ದ ಮೇಲಧಿಕಾರಿಗಳು ಪ್ರಶ್ನಿಸಿ, ತಿಳಿದುಕೊಂಡು, ಲಿಂಗಾಯತ-ಗೌಡರು ಎಂದು ಬರೆದರಂತೆ. ಹೀಗಾದರೆ ಲಿಂಗಾಯತರನ್ನು ಜಾತಿ ಕೂಪದಿಂದ ಮೇಲಕ್ಕೆತ್ತುವುದು ಹೇಗೆ ?

★ ಈ ಬಗ್ಗೆ ನಾವು ಶರಣ ಮೇಳದಲ್ಲಿ ಮತ್ತು ನವೆಂಬರ್ ತಿಂಗಳಲ್ಲಿ ಟೌನ್ ಹಾಲ್‌ದಲ್ಲಿ ನಡೆದ ಸಮಾವೇಶದಲ್ಲಿ ಚರ್ಚಿಸಿದ್ದೇವೆ. ಲಿಂಗಾಯತವು ಒಂದು ಧರ್ಮ, ಸ್ವತಂತ್ರ ಧರ್ಮ, ಲಿಂಗಾಯತರು ಅಲ್ಪ ಸಂಖ್ಯಾತ ಧರ್ಮಾನುಯಾಯಿಗಳು ಎಂಬ ಮಾನ್ಯತೆಯನ್ನು ಅಧಿಕೃತವಾಗಿ ಪಡೆಯುವ ತನಕ ಈ ಸಮಸ್ಯೆ ಬಗೆ ಹರಿಯದು. ಏಕೆಂದರೆ ಜನಗಣತಿ ಫಾರ್ಮಿನಲ್ಲಿ ಮಾತ್ರ ಜಾತಿ ಬಗ್ಗೆ ಕೇಳುವುದಿಲ್ಲ. ಬಾಕಿ ಎಲ್ಲ ರಾಜ್ಯ ಸರ್ಕಾರ, ಕೇಂದ್ರ ಸರ್ಕಾರದ ನೌಕರಿ ಅರ್ಜಿಗಳಲ್ಲಿ ಒಳಜಾತಿ ಬಗ್ಗೆ ಕೇಳುವರು. ಕೆಲವು ಉಪಜಾತಿಗಳಿಗೆ ವಿಶೇಷ ಸೌಲಭ್ಯಗಳಿವೆ. ಬರೆಯದೆ ಇದ್ದರೆ ಅವರ ಅರ್ಜಿ ಸರಿಯಾಗಿ ವರ್ಗೀಕರಣವಾಗದು. ಆದ್ದರಿಂದ ತಾತ್ಕಾಲಿಕವಾಗಿ ಬರೆಯುತ್ತಿರಲಿ. ನಂತರ ಶಾಶ್ವತ ಪರಿಹಾರಕ್ಕೆ ಬೌದ್ಧ, ಜೈನ, ಸಿಖ್ಖರಿಗಿರುವಂತೆ ಮಾನ್ಯತೆ ಪಡೆಯಲು ಯತ್ನಿಸಬೇಕು.

ಬಿ.ಎಂ. ಪಾಟೀಲ್, ಮುದ್ದೇಬಿಹಾಳ. - ಲಿಂಗೈಕ್ಯ ಲಿಂಗಾನಂದ ಸ್ವಾಮಿಗಳು ಮತ್ತು ನಾನು ಬಾಲ್ಯ ಸ್ನೇಹಿತರು. ಅವರ ಬಗ್ಗೆ ನನಗೆ ಅತೀವ ಅಭಿಮಾನ. ತಾವು ಲಿಂಗಾನಂದ ಸ್ವಾಮಿಗಳ ಹೆಸರನ್ನು ''ಲಿಂಗದೇವ'' ಎಂದು ಮಾಡಿದುದರಿಂದ ಪೂಜ್ಯರ ಬಗ್ಗೆ ತಪ್ಪು ಕಲ್ಪನೆ ಹುಟ್ಟುತ್ತದೆ. ಆದ್ದರಿಂದ ತಾವು ಲಿಂಗದೇವ ವಚನಾಂಕಿತ ವಾಪಸ್ಸು ಪಡೆಯಿರಿ ಎಂದು ಕಳಕಳಿಯ ವಿನಂತಿ.

★ ತಮ್ಮ ಕಳಕಳಿ ಅಭಿನಂದನಾರ್ಹ. ಆದರೆ ಪದಗಳ ಹಿಂದಿರುವ ಅರ್ಥ ತಿಳಿದುಕೊಳ್ಳಿರಿ. ಈಚಲಕರಂಜಿಯ ಮಾಲೂ ತಾಯಿ ತಮ್ಮ ಒಂದು ಭಾಷಣದಲ್ಲಿ ಹೇಳಿದರು. ''ನನ್ನ ಹೆಸರು ಮಾಲೂತಾಯಿ; ಇನ್ನೊಬ್ಬ ಮಹಿಳೆ ಹೆಸರು ಮಾಲತಿ. ಇಬ್ಬರೂ ಒಂದೇ ಹೇಗಾಗುತ್ತೇವೆ ? ಮಾಲೂ ತಾಯಿ ಎಂದರೆ ನಾನು ಓ ಅನ್ನುತ್ತೇನೆ. ಮಾಲತಿ ಎಂದರೆ ಅವರು ಓ ಎನ್ನುತ್ತಾರೆ'' ಎಂದು. ಹಾಗೆ, ಲಿಂಗದೇವ ಎಂಬುದು ಸೃಷ್ಟಿಕರ್ತನ ಹೆಸರು; ಲಿಂಗಾನಂದ ಎಂಬುದು ಗುರುಗಳ ಹೆಸರು. ಯಾರೋ ಮೂರ್ಖರು ಮಾತನಾಡುತ್ತಾರೆ ಎಂದ ಮಾತ್ರಕ್ಕೆ ವಿಚಲಿತರಾದರೆ ಆದೀತೆ ? ಲಿಂಗದ ನಿಜ ಅರ್ಥ ತಿಳಿಯದ ಪಾಶ್ಚಿಮಾತ್ಯರು ''ಲಿಂಗ'' ಎಂದರೆ ಜನನೇಂದ್ರಿಯ, (ಇಷ್ಟ)ಲಿಂಗಪೂಜಕರು ಎಂದರೆ ಜನನೇಂದ್ರಿಯ ಪೂಜಕರೆಂದು ಬರೆದ ಮಾತ್ರಕ್ಕೆ ನಾವು ಇಷ್ಟಲಿಂಗ ಬಿಡಲಾದೀತೆ ? ಲಿಂಗಾಯತ

ಧರ್ಮ ಎಂಬುದನ್ನು ಬಳಸದೆ ಇರಲಾದೀತೆ ? ಪದದ ಬಗ್ಗೆ ಇರುವ ಸರಿಯಾದ ಅರ್ಥ ಮನವರಿಕೆ ಮಾಡಿಕೊಡಬೇಕು ?

ಹೆಸರು ಬೇಡ, ಓರ್ವ ಮಠಾಧಿಕಾರಿ. -ನಿಮ್ಮ ಪ್ರವಚನ, ಪುಸ್ತಕಗಳ ಪ್ರಭಾವದಿಂದ ವಿರಕ್ತ ಮಠದ ಮರಿದೇವರು ಆದ ನಾನು ಅನ್ಯ ದೇವತೆಗಳ ಪೂಜೆ ತೊರೆದು, ಇಷ್ಟಲಿಂಗ ನಿಷ್ಠೆಯನ್ನು ಅಳವಡಿಸಿಕೊಂಡು ಏಕದೇವೋಪಾಸಕ ಮತ್ತು ಏಕಗುರು(ಧರ್ಮಗುರು ಬಸವಣ್ಣ) ಉಪಾಸಕನಾಗಿದ್ದೇನೆ. ಮಠದ ಶ್ರೀಮಂತ ಭಕ್ತರು, ನವಗ್ರಹ, ಗಣಪತಿ, ಲಕ್ಷ್ಮಿ ಪೂಜೆಗಳಿಗೆ ಆಹ್ವಾನಿಸುತ್ತಾರೆ. ಅವುಗಳ ಪೂಜೆ ಮಾಡುವುದಿಲ್ಲವೆಂದರೆ ನಮ್ಮನ್ನು ಬಿಟ್ಟು ಬೇರೆ ಪುರೋಹಿತರನ್ನು ಕರೆದು ಪೂಜೆ ಮಾಡಿಸುತ್ತಾರೆ. ಇದರಿಂದ ನಮ್ಮ ಭಕ್ತರನ್ನು, ಅವರಿಂದ ಬರುವ ಆದಾಯವನ್ನು ಕಳೆದುಕೊಂಡಂತೆ ಆಗುವುದಿಲ್ಲವೆ? ಹೀಗಾಗಿ ನಾನು ದ್ವಂದ್ವದಲ್ಲಿ ಸಿಲುಕಿದ್ದೇನೆ. ನಿಮ್ಮ ಅಭಿಪ್ರಾಯವೇನು?

★ ಇದು **ಹುಚ್ಚುಬಿಡದೆ ಮದುವೆ ಆಗದು, ಮದುವೆ ಆಗದೆ ಹುಚ್ಚು ಬಿಡದು** ಎಂಬ ಪ್ರಸಂಗದಂತಿದೆ. ಗುರುಗಳು ಕಟ್ಟುನಿಟ್ಟಾಗದೆ ಇದ್ದರೆ ಭಕ್ತರು ಸುಧಾರಿಸುವುದಿಲ್ಲ; ಭಕ್ತರು ಸುಧಾರಿಸುವ ತನಕ ತಾವು ತತ್ತ್ವನಿಷ್ಠರಾಗುವುದಿಲ್ಲ ಎಂದರೆ ಸಮಾಜವು ಇನ್ನಷ್ಟು ಕೆಟ್ಟುಹೋಗುತ್ತದೆ. ನಿಮಗೆ ಸೃಷ್ಟಿಕರ್ತ ಲಿಂಗದೇವನ ಒಲುಮೆ, ಧರ್ಮಗುರು ಬಸವಣ್ಣನವರ ಕೃಪೆ ಮುಖ್ಯವೋ ಅಥವಾ ಮೂಢ ಶ್ರೀಮಂತರ ಭಕ್ತಿ, ಅವರು ಕೊಡುವ ಹಣ ಮುಖ್ಯವೋ ಮೊದಲು ನಿರ್ಧಾರವಾಗಬೇಕು. ನಮಗಂತೂ ಮೊದಲಿನ ಎರಡು ಮುಖ್ಯ. ಓರ್ವ ಬಡವನ ಪತ್ನಿ ಇರುತ್ತಾಳೆ ಎಂದುಕೊಳ್ಳೋಣ, ಆಕೆ ತನ್ನ ಪತಿಯ ಪ್ರೀತಿಗೆ ಮಹತ್ವಕೊಡಬೇಕೋ ಅಥವಾ ಬೇರೊಬ್ಬ ಶ್ರೀಮಂತ ಪುರುಷ ಕೊಡಬಹಾದಾದ ಬಂಗಾರ, ಹಣಕ್ಕೆ ಆಸೆ ಮಾಡಬೇಕೊ? ಹಾಗೆ ಗುರುಗಳು ಪಾತಿವ್ರತ್ಯ ಭಕ್ತಿ ಅಳವಡಿಸಿಕೊಂಡರೆ ತತ್ತ್ವನಿಷ್ಠ ಸದ್ಭಕ್ತರು ತಯಾರಾಗಿಯೇ ಆಗುತ್ತಾರೆ; ಆದಾಯ ಬಂದೇ ಬರುತ್ತದೆ. ನಿಮ್ಮ ದೃಢತೆ ನೋಡಿ ಬಹುದೇವತೋ-ಪಾಸಕ, ಮೂಢ ಶ್ರೀಮಂತರೂ ಪುನರ್‌ಚಿಂತನೆ ಮಾಡಿ, ಶರಣ ಮಾರ್ಗಕ್ಕೆ ಬಂದೇ ಬರುತ್ತಾರೆ.

ನಿರ್ಮಲಾ ಮೃತ್ಯುಂಜಯ. ಬೆಂಗಳೂರು. - ಮಕ್ಕಳಿಲ್ಲದ ಕೆಲವು ದಂಪತಿಗಳು ಉದಾರಿಗಳಾಗಿ ದಾನಧರ್ಮ ಪರೋಪಕಾರ ಮಾಡುತ್ತಿದ್ದರೆ, ಮತ್ತೆ ಕೆಲವರು ಕಡುಲೋಭಿಗಳಾಗಿ ಯಾರ್ಯಾರಿಗೂ ಒಂದು ಚಿಕ್ಕಾಸನ್ನು ಕೊಡದೆ ಹಣವನ್ನು ಕೂಡಿಹಾಕಿಕೊಳ್ಳುತ್ತಾರಲ್ಲ. ಅವರ ನಂತರ ತಿನ್ನುವವರು ಯಾರೂ ಇಲ್ಲದಿದ್ದರೂ ಏಕೆ ಹೀಗೆ ಕೂಡಿಹಾಕುವರು ?

★ ಹೃದಯ ಸಂಸ್ಕಾರವಿದ್ದಂತೆ ಅವರ ವರ್ತನೆಗಳು ಇರುತ್ತವೆ. ಯಾರು ದೇವರ ಕೃಪೆಯೇ ನಿಜವಾದ ಸಂಪತ್ತು. ಅದೇ ಎಲ್ಲರನ್ನೂ ರಕ್ಷಣೆ ಮಾಡುವುದು ಎಂದು ನಂಬಿರುತ್ತಾರೋ ಅವರು ದೇವರ ಕೃಪೆ ಪಡೆಯಲು ದಾನ ಧರ್ಮ ಮಾಡುತ್ತಾರೆ. ಯಾರು ದುಡ್ಡೇ ದೇವರು ಅದೇ ತಮ್ಮ ರಕ್ಷಣೆ ಮಾಡುತ್ತದೆ ಎಂದು ನಂಬಿರುತ್ತಾರೋ ಅದನ್ನು ಸಂಪಾದಿಸಲು, ರಕ್ಷಿಸಲು ಹೆಣಗಾಡುತ್ತಾರೆ. ಮೊದಲನೆಯ ವರ್ಗದವರು ಪುಣ್ಯದ ಜೊತೆಗೆ ಜನಾದರವನ್ನು ಗಳಿಸುತ್ತಾರೆ. ಎರಡನೆಯ ವರ್ಗದವರು ಪುಣ್ಯಹೀನತೆಯ ಜೊತೆಗೆ ಜನರ ಪ್ರೀತಿ ಗಳಿಸಿಕೊಳ್ಳದವರಾಗುತ್ತಾರೆ.

ರುದ್ರಗೌಡ ಹೊನಕೇರಿ, ಹುಬ್ಬಳ್ಳಿ, -ಕೆಲವರು ಉದಾರವಾಗಿ ವಾಗ್ದಾನ ಮಾಡಿ, ಎಲ್ಲರ ಎದುರಿಗೆ ಸನ್ಮಾನ ಮಾಡಿಸಿಕೊಳ್ಳುತ್ತಾರೆ. ಆದರೆ ಮಾಡಿದ ವಾಗ್ದಾನ ಪೂರೈಸಬೇಕೆಂಬ ಪ್ರಜ್ಞೆಯೇ ಇಲ್ಲದಂತೆ ಜಾಣ ಮರೆವಿನಿಂದ ವರ್ತಿಸುತ್ತಾರೆ. ಇದಕ್ಕೆ ನಿಮ್ಮ ಪ್ರತಿಕ್ರಿಯೆ ಏನು ?

★ ಪಾಪ! ಅವರಿಗೆಲ್ಲ ಕೊಡಬೇಕೆಂಬ ಆಸೆ ಇರುತ್ತದೆ. ಆದರೆ ಲೋಭ, ಹಣದಾಸೆ ಕೊಡದಂತೆ ತಡೆಯುತ್ತದೆ. ಅವರ ಹಣಕ್ಕೆ ಪುಣ್ಯ ಕಾರ್ಯಕ್ಕೆ ಸಲ್ಲಬೇಕೆಂಬ ಋಣ ಇರದಿದ್ದರೆ ಹೇಗೆ ಸಲ್ಲೀತು.?

ಹೆಸರು ಬೇಡ, ಓರ್ವ ಸಾಧಕ. - ಚಿಕ್ಕ ವಯಸ್ಸಿನಲ್ಲೇ ಪೂಜ್ಯ ಲಿಂಗಾನಂದ ಸ್ವಾಮಿಗಳ ಪ್ರವಚನ ಕೇಳಿ ಮಾರುಹೋದೆ. ಅವರಂತೆ ತ್ಯಾಗಿಯಾಗಿ, ಧರ್ಮ ಪ್ರಚಾರಕನಾಗಲು ನಿರ್ಧರಿಸಿದೆ. ಸೋದರಿಯರ ಮದುವೆ ಮಾಡಿ ಹೋಗು ಎಂದರು. ಅದೆಲ್ಲ ಮಾಡಿದ್ದಾಯಿತು. ವಯಸ್ಸಾದ ತಾಯಿತಂದೆಯರನ್ನು ಬಿಟ್ಟು ಹೇಗೆ ಹೋಗುತ್ತೀಯ ಎಂದು ಹೆತ್ತವರು ಮತ್ತು ಸುತ್ತಲಿನವರು ಈಗ ಅಡ್ಡಿ ಮಾಡುತ್ತಿದ್ದಾರೆ. ನಾನು ಮದುವೆಯಂತೂ ಆಗುವುದಿಲ್ಲ; ಆಗದಿದ್ದರಷ್ಟೆ, ಮನೆಯಲ್ಲಿರು ಎನ್ನುತ್ತಾರೆ ಹೆತ್ತವರು. ನನಗೆ ಪೂರ್ಣ ತ್ಯಾಗಿಯಾಗಿ ಧರ್ಮಪ್ರಚಾರ ಮಾಡಲು ಇಷ್ಟ. ಧರ್ಮ ಸಂಕಟದಲ್ಲಿದ್ದೇನೆ. ಏನು ಮಾಡಲಿ ?

★ ವ್ಯಕ್ತಿಯ ಆಯುಷ್ಯ, ದೈಹಿಕ ಶಕ್ತಿ ದಿನೇ ದಿನೇ ಕ್ಷೀಣಿಸುತ್ತದೆ. ಅತ್ಯುತ್ತಮವಾಗಿ ಕಾರ್ಯನಿರ್ವಹಿಸಬಲ್ಲ ದೈಹಿಕ ಶಕ್ತಿ 20ನೆಯ ವಯಸ್ಸಿನಿಂದ 50ರವರೆಗೆ ಇರುತ್ತದೆ. ನಾನು ಹುಟ್ಟಿದ್ದು 1946. ಸನ್ಯಾಸ ಪಡೆದುದು 1966. ಇನ್ನೂ ಮಾಡಬೇಕಾದ ಕೆಲಸದ ಅಗಾಧತೆ ನೆನೆಸಿಕೊಂಡರೆ ಇನ್ನೂ ಮೊದಲೇ ಸನ್ಯಾಸಿಯಾಗಬಾರದಿತ್ತೆ ಎನಿಸುತ್ತದೆ. ಮನೆಯಲ್ಲೆ ಕುಳಿತುಕೊಂಡು ಧರ್ಮ ಸಂಕಟದಲ್ಲಿ ಆಯುಷ್ಯವನ್ನು ವ್ಯರ್ಥ ಮಾಡಬಾರದು. ಈ ಸಂಸಾರ ಎನ್ನುವುದು ಅಲೆಗಳಿಂದ ಕೂಡಿದ ಸಮುದ್ರದಂತೆ. ಇದು ದಾಟಿತು ಎನ್ನುವುದರಲ್ಲಿ ಇನ್ನೊಂದು ಅಲೆ ಮೇಲೆ ಎದ್ದಿರುತ್ತದೆ. ಬುದ್ಧನಂತೆ, ಬಸವಣ್ಣನವರಂತೆ, ಅಕ್ಕನಂತೆ ದೃಢ (ಕಟು) ನಿರ್ಧಾರ ತೆಗೆದುಕೊಂಡು ಮುನ್ನಡೆಯದಿದ್ದರೆ ಅಮೂಲ್ಯವಾದ ಕ್ಷಣಗಳು ವ್ಯರ್ಥವಾಗಿ ಬಿಡುತ್ತವೆ. ವೈರಾಗ್ಯದಲ್ಲಿ ಆಸಕ್ತಿ ಇರುವ ಸಾಧಕರು ಲಿಂಗದೇವನಲ್ಲಿ, ಧರ್ಮಗುರು ಬಸವಣ್ಣನವರಲ್ಲಿ ಪ್ರಾರ್ಥಿಸುತ್ತ ಪೂರ್ವಾಶ್ರಮದ ಬಂಧುಗಳಿಗೂ ಒಳ್ಳಿತಾಗಲೆಂದು ಬಯಸುತ್ತಾ ಹೋದರೆ ಅವರ ಸಮಸ್ಯೆಗಳಿಗೂ ಪರಿಹಾರ ತಾನಾಗಿಯೇ ಸಿಗುತ್ತದೆ. ದೇವನಿಗಾಗಿ ವ್ಯಯಿಸಬೇಕಾದ ಸಮಯವನ್ನು ಜಾಗೃತಗೊಂಡ ಸಾಧಕಜೀವಿ ಪೂರ್ವಾಶ್ರಮದವರಿಗಾಗಿ ಅಪವ್ಯಯ ಮಾಡುತ್ತ ಹೋದರೆ ಧೇವರ ಕೃಪೆ, ಜೀವನೋತ್ಸಾಹ ಕಡಿಮೆಯಾಗುತ್ತ ಹೋಗುತ್ತದೆ ಎಂಬ ಅರಿವಿರಲಿ.

ಒಂದು ವಿಶೇಷ ಪ್ರಶ್ನೋತ್ತರ :

ಎಸ್.ಜಿ. ಬಸವರಾಜು, ಎಸ್ ಕೊಪ್ಪಲು. - ಮೇ ತಿಂಗಳ 24ಮತ್ತು 25ರಂದು ನಮ್ಮ ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೋಕಿನ ಸಿಂಗಟಗೆರೆ ಗ್ರಾಮದಲ್ಲಿ ದೇವಾಂಗ ಸಮಾಜದವರು ದೇವರ ದಾಸಿಮಯ್ಯನವರ ಸಹಸ್ರಮಾನೋತ್ಸವ ಆಚರಿಸಿದರು. ಆಗ ಓರ್ವ ಸಾಹಿತಿಗಳು ದೇವರ ದಾಸಿಮಯ್ಯ, ಜೇಡರ ದಾಸಿಮಯ್ಯ ಒಂದೇ ಎಂದು, ಆತನೇ ಮೊದಲ ವಚನಕಾರ. ಬಸವಣ್ಣನವರಿಗೆ ವಚನ ರಚನೆಗೆ ಪ್ರೇರಕ ಎಂದೂ ಹೇಳಿದರು. ಹೆಸರು, ಕಾಲ ಮತ್ತು ವಚನಗಳ ಬಗ್ಗೆ ಗೊಂದಲ ಹುಟ್ಟಿಸಿದರು.

★ ದೇವರ ದಾಸಿಮಯ್ಯ, ಜೇಡರ ದಾಸಿಮಯ್ಯ, ಶಂಕರ ದಾಸಿಮಯ್ಯ ಹೀಗೆ ಅನೇಕರು ಬರುತ್ತಾರೆ. ದೇವರ ದಾಸಿಮಯ್ಯ ದೇವಾಂಗ ಕುಲದವನು, ರೇಷ್ಮೆ ವಸ್ತ್ರ ನೇಯುವುದು ಅವರ ಕುಲ ಕಸುಬು. ಜೇಡರ ದಾಸಿಮಯ್ಯ ಹತ್ತಿ ಬಟ್ಟೆಯನ್ನು ನೇಯುವ ಕುಲಕಸುಬಿನವನು. ದೇವರ ದಾಸಿಮಯ್ಯ ಬಸವ ಪೂರ್ವದವನು, ಜೇಡರ ದಾಸಿಮಯ್ಯ ಧರ್ಮಪಿತ ಬಸವಣ್ಣನವರ ಸಮಕಾಲೀನ ಶರಣನು.

2. ದೇವರ ದಾಸಿಮಯ್ಯ ಮತ್ತು ಕೊಂಡಗುಳಿ ಕೇಶಿರಾಜನನ್ನು ಆದ್ಯರು ಎಂದು ಒತ್ತಿ ಒತ್ತಿ ಸಂಬೋಧಿಸಿದರು. ಆದ್ಯರು, ವೇಧ್ಯರು, ಸಾಧ್ಯರು ಎಂದರೆ ಯಾರು, ಪುರಾತನರು ಮತ್ತು ಸಮಕಾಲೀನರು ಎಂದರೆ ಯಾರು ?

★ ದೇವರ ದಾಸಿಮಯ್ಯನವರು ರಾಜಾ ಜಯಸಿಂಹನ ಪತ್ನಿ ಸುಗ್ಗಲೆಗೆ (ಶೈವ) ದೀಕ್ಷೆ

ನೀಡಿದ್ದಲ್ಲದೆ ರಾಜನ ಆಸ್ಥಾನದಲ್ಲಿ ಪವಾಡವನ್ನು ಸಹ ಮೆರೆದು, ಜೈನನಾಗಿದ್ದ ಜಯಸಿಂಹನಿಗೆ ಶಿವಲಿಂಗವನ್ನಿತ್ತು ಶೈವವನ್ನಾಗಿ ಮಾಡಿದರು. ಈ ಸಂದರ್ಭಗಳನ್ನು ನೋಡಿದಾಗ ನಮಗೆ ಖಚಿತವಾಗುವುದೇನೆಂದರೆ ಜಯಸಿಂಹ ಜೈನ; ಆತನ ಪತ್ನಿ ಸುಗ್ಗಲೆ ಶಿವಭಕ್ತಳು. ಲಿಂಗಾಯತ ಧರ್ಮದ ಪ್ರಕಾರ ಪತಿ-ಪತ್ನಿ ಉಭಯತರೂ ಒಂದೇ ಧಾರ್ಮಿಕ ಪಥದಲ್ಲಿ ಇರಬೇಕು. ಒಂದು ವೇಳೆ ಲಿಂಗದೀಕ್ಷೆ ಪಡೆಯುವುದಾದರೆ ಪತ್ನಿಯೇ ಇರಲಿ ಪತಿಯೇ ಇರಲಿ ಒಬ್ಬರು ಪಡೆಯದಿದ್ದರೆ ಅವರನ್ನು ಭವಿ ಎಂದು ತ್ಯಜಿಸಿ ತಾವು ಪ್ರತ್ಯೇಕಗೊಳ್ಳುತ್ತಿದ್ದರು. ಇದು ಆರಂಭದ ದಿನಗಳಲ್ಲಿ ಕಟ್ಟುನಿಟ್ಟಾಗಿ ಆಚರಿಸಲ್ಪಡುತ್ತಿತ್ತು. ಆದರೆ ಇನ್ನಿತರ ಶೈವರಲ್ಲಿ ಒಬ್ಬೊಬ್ಬರು ವೈಯಕ್ತಿಕವಾಗಿ (ಈಗಿನ ಹಿಂದುಗಳಂತೆ) ತಮಗೆ ಬೇಕೆನಿಸಿದ ದೀಕ್ಷೆ ಪಡೆದು ಒಟ್ಟಾಗಿಯೇ ವಾಸಿಸುತ್ತಿದ್ದರು.

ದೀಕ್ಷೆ ಕೊಟ್ಟ ಗುರು ಲಿಂಗಾಯತ ಧರ್ಮದಲ್ಲಿ ಇಷ್ಟಲಿಂಗವನ್ನು ಕೊಡುತ್ತಾನೆಯೇ ವಿನಾ ಸ್ಥಾವರಲಿಂಗದ ಸಣ್ಣರೂಪವಾದ ಶಿವಲಿಂಗವನ್ನಲ್ಲ. ದೇವರ ದಾಸಿಮಯ್ಯ ಶಿವಭಕ್ತನೇ ವಿನಾ ಲಿಂಗಾಯತ ಧರ್ಮಾನುಯಾಯಿಯಲ್ಲ, ಆದ್ದರಿಂದಲೇ ಶಿವಲಿಂಗವನ್ನು ಶೈವದೀಕ್ಷೆ ನೀಡಿ ಆತ ಕೊಟ್ಟುದು.

1. ಜೇಡರ ದಾಸಿಮಯ್ಯ ಧರ್ಮಪಿತ ಬಸವಣ್ಣನವರ ಸಮಕಾಲೀನ ; ಈತನೇ ವಚನಕಾರ.

ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ ಕಷ್ಟತನದ ಹೊರೆಯ ಹೊರಿಸದಿರಯ್ಯಾ
ಕಕ್ಕಯ್ಯನೊಕ್ಕುದನಿಕ್ಕ ನೋಡಯ್ಯಾ, ದಾಸಯ್ಯ ★ ಶಿವದಾನವನೆರೆಯ ನೋಡಯ್ಯಾ
ಮನ್ನಣೆಯ ಚನ್ನಯ್ಯನೆನ್ನುವ ಮನ್ನಿಸ
ಉನ್ನತ ಮಹಿಮ ಲಿಂಗದೇವಾ, ಶಿವಧೋ ! ಶಿವಧೋ !! - ಬ.ವ.ದೀ 345

ಈ ವಚನದಲ್ಲಿ ಧರ್ಮಪಿತರು "ದಾಸಯ್ಯ ಶಿವದಾನವನೆರೆಯ ನೋಡಯ್ಯ" ಎನ್ನಬೇಕಾದರೆ ಮಜ್ಜಿಗೆಯನ್ನು ನೀಡುವ ವ್ಯಕ್ತಿ ಸಮಕಾಲೀನನಾಗಿರಬೇಕೆಂದು ತಾನೇ ಅರ್ಥ ?

2. ಜಗನ್ಮಾತಾ ಅಕ್ಕಮಹಾದೇವಿ ಅನುಭವ ಮಂಟಪ ಪ್ರವೇಶಿಸಿದಾಗ ಶರಣರನ್ನು ವಂದಿಸುವಳು. ಆಗ ಹೇಳುವ ಹೆಸರುಗಳಲ್ಲಿ ಜೇಡರ ದಾಸಿಮಯ್ಯನವರು ಬರುತ್ತಾರೆ.

ಅನಿಮಿಷನಲ್ಲಮಯ್ಯ, ಮರುಳು ಶಂಕರಯ್ಯ, ಕೋಲಶಾಂತಯ್ಯ
ಮಾದಾರ ಧೂಳಯ್ಯ, ಮಿಂಡ ಮಲ್ಲಿನಾಥ, ಚನ್ನಬಸವಣ್ಣ
ಚೇರಮರಾಯ, ತೆಲುಗ ಜೊಮ್ಮಣ್ಣ, ಕಿನ್ನರಯ್ಯ
ಹಲಾಯುಧ, ದಾಸಿಮಯ್ಯ, ಭಂಡಾರಿ ಬಸವರಾಜ ಮುಖ್ಯವಾದ
ಚನ್ನಮಲ್ಲಿಕಾರ್ಜುನನ ಶರಣರಿಗೆ ನಮೋ ನಮೋ ಎಂಬೆನು. -ಮ.ವ. 181.

ಶರಣರ ಈ ಗುಂಪಿಗೆ ಭಂಡಾರಿ ಬಸವರಾಜರೇ ಮುಖ್ಯವಾದವರು (ಬಸವಾ-ಆದಿ ಪ್ರಮಥ) ಎಂಬುದನ್ನು ಮಾರ್ಮಿಕವಾಗಿ ಅಕ್ಕ ಹೇಳಿದ್ದಾಳೆ.

3. ಅತ್ಯಂತ ಮಹತ್ವಪೂರ್ಣವಾದ ದಾಖಲೆಯಾಗುವ ಒಂದು ವಚನವಿದೆ ;

ಕೀಳು ಡೋಹರ ಕಕ್ಕ, ಕೀಳು ಮಾದರ ಚೆನ್ನ, ಕೀಳು ಓಹಿಲಯ್ಯ ಎನ್ನಬಹುದೆ ?
ಕೀಳಿಂಗಲ್ಲದೆ ಹಯನ ಕರೆಯದು ಕಾಣಾ ರಾಮನಾಥ.

ಡೋಹರ ಕಕ್ಕಯ್ಯನವರು ಶ್ರೀ ಗುರು ಬಸವಣ್ಣನವರಿಂದಲೇ ನೇರವಾಗಿ ದೀಕ್ಷಾನುಗ್ರಹ ಪಡೆದು ಲಿಂಗಧಾರಿಗಳಾದವರು. ಅಂದಾಗ ಅವರ ಹೆಸರನ್ನು ದಾಸಿಮಯ್ಯನವರು ಪ್ರಸ್ತಾಪ ಮಾಡಬೇಕಾದರೆ ಸಮಕಾಲೀನರೋ ನಂತರದವರೋ ಆಗಿರಬೇಕಷ್ಟೆ. ಜೇಡರ ದಾಸಿಮಯ್ಯನವರು ಮೊದಲು ಶಿವದಾಸರಾಗಿದ್ದರು. ನಂತರ ಶರಣಮಾರ್ಗಿಗಳಾಗಿದ್ದಾರೆ. ದೇವರ ದಾಸಿಮಯ್ಯನವರು

★ ಶಿವದಾನ = ಮಜ್ಜಿಗೆ

ಆರಂಭದಿಂದ ಕಡೆಯ ತನಕವೂ ಶೈವಮಾರ್ಗಿಗಳಾಗಿಯೇ ಉಳಿದಿದ್ದಾರೆ.

ಪುರಾತನರು-ಪುರಾತರು

ವಚನ ವಾಙ್ಮಯ ಓದುವಾಗ ಈ ಎರಡೂ ಪದಗಳನ್ನು ಎಚ್ಚರಿಕೆಯಿಂದ ಗಮನಿಸಬೇಕು. ನಮಗೇ ಈ ಸೂಕ್ಷ್ಮ 'ನ'ದ ವ್ಯತ್ಯಾಸ ತಿಳಿಯಲು ಎಷ್ಟೋ ವರ್ಷ ಹಿಡಿದವು.

ಪುರಾತನರು= ತಮಿಳು ನಾಡಿನಲ್ಲಿ ಆಗಿ ಹೋಗಿರುವ 63 ಜನ ಶಿವಭಕ್ತರು, ಹಿಂದಿನವರು.

ಪುರಾತರು= ಧರ್ಮಪಿತ ಬಸವಣ್ಣನವರ ಸಮಕಾಲೀನರು, ದೊಡ್ಡವರು

ಭಕ್ತಿಯಿಲ್ಲದ ಬಡವ ನಾನಯ್ಯ , ಕಕ್ಕಯ್ಯನ ಮನೆಯಲು ಬೇಡಿದೆ
ಚನ್ನಯ್ಯನ ಮನೆಯಲು ಬೇಡಿದೆ. ದಾಸಯ್ಯನ ಮನೆಯಲು ಬೇಡಿದೆ
ಎಲ್ಲಾ ಪುರಾತರು ನೆರೆದು ಭಕ್ತಿಭಿಕ್ಷವನ್ನಿಕ್ಕಿದಡೆ ಎನ್ನ ಪಾತ್ರ ತುಂಬಿತ್ತು, ಲಿಂಗದೇವಾ. -ಬ.ವ.ದೀ 351

63 ಜನ ಪುರಾತನರು ಎಂದರೆ ಐತಿಹಾಸಿಕವಾಗಿ ಹಿಂದಿನವರು ; ಪುರಾತರು ಎಂದರೆ ಸಮಕಾಲೀನರು, ಜ್ಞಾನ ದೃಷ್ಟಿಯಿಂದ ದೊಡ್ಡವರು ಎಂದರ್ಥ.

ಆದ್ಯರು, ವೇದ್ಯರು, ಸಾಧ್ಯರು : ಸಿದ್ಧಬಸವಿದೇವ ಎಂಬ ವ್ಯಾಖ್ಯಾನಕಾರ ಧರ್ಮಪಿತ ಬಸವಣ್ಣನವರ ವಚನಗಳಿಗೆ ಶಾಸ್ತ್ರೀಯ ವ್ಯಾಖ್ಯಾನ ನೀಡಿದ್ದು ಈ ರೀತಿ ವರ್ಗೀಕರಿಸಿದ್ದಾನೆ.

ಆದ್ಯರೆಂದರೆ - ಲಿಂಗಾಯತ ಧರ್ಮದ ಆದ್ಯರಾದ ಬಸವಣ್ಣನವರು ಮತ್ತು ಅವರ ಸಮಕಾಲೀನ ಗಣನಾಯಕ ಪ್ರಮುಖರು. ವೇದ್ಯರು - ಆದ್ಯರು ಬೋಧಿಸಿದ ಧರ್ಮವನ್ನು ಅಳವಡಿಸಿಕೊಂಡ ವಿಶೇಷ ವ್ಯಕ್ತಿಗಳು. ಸಾಧ್ಯರು - ಎಂದರೆ ಅಂದಿನಿಂದ ಇಂದಿನವರೆಗೆ ಆಗಿ ಹೋಗಿರುವ ಸಾಮಾನ್ಯ ಅನುಯಾಯಿಗಳು.

ಅಂದು ಧರ್ಮಗುರು ಬಸವಣ್ಣನವರು ಲಿಂಗದೇವನ ಮಹಿಮೆ ಮೆರೆಸಿ, ಅವನ ಕುರುಹಾದ ಇಷ್ಟಲಿಂಗ ನೀಡಿ ಎಲ್ಲ ಜಾತಿ, ಕಾಯಕಗಳವರನ್ನು ಒಂದು ಮಾಡಿ ಜಾತಿವರ್ಣವರ್ಗರಹಿತ ಧರ್ಮ ಸಹಿತ ಶರಣ ಸಮಾಜವನ್ನು ನಿರ್ಮಾಣ ಮಾಡಿದರು. ಇಂದು ಒಂದು ವಿಲಕ್ಷಣ ಒಡೆದು ಆಳುವ ನೀತಿ ಪ್ರಾರಂಭವಾಗಿದೆ. ಸಮಾಜವನ್ನು ತತ್ವದ ತಳಹದಿಯ ಮೇಲೆ ಬೆಸೆಯುವ ಬದಲು ಜಾತಿ-ಉಪಜಾತಿಗಳ ಆಧಾರದ ಮೇಲೆ ಒಡೆಯುವುದು. ಈ ಕೆಲಸದಲ್ಲಿ ನಿರತರಾಗಿರುವ ತ್ರಿಮೂರ್ತಿಗಳೆಂದರೆ- ಜಾತಿ ಸಂಘಟನೆ ಮಾಡುವ ಸ್ವಾಮಿಗಳು, ಆಯಾ ಜಾತಿಯ ರಾಜಕಾರಣಿಗಳು ಮತ್ತು ವ್ಯಾಪಾರಸ್ಥರು. ಇಂಥ ಸಂಕುಚಿತ ಸಂಘಟನೆಯಿಂದ ಸ್ವಾಮಿಗಳು, ರಾಜಕಾರಣಿ, ವ್ಯಾಪಾರ ಮನೋವೃತ್ತಿಯ ಮುಂದಾಳುಗಳಿಗೆ ತುಸು ರಾಜಕೀಯ ಲಾಭ, ಆರ್ಥಿಕ ಲಾಭ ಆದೀತೇ ಹೊರತು ಜನ ಸಮುದಾಯಕ್ಕಲ್ಲ, ಧರ್ಮಕ್ಕಲ್ಲ. ಈ ಮುಂದಾಳುಗಳ (ಕು)ತಂತ್ರವನ್ನರಿಯದೆ ಜನರು ಮುಗ್ಧ ಭಾವದಿಂದ ಹಣ ಕೊಟ್ಟು ಪ್ರೋತ್ಸಾಹಿಸುವರು.

ಈ ಭೇದಕರು ಧರ್ಮಗುರು ಬಸವಣ್ಣನವರನ್ನು ಗೌರವಿಸಲು ಬಯಸರು. ಆದ್ದರಿಂದ ಬಗೆ ಬಗೆಯ ಕೃತಕ ಕಥೆಗಳನ್ನು ಸೃಷ್ಟಿಸಿ ತಾವು ಬಸವಪೂರ್ವದವರೆಂದು ಸಾಧಿಸಲು ಹೋರಾಡುತ್ತಿರುವರು. ಇದಕ್ಕೆ ಸಾಹಿತಿಗಳ ಕುಮ್ಮಕ್ಕು ಬೇರೆ. ಇವರು ಎಷ್ಟೇ ಕಥೆ ಕಟ್ಟಿದರೂ ಕಾಗೆಯನ್ನು ಹಂಸೆ ಮಾಡಲಾರರು. ಹಂಸೆಯನ್ನು ಕಾಗೆಯನ್ನಾಗಿ ಮಾಡಲಾರರು. ಸತ್ಯ ಸತ್ಯವೇ ; ಅದು ಫಿನಿಕ್ಸ್ ಪಕ್ಷಿಯಂತೆ. 800 ವರ್ಷ ಕಾಲ ಬಗೆ ಬಗೆಯ ಹುನ್ನಾರ ಮಾಡಿ ಆದಿ ಪ್ರಮಥ ಬಸವಣ್ಣನವರ ಪ್ರಭಾವವನ್ನು ನಾಶ ಮಾಡಲು ಯತ್ನಿಸಿದರು. ಆದರೆ ಅದು ಬೂದಿಯಿಂದ ಪುನಃ ಎದ್ದು ಬರುವ ಫಿನಿಕ್ಸ್ ಪಕ್ಷಿಯಂತೆ, ಪುನಃ ಬೆಳಗುತ್ತಿದೆ.

ಬಸವಣ್ಣನವರು ಹುಟ್ಟು ಲಿಂಗಾಯತರು, ಅವರಿಗೂ ಪೂರ್ವದಲ್ಲೆ ಲಿಂಗಾಯತ ಧರ್ಮವಿತ್ತು ಎಂದು ಹೊಸದೊಂದು ಕೃತಕವಾದವನ್ನು ಓರ್ವ ಸಾಯಿತಿ ಮುಂದಿಟ್ಟಿದ್ದಾರೆ. ಆದಕ್ಕವರು

ಸುತ್ತೂರು ಮಠದ ಕರ್ತೃಗಳ ಸಹಸ್ರ ವರ್ಷೋತ್ಸವ ಆಚರಿಸಲಾಯಿತು. ಎಂಬುದನ್ನು ವಾದವಾಗಿ ಮಂಡಿಸಿದ್ದಾರೆ. ಓರ್ವ ಯುವತಿ ಒಂದು ವಿಶಿಷ್ಟ ದಿನಾಂಕದಂದು ಮದುವೆಯಾಗಿ ಗೃಹಿಣಿಯಾಗುತ್ತಾಳೆ. ನಿಜ. ಆದರೆ '**ಆಕೆ ಮದುವೆಯಾದ ದಿನ ಹುಟ್ಟಲಿಲ್ಲ. ಮೊದಲೇ ಹುಟ್ಟಿದ್ದಳು.**' ಎನ್ನುವುದು ಹಾಸ್ಯಾಸ್ಪದ ವಿಚಾರವಾಗದೆ ? ಅಹುದು ಮೊದಲೇ ಹುಟ್ಟಿದ್ದಳು. ಒಂದು ದಿನ ಮದುವೆಯಾದಳು. ಆಗ ಆಕೆಯ ಅಡ್ಡ ಹೆಸರು ಬದಲಾಯಿತು. ಬಸವ ಪೂರ್ವದಲ್ಲಿ ಲಾಕುಲೀಶ, ಪಾಶುಪತ, ಕಾಳಾಮುಖ ಮುಂತಾದ ಅನೇಕ ಶೈವ ಮಠಗಳಿದ್ದವು. ಇವರು ಕಾಲಾನಂತರದಲ್ಲಿ ಲಿಂಗಧಾರಣೆ ಮಾಡಿಕೊಂಡು ಬಸವ ಪ್ರಣೀತ ಲಿಂಗಾಯತ ಧರ್ಮವನ್ನು ಸೇರಿದರು. ಅದೇ ರೀತಿ ಕಾಳಾಮುಖ ಸಂಪ್ರದಾಯದ ಸುತ್ತೂರು ಮಠದ ಸ್ವಾಮಿಗಳು ಕಲ್ಯಾಣ ಕ್ರಾಂತಿಯ ನಂತರ ಮೈಸೂರು ಭಾಗಕ್ಕೆ ಆಗಮಿಸಿದ ಶರಣರುಗಳ ಆಚಾರ-ವಿಚಾರಗಳಿಂದ ಪ್ರಭಾವಿತರಾಗಿ ಲಿಂಗಾಯತ ಧರ್ಮೀಯರಾದರು. ಘನಲಿಂಗದೇವರು ಎಂಬ ಸುತ್ತೂರು ಮಠದ ಓರ್ವ ದಾರ್ಶನಿಕ ಸ್ವಾಮಿಗಳು ತಾವು ತೋಂಟದ ಸಿದ್ದಲಿಂಗೇಶ್ವರರ ಕರುಣೆಯ ಕಂದರೆಂದು ಹೇಳಿಕೊಳ್ಳುವುದಲ್ಲದೆ, ಬಸವಾದಿ ಪ್ರಮಥರ ಪರಂಪರೆಯ ಶರಣರನ್ನು ಮಾತ್ರ ಕೊಂಡಾಡಿದ್ದಾರೆ. ಆದ್ದರಿಂದ ಸಾಹಿತಿಗಳು, ವ್ಯಾಪಾರಿಬುದ್ಧಿ ಮುಖಂಡರು, ರಾಜಕಾರಣಿಗಳು, ಸ್ವಾಮಿಗಳು ದುರುದ್ದೇಶದಿಂದ ಏನೇ ಹೇಳಿಕೊಳ್ಳಲಿ, ಬರೆಸಲಿ ಪ್ರಾಜ್ಞ ಲಿಂಗಾಯತರು ಅಖಂಡ ಶರಣ ಸಮಾಜ ಕಟ್ಟುವುದಕ್ಕೆ ಸನ್ನದ್ಧರಾಗಬೇಕಾಗಿದೆ.

ಸುಬ್ಬಣ್ಣ, ನಿವೃತ್ತ ಕೆ.ಇ.ಬಿ. ಅಧಿಕಾರಿ, ಬೆಂಗಳೂರು. -ಬಸವಣ್ಣನವರ ವಚನಗಳ ವಚನಾಂಕಿತವನ್ನು ಲಿಂಗದೇವ ಎಂದು ಬದಲಾಯಿಸಿ ಅನೇಕರ ನಿಂದನೆ, ಬೈಗುಳಕ್ಕೆ ಪಾತ್ರರಾಗಿದ್ದೀರಿ. ನಿಮ್ಮನ್ನು ಪೂಜಿಸುತ್ತಿದ್ದವರೇ ಈಗ ನಿಂದಿಸುತ್ತಿದ್ದಾರೆ. ಮಠಾಧಿಕಾರಿಗಳೂ ವಿರೋಧಿಸುತ್ತಿದ್ದಾರೆ. ಆದರೂ ನಿಮ್ಮ ಹಟ ಏಕೆ ಬಿಡುತ್ತಿಲ್ಲ ?

★ ಶರಣರ ಸಂಗವಿಲ್ಲ, ಚಿಂತನಶೀಲತೆ ಇಲ್ಲ- ಇಂಥವರಿಗೆ ಲಿಂಗದೇವ ಪದದ ಮಹತ್ವ ಅರ್ಥವಾಗುವುದೇ ? ನಮ್ಮನ್ನು ನಿಂದಿಸಿದರೂ ಚಿಂತೆಯಿಲ್ಲ ; ಧರ್ಮಗುರು ಬಸವಣ್ಣನವರ ದೇವರ ಪರಿಕಲ್ಪನೆಯನ್ನು, ಲಿಂಗದೇವನ ಮಹತ್ವವನ್ನು ನಮ್ಮ ಜನರು ತಿಳಿದರೆ ಸಾಕು. ಅಂದು ಬಸವಣ್ಣನವರು ಮಾಡಿದ ವರ್ಣಾಂತರ ವಿವಾಹದಿಂದ ಧರ್ಮಪಿತರು, ಅವರ ಸಮಕಾಲೀನರು ಎಂಥಾ ಸಂಕಷ್ಟಕ್ಕೆ ಈಡಾದರು. ಆದರೆ ಇಂದು 8 ಶತಮಾನಗಳ ಬಳಿಕ ಅದು ಸ್ತುತ್ಯ ಕಾರ್ಯ ಎಂದು ಜಗತ್ತು ಕೊಂಡಾಡುತ್ತಿಲ್ಲವೆ ? ಒಂದು ಸತ್ಯವು ಆವಿಷ್ಕಾರಗೊಂಡು ಸ್ಥಾಪನೆಯಾಗುವುದು ಸಾಮಾನ್ಯ ಸಂಗತಿಯಲ್ಲ. ಸತ್ಯ ಸ್ಥಾಪನೆಯ ದಾರಿಯಲ್ಲಿ ಇನ್ನಿತರ ಮಹಾಪುರುಷರು ಪಟ್ಟ ಕಷ್ಟದ ಮುಂದೆ, ಬೈಗುಳದ ಮುಂದೆ ನಮ್ಮದು ಎಷ್ಟೂ ಇಲ್ಲ. ಏಕೆಂದರೆ ನಮಗೆ ಪ್ರಜಾಪ್ರಭುತ್ವವಿದೆ. ಸಂವಿಧಾನದ ಹಕ್ಕು ಇವೆ. ಇನ್ನು ಮಠಾಧಿಪತಿಗಳ ವಿರೋಧ ? ಅದು ಎಂದಿಲ್ಲ ? ಪ್ರವಚನ ಮಾಡಿದರೆ ಧರ್ಮಜಾಗೃತಿಯಾಗುತ್ತೆ ಎಂದು ಅದನ್ನು ಅವರು ವಿರೋಧಿಸುತ್ತಿದ್ದವರೇ ! ಹಾಗಂತ ಪ್ರವಚನ ಹೇಳುವುದನ್ನು ಬಿಟ್ಟಿದ್ದರೆ ಇಷ್ಟು ಕಾರ್ಯಸಾಧನೆಯಾಗುತ್ತಿತ್ತೆ ? ಸತ್ಯ ಸಂಪ್ರದಾಯಗಳ ಸಂಘರ್ಷ ಎಂದೆಂದೂ ಇದ್ದುದೇ, ಇರುವುದೆ ! ★

ಅಪ್ಪ ಬಸವಣ್ಣನವರಿಗೆ ಭಕ್ತಿನಮನ

ಬರಡಾದ ಬಾಳಿಗೆ ಜೀವಜಲವಾಗಿ
ಸಮತೆ-ಸಹೋದರತ್ವಗಳ ದಿವ್ಯ ಮಂತ್ರವ ಸಾರಿ
ವಚನ ಜ್ಯೋತಿಯ ಬೆಳಗಿನಿಂದ ಜಗದ ಕ-
ಣ್ಣ ತೆರೆಸಿದ ಅಪ್ಪ ಬಸವಣ್ಣಂಗಿದೋ ಭಕ್ತಿ ಪೂರ್ವಕ ನಮನ.

-ಶರಣ. ಸುಜ್ಞಾನಪ್ರಭು, ತುಮಕೂರು

ಮೇ-ಜೂನ್ ತಿಂಗಳಲ್ಲಿ ಧನ ದಾಸೋಹ ಮಾಡಿದ ಶರಣ ಬಂಧುಗಳು

ಕೂಡಲ ಸಂಗಮದ ಬಸವ ಧರ್ಮ ಪೀಠದ ಕಟ್ಟಡ ನಿಧಿಗೆ

ಶರಣರುಗಳಾದ

1. ಸೂರ್ಯಕಾಂತ ಶಿವರಾಯಪ್ಪ ಶೀಲವಂತ, ಹುಬ್ಬಳ್ಳಿ	1,00,000=00
2. ಸಂಗಯ್ಯ ಕೂಡ್ಲಯ್ಯ ಗಣಾಚಾರಿ, ಹುಬ್ಬಳ್ಳಿ (ಡಬ್ಬಲ್ ರೂಂ)	71,000=00
3. ಲಲಿತಮ್ಮ ಶಿವಾನಂದಪ್ಪ ಶೆಟ್ಟರ್, ಹಿರೇಕೆರೂರು (ಸಿಂಗಲ್ ರೂಂ)	51,000=00
4. ಟಿ.ಹೆಚ್. ಲೋಕೇಶ್, ತಿಂಡ್ಲು	6001=00

ಜಗನ್ಮಾತಾ ಅಕ್ಕಮಹಾದೇವಿ ಆಶ್ರಮದಲ್ಲಿ ಬಸವ ಮಂಟಪ ನಿರ್ಮಾಣಕ್ಕೆ

ಶರಣರುಗಳಾದ:

ಬಸವರಾಜ ಚನ್ನಬಸಪ್ಪ ಕಲ್ಯಾಣಶೆಟ್ಟರು, ಹುಬ್ಬಳ್ಳಿ	15,001=00
ಪಂಚಪ್ಪ ಮಲ್ಲೇಶಪ್ಪ ಬೆಲ್ಲದ, ಬೈಲಹೊಂಗಲ	6001=00
ಜಗದೀಶ. ಬಿ. ಯಾದವಾಡ, ಧಾರವಾಡ	5001=00
ಗೌರಾದೇವಿ ಲಿಂಗಪ್ಪ ದೊಡ್ಡಮನಿ, ಧಾರವಾಡ	5001=00
ಸಿದ್ದಮ್ಮ ಶಿವಪುತ್ರಪ್ಪ ಸವದಿ, ಧಾರವಾಡ	5001=00
ಪರಮೇಶ್ ಕಾರಗೇರ್, ಧಾರವಾಡ	25 ಚೀಲ ಸಿಮೆಂಟ್
ಬಸವರಾಜ್ ಗುರಿಕಾರ, ಧಾರವಾಡ	5001=00
ರುದ್ರಮ್ಮ ಮಡಿವಾಳಪ್ಪ ಬೈರಣ್ಣನವರು, ನರೇಂದ್ರ	5001=00
ನಿರ್ಮಲಾ ಭೀಮರಾಯಪ್ಪ ಬಾಗೋಡಿ, ಧಾರವಾಡ	5001=00
ಗಂಗಾಧರ ಚನ್ನಪ್ಪ ನಾಶೀಪುಡಿ, ಧಾರವಾಡ	5001=00
ಬಸಯ್ಯ ಸಿದ್ಧಲಿಂಗಯ್ಯ ಗಣಾಚಾರಿ, ಧಾರವಾಡ	5001=00
ಬಸವರಾಜ. ಶಿ. ಮಡಿವಾಳರ, ಬೈಲಹೊಂಗಲ	2001=00
ರುದ್ರಪ್ಪ ಲಿಂಗಪ್ಪ ಕೂಸಪ್ಪನವರು, ಮುಮ್ಮಿಗಟ್ಟಿ	1010=00
ಎಸ್.ವಿ. ವಿಶ್ವೇಶ್ವರಯ್ಯ, ಅಮ್ಮಸಂದ್ರ	1001=00
ಸರಕಾರಿ ನೌಕರರ ಸಹಕಾರಿ ಬ್ಯಾಂಕ್, ಧಾರವಾಡ	1001=00
ಪ್ರೇಮಾ ದ್ಯಾಮಣ್ಣನವರ, ಧಾರವಾಡ	1001=00
ನಾಗವ್ವ ವೀರಪ್ಪ ಹೊಂಗಲ	1001=00
ಆರ್. ಆರ್. ಮುಂಡರಗಿ, ಕೊಪ್ಪಳ	1001=00
ಸುಜಯಾದೇವಿ ಮಹಾಲಿಂಗಯ್ಯ, ಬೆಂಗಳೂರು	1 ಫ್ಯಾನ್
ಜಯಮ್ಮ ಗುರುಸಿದ್ಧಯ್ಯ, ಬೆಂಗಳೂರು	1 ಫ್ಯಾನ್

ವಿಶ್ವಕಲ್ಯಾಣ ಮಿರ್ಷ ಖಾತೆಗೆ ಪುಸ್ತಕ ಪ್ರಕಟಣೆಗಾಗಿ

ಶರಣರುಗಳಾದ:

ಪ್ರಮೀಳಾ ಮೂಗಪ್ಪ ತಡಸದ, ಹುಬ್ಬಳ್ಳಿ	11,000=00

ಸುಮಿತ್ರಾ ಮೃತ್ಯುಂಜಯ ಕುರುವತ್ತಿ, ಹುಬ್ಬಳ್ಳಿ	11,000=00
ಮಧುಮತಿ ಬಸವರಾಜ ಜಾಗೀರದಾರ, ಲಕ್ಷ್ಮೀಪುರಂ	11,000=00
ಗುರು ಕಾಣಿಕೆ- ಸುವರ್ಣಮ್ಮ ಪಂಚಾಕ್ಷರಪ್ಪ, ಭದ್ರಾವತಿ	3001=00

ಬೆಂಗಳೂರಿನ ಬಸವ ಮಂಟಪದಲ್ಲಿ ಭಾನುವಾರ ಪ್ರಾರ್ಥನಾ ನಂತರ ನಡೆಯುವ ಗಣ ಪ್ರಸಾದ ದಾಸೋಹಕ್ಕೆ ಜೂನ್ ತಿಂಗಳಲ್ಲಿ 1500 ರೂ ಕಾಣಿಕೆ ಸಲ್ಲಿಸಿದವರು

1. 3-6-2001. ಶರಣ. ಬಿ.ಎನ್. ನಂಜುಂಡ, ಬೆಂಗಳೂರು
2. 10-6-2001. ಶರಣೆ. ಶಕುಂತಲಾ ಪುಟ್ಟಸಿದ್ಧಪ್ಪ, ಬೆಂಗಳೂರು [2500=00]
   (43ನೆಯ ವಿವಾಹ ವಾರ್ಷಿಕೋತ್ಸವದ ನಿಮಿತ್ತ)
3. 17-6-2001. ಶರಣೆ. ಗಂಗಲಕ್ಷ್ಮಮ್ಮ, ಬೆಂಗಳೂರು
   ದಿವಂಗತ ಪತಿ ಕೃಷ್ಣಪ್ಪನವರ ಸ್ಮರಣಾರ್ಥ ಶರಣ ಗಣಾರಾಧನೆ
4. 17-6-2001. ಶರಣೆ. ಹೇಮಲತಾ, ಬೆಂಗಳೂರು
   ಲಿಂ॥ ತಂದೆ ಶಿವನಂಜಪ್ಪನವರ ಸ್ಮರಣಾರ್ಥ ಶರಣ ಗಣಾರಾಧನೆ
5. 24-6-2001. ಶರಣ. ಬಿ. ಜಯದೇವ, ಬೆಂಗಳೂರು.

ಬಸವ ಧರ್ಮ ಪೀಠದ ದಾಸೋಹ ನಿಧಿಗೆ 1111=00 ರೂ ಸಲ್ಲಿಸಿದ ಶರಣ ಬಂಧುಗಳು

ವಿಶೇಷ ಸೂಚನೆ:

1.ವಿಶೇಷವಾದ ಏನಾದರೂ ಕಾರಣ ಸೂಚಿಸಿ ದಾಸೋಹ ನಿಧಿಗೆ ಕಾಣಿಕೆ ಕೊಟ್ಟವರು, ಪೂಜೆ-ದಾಸೋಹದ ದಿನಾಂಕ ತಿಳಿಸಬೇಕು. ಕೆಲವರು ದಿನಾಂಕ ಕೊಡುವುದನ್ನು ಮರೆತಿರುತ್ತಾರೆ. ಆದ್ದರಿಂದ ಈ ತಿಂಗಳಿಂದ ದಾಸೋಹಿಗಳ ಹೆಸರಿನ ಪಕ್ಕ ಅವರು ಸೂಚಿಸಿದ ದಿನಾಂಕ ಕೊಡಲಾಗುವುದು. ಯಾರು ದಿನಾಂಕ ಕೊಡಲು ಮರೆತಿದ್ದಾರೋ ಅವರ ಹೆಸರಿನ ಮುಂದೆ ★ ಚಿಹ್ನೆ ಹಾಕಿರಲಾಗುವುದು. ಆದ್ದರಿಂದ ಅವರು ಪತ್ರ ಬರೆದು ಅವರ ಹೆಸರು ಮುದ್ರಣಗೊಂಡ ಸಂಚಿಕೆಯ ವಿವರ ನೀಡಿ ದಿನಾಂಕವನ್ನು ತಿಳಿಸಬೇಕು.

2. ವಿಶ್ವಕಲ್ಯಾಣ ಮಿರ್ಷ, ಬೆಂಗಳೂರು, ಅಕ್ಕಮಹಾದೇವಿ ಆಶ್ರಮ, ಧಾರವಾಡ, ಬಸವ ಧರ್ಮ ಪೀಠ, ಕೂಡಲ ಸಂಗಮ ಈ ಸಂಸ್ಥೆಗಳಿಗೆ 1000=00 ಮತ್ತು ಮೇಲೆ ಕಾಣಿಕೆ ಕೊಟ್ಟ ದಾಸೋಹಿಗಳಿಗೆ ಕಲ್ಯಾಣ ಕಿರಣಕ್ಕೆ ಗೌರವ ಚಂದಾದಾರರನ್ನಾಗಿ ಮಾಡಿಕೊಂಡು ಪತ್ರಿಕೆ ಕಳಿಸಲಾಗುವುದು. ಒಂದು ವೇಳೆ ಪತ್ರಿಕೆ ಬರದೆ ಇದ್ದರೆ ನೆನಪಿನ ಓಲೆ ಬರೆದರೆ ಸಂಚಿಕೆಯನ್ನು ಕಳಿಸಲಾಗುವುದು.

3. ಈಗಾಗಲೇ ಒಂದು ಪ್ರತಿ ಬರುತ್ತಿದ್ದು ಪುನಃ ಮತ್ತೊಂದು ಬಂದರೆ ಒಂದು ಸಂಚಿಕೆಯ ಮೇಲಿರುವ ಕ್ರಮ ಸಂಖ್ಯೆ ತಿಳಿಸಿ, ಕಳಿಸದೆ ಇರಲು ತಿಳಿಸಿರಿ. ಅಥವಾ ಒಂದು ಸಂಚಿಕೆಯನ್ನು ತಿರಸ್ಕರಿಸಿರಿ. ಆಗ ರದ್ದು ಮಾಡಲಾಗುವುದು. ಕವರ್ ಸಹಿತ ಸಂಚಿಕೆ ವಾಪಸ್ಸು ಬರುವುದರಿಂದ ಕ್ರಮಸಂಖ್ಯೆ ನೋಡಿ ರದ್ದು ಮಾಡಲು ಸುಲಭವಾಗುವುದು.

ಶರಣರುಗಳಾದ :

1. ರುದ್ರಪ್ಪ, ರಾಜಾಜಿ ನಗರ, ಬೆಂಗಳೂರು (★)
2. ನಾಗವೇಣಿ ನವಿಲೇಶ್, ಶಿವಮೊಗ್ಗ (ಅಕ್ಟೋಬರ್ 19)
3. ಬಸವಸಿದ್ದೇಶ, ಶಿವಮೊಗ್ಗ (ಮಾರ್ಚ್ 16)


4. ಶೈಲಾ ಶಾಂತಕುಮಾರ್, ಶಿವಮೊಗ್ಗ (ಅಕ್ಟೋಬರ್ 19)
5. ಶಂಕರ್ S/o ತಮ್ಮಣ್ಣ ಗೌಡ, ಯಲಗುಂದ (ಅಕ್ಟೋಬರ್ 26)
6. ದೊಡ್ಡಕ್ಕ ಈರಕ್ಯಾತಪ್ಪ ದ್ಯಾವನಾನಹಳ್ಳಿ (ಏಪ್ರಿಲ್ 5)
7. ಎಸ್. ಎಂ. ಶಿವರುದ್ರಪ್ಪ S/o ಮಲ್ಲೇಗೌಡ, ಸಿದ್ದಾಪುರ (ಸೆಪ್ಟಂಬರ್ 28)
8. ಟ್ರಾಕ್ಟರ್ ರಂಗಣ್ಣ S/o ಹನುಮಂತಪ್ಪ, ಚಿಕ್ಕತಿಮ್ಮನಹಳ್ಳಿ (ಜೂನ್ 1)
9. ಚಿಕ್ಕನಗಿರಿಯಪ್ಪ S/o ಜಯಣ್ಣ, ಚಿಕ್ಕತಿಮ್ಮನಹಟ್ಟಿ (ಜನವರಿ 13)
10. ಭರಮಗೊಂಡ ಸೋಮಗೊಂಡ ಪಾಟೀಲ್, ನೀಲಜಿ (ಜೂನ್ 1)
11. ವಿರುಪಾಕ್ಷಬಾಬು ದೇಸಾಯಿ, ನೀಲಜಿ (ನವೆಂಬರ್ 28)
12. ಶಿವಾಜಿ ನೀಲಪ್ಪ ಅರಬೋಳೆ, ನೀಲಜಿ (ಶಿವಾಜಿ ಜಯಂತಿ)
13. ಭರಮಗೊಂಡ ಕಲಗೊಂಡ ಪಾಟೀಲ್, ನೀಲಜಿ (ಆಗಸ್ಟ್ 1)
14. ಜಿ.ಜಿ. ಪಾಟೀಲ್, ಕೂಡಲ ಸಂಗಮ (ಮೇ 17)
15. ರವೀಂದ್ರ ವಿಶ್ವನಾಥ ಕಥಕ್ಕಳಿ, ಗಡಹಿಂಗ್ಲಾಜ್ (★)
16. ವಿಮಲಾ ಧರ್ಮರಾಜ ನೇಕಾರ, ಧಾರವಾಡ (★)
17. ವಿಜಯಲಕ್ಷ್ಮಿ ರವಿರಾಜ ಕುರಬೇಟ್, ಧಾರವಾಡ (★)
18. ಗೌರಮ್ಮ ಮಲ್ಲಪ್ಪ ಕೊಲ್ಲಾಪುರ, ಹುಬ್ಬಳ್ಳಿ (★)
19. ಬಸಪ್ಪ ಭೀಮಪ್ಪ ಮೊರಬದ, ಧಾರವಾಡ (ನವೆಂಬರ್ 30)
20. ಬಸವರಾಜೇಶ್ವರಿ ವೀರಣ್ಣ ನಾಗೂರ್, ಧಾರವಾಡ (★)
21. ಎಸ್. ವಿ. ವೀರಾಪೂರ್, ಧಾರವಾಡ (ಜುಲೈ 26)
22. ಎಸ್. ಐ. ಭದ್ರಾಪೂರ್, ಧಾರವಾಡ (ಮಾರ್ಚ್ 20)
23. ಮಮತಾ ಪ್ರಭುಸ್ವಾಮಿ, ಧಾರವಾಡ (★)
24. ಸುಮಿತ್ರಾ ಮೃತ್ಯುಂಜಯ ಕುರುವತ್ತಿ, ಹುಬ್ಬಳ್ಳಿ (ಜೂನ್ 6)
25. ಸರೋಜನಿ ಮನೋಹರ ಸಾವಳಗಿ, ಧಾರವಾಡ (ಅಕ್ಟೋಬರ್ 5)
26. ಶರಣಮ್ಮ ಶಿವನಗೌಡ ನಾಡಗೌಡ, ಹುಬ್ಬಳ್ಳಿ (ಮೇ 9)
27. ರತ್ನಾ ಪಾಟೀಲ್ ಕುಲಕರ್ಣಿ, ಪೂನಾ (★)
28. ದಾಕ್ಷಾಯಿಣಿ ಚಂದ್ರಶೇಖರ ಹಾತರಕಿ, ಧಾರವಾಡ (ಬಸವ ಜಯಂತಿ)
29. ಎನ್. ಜಿ. ಅಂಗಡಿ, ಧಾರವಾಡ (★)
30. ದಾಕ್ಷಾಯಿಣಿ ಯಲ್ಲಪ್ಪ ನವಲಗುಂದ, ಧಾರವಾಡ (ಆಗಸ್ಟ್ 30)
31. ಪಾರ್ವತಮ್ಮ ಮತ್ತು ಮಕ್ಕಳು, ತಿಂಡ್ಲು (ಜೂನ್ 25)
32. ಎಸ್. ಮಹಾದೇವಪ್ಪ, ಬೆಂಗಳೂರು (ಮೇ 20)
33. ಮುನಿಯಮ್ಮ ನಂಜಪ್ಪ, ತಿಂಡ್ಲು (ಫೆಬ್ರವರಿ 11)
34. ಎನ್. ಕೆ. ಮಹಾಂತೇಶ್, ನ್ಯಾಯದ ಗುಂಟೆ (★)
35. ಡಿ. ರಾಮಣ್ಣ S/o ದೊಡ್ಡಣ್ಣ, ಚಿಕ್ಕತಿಮ್ಮನಹಟ್ಟಿ (ಆಗಸ್ಟ್ 20)
36. ಚಿಕ್ಕಲಿಂಗಪ್ಪ S/o ಚಿಕ್ಕಣ್ಣ, ನ್ಯಾಯದ ಗುಂಟೆ (ಸೆಪ್ಟಂಬರ್ 4)

(ಮುಂದುವರಿಯುವುದು)

ಈ ಎಲ್ಲ ಧನ ದಾಸೋಹಿಗಳಿಗೆ ಸೃಷ್ಟಿಕರ್ತ ಲಿಂಗದೇವ, ಧರ್ಮಕರ್ತ ಬಸವಣ್ಣನವರು ಆಯುರಾರೋಗ್ಯ ಭಾಗ್ಯ ಸಕಲ ಸಂಪದವನ್ನು ಅನುಗ್ರಹಿಸಲೆಂದು ಹಾರೈಸುತ್ತೇವೆ.

20-6-2001

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ



ಹುಬ್ಬಳ್ಳಿಯ ನವನಗರಕ್ಕೆ ಭಕ್ತಿಪೂರ್ವಕವಾಗಿ ಸ್ವಾಗತಿಸಿ
ಗುರುದ್ವಯರನ್ನು ಮೆರವಣಿಗೆಯಲ್ಲಿ ಕರೆತರಲಾಗುತ್ತಿದೆ.

ಕಲ್ಯಾಣ ಕಿರಣ CPMG/KA/BGW-50 ಜುಲೈ -2001
R.NO. 19980/70 WPP (W) - 17



ನವನಗರ ಮುಕ್ತಾಯ ಸಮಾರಂಭದಂದು
ಉಭಯ ಮಹಿಳಾ ಜಗದ್ಗುರುಗಳಿಗೆ ಮಾಲಾರ್ಪಣೆ ಮತ್ತು ಪುಷ್ಪವೃಷ್ಟಿ